# STUDIES
## IN THE
# SCRIPTURES

"The Path of the Just is as the Shining Light,
Which Shineth More and More
Unto the Perfect Day"

**ಸಂಪುಟ 6**

SERIES VI

# ನೂತನ ಸೃಷ್ಟಿ

## THE NEW CREATION
(Kannada)

**ಹೀಗಿರಲಾಗಿ ಇಂದಿನಿಂದ ನಾವು ಯಾರನ್ನೂ ಶರೀರ ಸಂಬಂಧವಾಗಿ
ಅರಿತುಕೊಳ್ಳುವುದಿಲ್ಲ; ಕ್ರಿಸ್ತನನ್ನು ಕೂಡ ನಾವು ಶರೀರ ಸಂಬಂಧವಾಗಿ
ತಿಳಿದಿದ್ದರೂ ಇನ್ನು ಮುಂದೆ ಆತನನ್ನು ಹಾಗೆ ತಿಳುಕೊಳ್ಳುವುದಿಲ್ಲ.
ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು.
ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು. 2 ಕೊರಿಂಥ. 5:16, 17.**

## To the King of Kings and Lord of Lords

IN THE INTEREST OF
HIS CONSECRATED SAINTS,
WAITING FOR THE ADOPTION,

--AND OF--

"ALL THAT IN EVERY PLACE CALL UPON THE LORD,"
"THE HOUSEHOLD OF FAITH,"

--AND OF--

THE GROANING CREATION, TRAVAILING AND WAITING FOR THE
MANIFESTATION OF THE SONS OF GOD,

# THIS WORK IS DEDICATED.

---

" To make all see what is the fellowship of the mystery which from the
beginning of the world hath been hid in God." "Wherein He hath
abounded toward us in all wisdom and prudence, having
made known unto us the mystery of His will, accord-
ing to His good pleasure which He hath pur-
posed in Himself; that in the dispensation
of the fulness of the times He
might gather together in one
all things, under
Christ."
Eph. 3:4,5,9;1:8-10

---

Written in 1904 by Pastor Russell

# ನೂತನ ಸೃಷ್ಟಿ

## *"The New Creation"*

### ಗ್ರಂಥಕರ್ತನ ಮುನ್ನುಡಿ THE AUTHOR'S FOREWORD

ದೇವರ ಪ್ರತಿಯೊಬ್ಬ ಸೇವಕನ ಹೆಚ್ಚಾದ ಕೆಲಸವು ಕತ್ತಲೆಯಲ್ಲಿಯೇ ನಡೆಯುತ್ತದೆ ಅಂದರೆ, ಒಂದು ಸುಂದರವಾದ ರತ್ನಗಂಬಳಿಯನ್ನು ನೇಯುವವನಂತೆ ನಾವು ಅದರ ಹಿಂಬದಿಯಲ್ಲಿ ನಿಂತಿದ್ದು ನಮ್ಮ ಶ್ರಮದ ಪ್ರತಿಫಲವನ್ನು ಖುದ್ದಾಗಿ ನೋಡುತ್ತಾ ಮತ್ತು ಕರ್ತನು ಸೂಕ್ತ ಸಮಯದಲ್ಲಿ "ಒಳ್ಳೆಯದನ್ನೇ ಮಾಡಿರುವೆ" ಎಂದು ನಮಗೆ ಹೇಳುವನೆಂದು ನಂಬಿರುವಾಗ ಶ್ರಮದ ಫಲವನ್ನು ಕಂಡುಕೊಳ್ಳುತ್ತೇವೆ. "ನಾನು ಎಚ್ಚೆತ್ತಾಗ ನಿನ್ನ ಸ್ವರೂಪ ದರ್ಶನದಿಂದ ತೃಪ್ತನಾಗಿರುವೆನು" (ಕೀರ್ತನೆ 17:15).

ಆದಾಗ್ಯೂ, ದೇವರು ತನ್ನ ಮಹಾ ಕೃಪೆಯಿಂದ ಈ ಸಂಪುಟದ ಪ್ರಭಾವವು ಲೋಕದ ವಿವಿಧ ಭಾಗಗಳಲ್ಲಿರುವ ದೇವಜನರ ಮೇಲೆ ಬೀರುವಂತೆ ನಮ್ಮನ್ನು ಪ್ರೋತ್ಸಾಹಿಸಿದ್ದಾನೆ. ಅನೇಕರು ಸಭೆಗೆ ಕೊಟ್ಟ ದೇವರ ವಾಕ್ಯದಲ್ಲಿ ವಾಗ್ದಾನ ಮಾಡಲ್ಪಟ್ಟಿರುವ ನ್ಯಾಯನಿರ್ಣಯತೆ, ಪವಿತ್ರತೆ ಮತ್ತು ವಿಮೋಚನೆಗಳನ್ನು ಉತ್ತಮವಾಗಿ ಅರ್ಥಮಾಡಿಕೊಂಡು ಅವುಗಳಿಂದ ದೊರೆಯುವ ಆಶೀರ್ವಾದಗಳನ್ನು ಹೆಚ್ಚಾಗಿ ಹೊಂದುತ್ತಿದ್ದಾರೆಂದು ತಿಳಿದು ನಮಗೆ ಬಹಳ ಸಂತೋಷವೆನಿಸುತ್ತದೆ. ಗಂಡ–ಹೆಂಡತಿ, ತಂದೆ–ತಾಯಂದರಿಗೆ ಮತ್ತು ಮಕ್ಕಳಿಗೆ ಶಾಂತಿಯ ಮಾರ್ಗಗಳು, ನೀತಿವಂತಿಕೆ, ಮತ್ತು ಕೃಪೆಯಲ್ಲಿ ಬೆಳೆಯುವಿಕೆ ಈ ವಿಷಯಗಳಲ್ಲಿ ಅನೇಕರು ನಮಗೆ ತಿಳಿಸಿದ್ದಾರೆ. ಇನ್ನೂ ಅನೇಕರು ನಮಗೆ ಸಭಾ ಹಿರಿಯರ, ಡೀಕನರುಗಳ ಮತ್ತು ಇತರ ಧಾರ್ಮಿಕ ನಾಯಕರುಗಳ ವಿಷಯವಾಗಿ ದೇವರ ವಾಕ್ಯದಲ್ಲಿನ ಕ್ರಮಾಗತಿಗಳ ಬಗ್ಗೆ, ಅವರ ಕರ್ತವ್ಯಗಳು, ನಿರ್ಬಂಧಗಳು ಮತ್ತು ಸೌಕರ್ಯಗಳ ಬಗ್ಗೆ ದೊರೆತ ಹೆಚ್ಚಿನ ಆಶೀರ್ವಾದ ಮತ್ತು ನೆರವಿನ ಬಗ್ಗೆ ನಮಗೆ ತಿಳಿಸಿದ್ದಾರೆ. ಒಳ್ಳೆಯ ಕಾರ್ಯಗಳು ದೇವರ ಮಾರ್ಗದರ್ಶನದಲ್ಲಿ ಕರ್ತನ ಸ್ತೋತ್ರಕ್ಕಾಗಿ ಮತ್ತು ಆತನ ಜನರ ಸಾಂತ್ವನ ಹಾಗೂ ಆತ್ಮೋನ್ನತಿಯು ಉತ್ತಮ ರೀತಿಯಲ್ಲಿ ಸಾಗುತ್ತಿರುವುದಕ್ಕಾಗಿ ನಾವು ಈ ಸಂಗತಿಗಳ ಬಗ್ಗೆ ಬಹಳ ಉಲ್ಲಾಸಗೊಳ್ಳುತ್ತೇವೆ.

ಈ ಸಂಪುಟವನ್ನು ಬರೆದಾಗಿನಿಂದ ದೇವರ ಮಹಾ ಒಡಂಬಡಿಕೆಗಳ ಮೇಲೆ ಪ್ರಕಾಶವು ಇನ್ನೂ ಸ್ಪಷ್ಟವಾಗಿ ಬೆಳಗುತ್ತಿರುವ ಬಗ್ಗೆ ನಾವು ನಿಮ್ಮ ಗಮನವನ್ನು ಸೆಳೆಯ ಬಯಸುತ್ತೇವೆ. ಧರ್ಮಶಾಸ್ತ್ರದ ಒಡಂಬಡಿಕೆಯು 'ನೂತನ ಒಡಂಬಡಿಕೆ'ಯ ಮುನ್ಸೂಚನೆಯಾಗಿದೆ. ಇದು ಮಹಾ ಮಧ್ಯಸ್ಥಗಾರನಾದ ಕ್ರಿಸ್ತನ ಎರಡನೆ ಬರುವಿಕೆಯಲ್ಲಿ ಸ್ಥಿರಪಡಲಿದೆ. ಈ ಕ್ರಿಸ್ತನು ಸಭೆಯ ಶಿರಸ್ಸಾಗಿದ್ದು, ಕ್ರೈಸ್ತ ಸಭೆಯು ಆತನ ದೇಹವಾಗಿದೆ–ಈತನ ಪ್ರತಿರೂಪನಂತಿದೆ. ಮೋಶೆಯು ಬರೆಯುವುದೇನೆಂದರೆ "ದೇವರಾಗಿರುವ ಕರ್ತನು ನನ್ನನ್ನು ಏರ್ಪಡಿಸಿದಂತೆ ನಿಮ್ಮ ಸಹೋದರರಲ್ಲಿ ಮತ್ತೊಬ್ಬ ಪ್ರವಾದಿಯನ್ನು ನಿಮಗೆ ಏರ್ಪಡಿಸಿಕೊಡುವನು" ಎಂಬುದಾಗಿ. ಮೋಶೆಯು ಆ ಮಹಾ ಪ್ರವಾದಿಯ ಕೇವಲ ಒಂದು ನಮೂನೆ ಮಾತ್ರ. ಹಾಗೂ ಮೋಶೆ ಮಧ್ಯಸ್ಥನಾಗಿ ಪಡೆದ ಧರ್ಮಶಾಸ್ತ್ರ (ಕಟ್ಟಳೆ)ದ ಒಡಂಬಡಿಕೆಯು ಸಹಸ್ರವರ್ಷ ಯುಗದ ಕೇವಲ ಒಂದು ನಮೂನೆ ಅಥವಾ ಮುನ್ಸೂಚನೆಯಂತಿದೆ.

ಈ ಮಹಾಮಧ್ಯಸ್ಥನಾದ ಯೇಸುವನ್ನು ದೇವರು ಮೊಟ್ಟ ಮೊದಲು ಸತ್ತವರೊಳಗಿಂದ ಎಬ್ಬಿಸಿದನು. ಅಂದಿನಿಂದ ಆತನು ತನ್ನ ದೇಹವಾದ ಕ್ರೈಸ್ತ ಸಭೆಯನ್ನು ನೂತನ ಸೃಷ್ಟಿಯನ್ನಾಗಿ ಎಬ್ಬಿಸುತ್ತಲೇ ಇದ್ದಾನೆ. ಯಾವಾಗ ಕ್ರಿಸ್ತನ ಪರಿಶುದ್ಧ ದೇಹದಲ್ಲಿ ಎಲ್ಲಾ ಸಹಸದಸ್ಯರೂ ಒಂದುಗೂಡಿ ಆತನ ಪವಿತ್ರಾತ್ಮನ ಮೂಲಕ ಪವಿತ್ರಗೊಳ್ಳುತ್ತಾರೋ ಹಾಗೂ ತಮ್ಮ ಮರಣದ ಪರ್ಯಂತ ವಿಶ್ವಾಸದಲ್ಲಿ ಯೋಗ್ಯರಾಗಿ ಕಂಡುಬರುತ್ತಾರೋ ಅವರೆಲ್ಲರೂ ಈ ಪ್ರಾಪಂಚಿಕ ಸ್ಥಿತಿಯಿಂದ ದೇವರ ಶಕ್ತಿಯ ಮೇರೆಗೆ ಯಾಜಕನಾದ ಮೆಲ್ಕಿಜೆದೇಕನ ತರಹದ ಕ್ರಿಸ್ತ ಯೇಸುವಿನ ದೇಹದಲ್ಲಿ ಪರಲೋಕಸ್ಥಿತಿ ಹೊಂದಿದವರಾಗಿ ಎತ್ತಲ್ಪಡುವುದು ಪೂರ್ಣಗೊಳ್ಳುವುದು. ನೂತನ ಒಡಂಬಡಿಕೆಯ ಈ ಮಹಾಯಾಜಕನು ತನ್ನ ಸಿಂಹಾಸನದಲ್ಲಿ ಸಕಲ ದೈವಿಕ ಶಕ್ತಿಗಳೊಡನೆ ಆಸನಾರೂಢನಾಗುವನು. ನಂತರದಲ್ಲಿ ದೇವರು ಇಸ್ರಾಯೇಲ್ಯರಿಗೆ "ಇಗೋ, ಕಾಲವು ಬಂದಾಗ ಇಸ್ರಾಯೇಲ್ಯರ ಮನೆತನದವರೊಂದಿಗೂ, ಯೂದಾಯದ ಮನೆತನದವರೊಂದಿಗೂ ಹೊಸದಾಗಿ ಒಡಂಬಡಿಕೆಯೊಂದನ್ನು ಮಾಡಿಕೊಳ್ಳುವೆನು" ಎಂದು ಮಾಡಿದ ವಾಗ್ದಾನದ ಮೇರೆಗೆ ನೂತನ ಒಡಂಬಡಿಕೆಯೊಂದನ್ನು ಮಾಡಿಕೊಳ್ಳಲಾಗುವುದು.

ಪ್ರತಿಸಂಕೇತನಾದ ಈ ಮಧ್ಯಸ್ತಗಾರನು ಆದಾಮನ ಸಂತಾನದವರಿಗಾಗಿ ದೇವರ ನ್ಯಾಯಕ್ಕೆ ಸಂಪೂರ್ಣವಾಗಿ ಮತ್ತು ಸರ್ವಕಾಲಕ್ಕೂ ಈಡುಬಲಿ ಕೊಟ್ಟಮೇಲೆ ನೂತನ ಒಡಂಬಡಿಕೆಯ ಅಡಿಯಲ್ಲಿ ಸಂಪೂರ್ಣವಾದ ಅಧಿಕಾರವನ್ನು ಪಡಕೊಳ್ಳುವನು, ಮತ್ತು ಈ ರೀತಿಯಲ್ಲಿ ಆತನು ಸ್ಥಿರಗೊಂಡು ಆಶೀರ್ವಾದದಾಯಕ ಜನರ ಕಾರ್ಯವೆಸಗುತ್ತಾ ಆದಾಮನ ಸಂತತಿಯ ಸ್ವಯಿಚ್ಛೆಯಿಂದೊಡಗೂಡಿದ ಮತ್ತು ಸಂಪೂರ್ಣವಾದ ವಿಧೇಯತೆಯನ್ನು ತೋರಿದವರೆಲ್ಲರನ್ನೂ ಪೂರ್ವಸ್ಥಿತಿಗೆ ತರುತ್ತಾನೆ. ಆಗ ಕರ್ತನೊಂದಿಗೆ ಐಕ್ಯತೆ ಹೊಂದಿದವರು ಅಬ್ರಹಾಮನ ಈ ಲೋಕದ ಸಂತಾನದವರೆಂದು ಕಟ್ಟಕಡೆಯವರೆಗೂ ಎಣಿಸಲ್ಪಡುವರು. ಯುಗದ ಸಮಾಪ್ತಿಯಲ್ಲಿ ಯಾರ್ಯಾರು ವಿಶ್ವಾಸ ಮತ್ತು ವಿಧೇಯತೆಯನ್ನು ಅಭ್ಯಾಸ ಮಾಡಿಕೊಂಡವರಾಗಿದ್ದಾರೋ ಅವರೆಲ್ಲರೂ ಕರ್ತನಿಗೆ ಅಬ್ರಹಾಮನ ಸಂತಾನದವರೆಂದು ತಿಳಿದು ಬರುವುದು. "ಆ ಸಂತಾನದವರಾಗುವ ಮೂಲಕ ಈ ಲೋಕದ ಸಂತಾನವು ತಮ್ಮನ್ನೇ ಆಶೀರ್ವಾದ ಪಾತ್ರರನ್ನಾಗಿ ಮಾಡಿಕೊಳ್ಳುವುದು".

ಉದ್ದೇಶಪೂರ್ವಕವಲ್ಲದೆ ಈ ಯುಗದಲ್ಲಿ ದೇವರ ವ್ಯವಹಾರಕ್ಕಾಗಿ ಉಪಯೋಗಿಸಲ್ಪಟ್ಟ ನೂತನ ಒಡಂಬಡಿಕೆಯ ಹೆಸರು ಈ ಸುವಾರ್ತಾ ಯುಗದಲ್ಲಿಯೂ ಸಭೆಯಲ್ಲಿ ಜಾರಿಯಲ್ಲಿರುವ ಒಡಂಬಡಿಕೆಯಲ್ಲಿ ಉಪಯೋಗಿಸಲ್ಪಡುತ್ತಾ ಇದೆ. ನಮ್ಮ ಈ ಒಡಂಬಡಿಕೆಯು ನಿಜವಾಗಿಯೂ ಒಂದು ಅರ್ಥದಲ್ಲಿ ಹೊಸ ಒಡಂಬಡಿಕೆಯಂತೆ ಕಂಡುಬರುತ್ತದೆ. ಯಾಕೆಂದರೆ, ಇದು ಸೀನಾಯಿ ಪರ್ವತದ ಯೆಹೂದ್ಯ ಒಡಂಬಡಿಕೆಗಿಂತ ಭಿನ್ನವಾಗಿದೆ. ಹೀಗಾದರೂ ಇದು ನೂತನ ಒಡಂಬಡಿಕೆಯಂತಲ್ಲ. ಸಭೆಯ ಒಡಂಬಡಿಕೆಯನ್ನು "ಸಮರ್ಪಣ ಪೂರ್ವಕವಾದ ಒಡಂಬಡಿಕೆ"ಯೆಂದು ಉಲ್ಲೇಖಿಸಲಾಗಿದೆ. ಇವುಗಳನ್ನು ಮನಸ್ಸಿನಲ್ಲಿಟ್ಟು ಕೊಳ್ಳುವುದು ಈ ಸಂಪುಟದ ಓದುಗರಿಗೆ ಉಪಯುಕ್ತವಾಗಿದೆ. ಈ ಎಲ್ಲಾ ಒಡಂಬಡಿಕೆಗಳಿಗೆ ಪರಸ್ಪರ ಸಂಬಂಧವುಂಟು. ಈ ಎಲ್ಲಾ ಒಡಂಬಡಿಕೆಗಳೂ ಅಬ್ರಹಾಮನನ್ನು ಮತ್ತು ದೇವರು ಆತನೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನೇ ಸೂಚಿಸುತ್ತವೆ ಮತ್ತು ನಿರೂಪಿಸುತ್ತವೆ. ಸಭೆಯು ಅಬ್ರಹಾಮನ ಆತ್ಮಿಕ ಸಂತಾನಕ್ಕೆ ತಕ್ಕಂತೆ ವಿನ್ಯಾಸಗೊಂಡಿದೆ ಮತ್ತು ಅದು ಆಕಾಶದ ನಕ್ಷತ್ರಗಳಿಗೆ ಹೋಲಿಕೆಯಾಗಿದೆ. ಮಾನವ ಸಂತತಿಯ ಈ ಪ್ರಪಂಚವು ದೇವರ ಸಾಮರಸ್ಯಕ್ಕೆ ಒಳಗಾದಾಗ ಸಮುದ್ರ ತೀರದ ಮರಳಿನೋಪಾದಿಯಲ್ಲಿ ಅಬ್ರಹಾಮನ ಭೂಲೋಕಸಂತಾನವಾಗಿಬಿಡುತ್ತದೆ. ಆತ್ಮೀಕ ಸಂತಾನವು ಸ್ವಾಭಾವಿಕ ಸಂತಾನದ ಆಶೀರ್ವಾದದ ಕಾಲುವೆಯಂತಿದೆ.

ನ್ಯಾಯನಿರ್ಣಯದ ವಿಷಯದಲ್ಲಿ ಯಾವ ಬದಲಾವಣೆಯಾದರೂ ಇಲ್ಲ, ಆದರೆ ಇದು ವಿಕಾಸಗೊಂಡಿದೆ ಮತ್ತು ಸ್ಪಷ್ಟೀಕರಣಗೊಂಡಿದೆ. ಈ ಸಂಪುಟವನ್ನು ಇಂದು ಬರೆಯುತ್ತಿದ್ದರೆ, ಲೇಖಕನು ಭಾಷೆಯಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸವನ್ನು ಮಾಡಬಹುದಿತ್ತು. ಆದರೆ ಅದು ಅರ್ಥದಲ್ಲಿ ಆಗಲೀ, ಸಮರ್ಪಣೆಯ ಪದವನ್ನು ಅನ್ವಯಿಸುವುದರಲ್ಲಾಗಲೀ ಅಲ್ಲ.

ಜೀವನಕ್ಕೆ ಸಂಬಂದಿಸಿದ ನ್ಯಾಯಸಮರ್ಥನೆಯೇ ಬೇರೆ ಮತ್ತು ಹೆಚ್ಚುಕಡಿಮೆ ದೇವರೊಡನೆ ಸ್ನೇಹಕ್ಕೆ ಸಂಬಂಧಿಸಿದ ನ್ಯಾಯ ಸಮರ್ಥನೆಯೇ ಬೇರೆ ಎಂಬುದನ್ನು ನಾವೀಗ ಕಂಡುಕೊಳ್ಳುತ್ತೇವೆ. ಉದಾಹರಣೆಗಾಗಿ ಅಬ್ರಹಾಮನು ಮತ್ತು ಪಂಚಾಶತ್ತಮ ಪೂರ್ವದ ವಿಶ್ವಾಸಿಗಳು ದೇವರೊಂದಿಗೆ ಸ್ನೇಹಕ್ಕೆ ಮತ್ತು ಆತನೊಂದಿಗೆ ಪ್ರಾರ್ಥನೆಯ ಮೂಲಕ ಸಂಪರ್ಕ ಹೊಂದಿಕೊಳ್ಳುವುದು ಇತ್ಯಾದಿಗಳಿಗಾಗಿ ಸಮರ್ಥರಾಗಿದ್ದರು. ಆದರೆ, ಪಾಪನಿವೃತ್ತಿಯ ರಕ್ತಧಾರೆಯಾಗುವವರೆಗೂ, ಮತ್ತು ಅದು ತಂದೆ ದೇವರಿಗೆ ಅರ್ಪಿತವಾಗಿ ಆತನಿಂದ ಅಂಗೀಕರಿಸಲ್ಪಡುವವರೆಗೂ ಅವರಿಗೆ ಸಂಪೂರ್ಣವಾದ ನ್ಯಾಯನಿರ್ಣಯ ದೊರೆತು ಬರಲಿಲ್ಲ. ಅದೇ ರೀತಿಯಲ್ಲಿ ಇಂದು ದೇವರನ್ನು ಸಮೀಪಿಸುವ ಪಾಪಿಯು ನ್ಯಾಯನಿರ್ಣಯದ ಹಾದಿಯಲ್ಲಿದ್ದಾನೆ ಆತನು ಪಾಪದ ಕಡೆ ಮುಖ ಮಾಡುವದಕ್ಕಿಂತ ಹೆಚ್ಚಾದ ಕೃಪೆಯನ್ನು ಹೊಂದುವವನಾಗಿದ್ದಾನೆ.

ನಾವೊಮ್ಮೆ ಇಂತಹ ಪರಿಸ್ಥಿತಿಯಲ್ಲಿರುವ ಪಾಪಿಯೊಬ್ಬನ ಬಗ್ಗೆ ಮಾತನಾಡಿದೆವು. ಯಾಕೆಂದರೆ, ಆತನು ಕ್ರಿಸ್ತನನ್ನು ತನ್ನ ರಕ್ಷಕನನ್ನಾಗಿ ನಂಬಿದ್ದನು ಮತ್ತು ತನ್ನನ್ನೇ ಆತನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಲು ಮುಂದಾದನು. ಆ ಪಾಪಿಯ ಮನೋವೃತ್ತಿಯು ಪುರಾತನ ಕಾಲದ ಪಿತೃಗಳಂತೆ ಇರುವುದನ್ನು ನಾವು ಕಾಣುತ್ತೇವೆ. ಇದನ್ನು "ಪ್ರಾಯೋಗಿಕ ನೀತಿನಿರ್ಣಯ" ದ ಒಂದು ರೀತಿಯೆಂದು ಹೇಳಬಹುದು. ಆ ಪಾಪಿಯು ತನ್ನನ್ನು ಸಂಪೂರ್ಣವಾಗಿ ನಮ್ಮ ಮಹಾಯಾಜಕನಾದ ಯೇಸುಕ್ರಿಸ್ತನಿಗೆ ಸಮರ್ಪಿಸಿಕೊಂಡರೂ ಆತನನ್ನು ತಂದೆ ದೇವರ ಹೆಸರಿನಲ್ಲಿ ಅಂಗೀಕರಿಸಿಕೊಳ್ಳುವ ತನಕ ಅದು ಸಂಪೂರ್ಣವಾದ ಮತ್ತು ಪರಿಪೂರ್ಣವಾದ ಸಮರ್ಥನಾ ಮಟ್ಟವನ್ನು ತಲಪುವುದಿಲ್ಲ. ನಂತರ, ಕ್ರಿಸ್ತನ ಮಹಾತ್ಯಾಗದ ಉದ್ದೇಶಿತ ಅರ್ಹತೆಯ ಮರೆಯಲ್ಲಿ ಆ ಪಾಪಿಯು ಕ್ರಿಸ್ತನ ನಿಲುವಂಗಿ ಧರಿಸಿದವನಾಗಿ ಪವಿತಾತ್ಮನಿಂದ ಪುನಃ ಹುಟ್ಟಿದವನಾಗಿ ತಂದೆ ದೇವರಿಂದ ಅಂಗೀಕೃತನಾಗುತ್ತಾನೆ.

ಕ್ರಿಸ್ತನನ್ನು ಸಮಗ್ರವಾಗಿ ಆಲಿಸಿದ ಮತ್ತು ಸ್ವಲ್ಪಮಟ್ಟಿಗೆ ಆತನಲ್ಲಿ ನಂಬಿಕೆಯಿಟ್ಟ ಜನಸಮೂಹವು ಅಧೃಷ್ಟ ಶಾಲಿಗಳೆಂದೆಣಿಸಿದರೂ ಅವರು ಆತನೊಡನೆ ನಿಂತದ್ದು ಪೂರ್ಣ ನ್ಯಾಯನಿರ್ಣಯ ಎಂದು ಎನಿಸಿಕೊಳ್ಳಲಾರದು. ಯಾಕೆಂದರೆ, ಅವರು ಕ್ರಿಸ್ತನ ಹೆಜ್ಜೆ ಜಾಡನ್ನು ಅನುಸರಿಸಿದ ಆತನ ಶಿಷ್ಯರ ಒಡಂಬಡಿಕೆಗೆ ಬದ್ಧರಾಗದ ಹೊರತು ಅವರನ್ನು ಪೂರ್ಣ ಸಮರ್ಥರೆಂದು ಒಪ್ಪಿಕೊಳ್ಳಲು ಆತನು ನಿರಾಕರಿಸುತ್ತಾನೆ. ಇದಕ್ಕೆ ಕಾರಣವೇನೆಂದರೆ, ನ್ಯಾಯನಿರ್ಣಯ ಎಂಬುದು ಪ್ರತಿಯೊಬ್ಬರಿಗೆ ಒಂದು ಸಲ ಮಾತ್ರ ಬರುವುದಾಗಿದೆ. ಆದರೆ, ಆತನು ಆ ಸಮರ್ಥನೆಯನ್ನು ದುರುಪಯೋಗಪಡಿಸಿಕೊಂಡು, ನಿತ್ಯಜೀವವನ್ನು ಪಡೆದುಕೊಳ್ಳದೇ ಹೋದಲ್ಲಿ, ಆತನು ಸಮರ್ಪಣೆ ಹೊಂದದೇ ಇದ್ದುದಕ್ಕಿಂತಲೂ ಇನ್ನೂ ಹೆಚ್ಚಿನ ಧಾರುಣ ಸ್ಥಿತಿಯನ್ನು ತಲಪುತ್ತಾನೆ. ಇಂದಿನ ಸಮಯದಲ್ಲಿ ಸಮರ್ಪಣೆ ಹೊಂದದೇ ಆತ್ಮನಿಂದ ಹುಟ್ಟದೇ ಹೋದಲ್ಲಿ ಆತನು ಕ್ರಿಸ್ತನ ಸಭೆಗೆ ಸೇರಿದವನಲ್ಲ. ಆದರೆ ಕ್ರಿಸ್ತನ ತ್ಯಾಗದಲ್ಲಿ ಮತ್ತು ಆತನ ರಾಜ್ಯವು ಮಾನವ ಕುಲದ ಪ್ರತಿಯೊಬ್ಬನಿಗೂ–ಸಭೆಯನ್ನು ಒತ್ತಟ್ಟಿಗಿಟ್ಟು–ನೀಡುವ ಸಮರ್ಪಣೆಯಲ್ಲಿ ಆತನು ಸಹಾ ಪಾಲುಗಾರನಾಗುತ್ತಾನೆ. ಸಭೆಯು ದೇವರನ್ನು, ಆತನ ಮಹಿಮೆ, ಘನತೆ, ನಿತ್ಯತೆ ಮತ್ತು ದೈವಿಕ ಸ್ವಭಾವಗಳನ್ನು ಪ್ರೀತಿಸುವವರಿಗಾಗಿ ಇನ್ನೂ ಮುಕ್ತವಾದುದನ್ನು ಕಾದಿರಿಸಿದೆ. ಅನೇಕರಿಗೆ ಸಮರ್ಪಣೆಯ ವಿಷಯದ ಬಗ್ಗೆ ಈ ಅಪ್ಪಟವಾದ ವಿಶೇಷ ಲಕ್ಷಣಗಳನ್ನು ತಿಳಿಸಿ ಹೇಳುವುದು ಸಮಯೋಚಿತವೆಂದು ನಮಗೆ ಕಂಡುಬರದಿದ್ದರೂ, ದೇವರ ಯೋಜನೆಗಳ ಬಗ್ಗೆ ಇಂತಹ ಸ್ಪಷ್ಟವಾದ ಮೆಚ್ಚಿಗೆಯನ್ನು ಪಡೆದವರಾಗಿ ನಾವು ಇದನ್ನು ನೀತಿಗಾಗಿ ಹಸಿವು ಮತ್ತು ಬಾಯಾರಿಕೆ ಇರುವ ಎಲ್ಲರಿಗೂ ಎಲ್ಲೆಡೆ ಇರುವ ಸತ್ಯವೇದ ವಿದ್ಯಾರ್ಥಿಗಳಿಗೂ ಹಂಚಲು ಸಂತೋಷಿಸುತ್ತೇವೆ.

ಕರ್ತನು ಆತನ ಒಳ್ಳೆಯ ಜನರಿಗಾಗಿ ಈ ಸಂಪುಟವನ್ನು ಆಶೀರ್ವದಿಸುವುದನ್ನು ಮುಂದುವರಿಸಲಿ ಎಂಬುದು ಈ ಲೇಖಕನ ಪ್ರಾರ್ಥನೆಯಾಗಿದೆ.

**ಬ್ರೂಕ್ಲಿನ್. ಎನ್. ವೈ**
**01 ಅಕ್ಟೋಬರ್ 1916**

***ಚಾರ್ಲ್ಸ್ ಟಿ ರಸ್ಸೆಲ್***

## ಕೃತಜ್ಞತೆಗಳು

ಸತ್ಯವೇದದಲ್ಲಿರುವ ಪ್ರವಾದನೆ ಮತ್ತು ಸತ್ಯಾಂಶಗಳನ್ನು ಅನೇಕ ವಿಮರ್ಶೆ ಮತ್ತು ವ್ಯಾಖ್ಯಾನಗಳೊಂದಿಗೆ ಭಾಷಾಂತರಿಸಲು ಪ್ರೇರೇಪಣೆಯನ್ನು ದಯಪಾಲಿಸಿದ ಮಹೋನ್ನತನಾದ ಯೆಹೋವ ದೇವರಿಗೂ ಮತ್ತು ನಮ್ಮೆಲ್ಲರ ಕರ್ತನೂ, ರಕ್ಷಕನೂ ಆದ ಯೇಸು ಕ್ರಿಸ್ತನಿಗೂ ಕೃತಜ್ಞತಾ ಸ್ತೋತ್ರಗಳು.

ಈ ಪುಸ್ತಕವು ಮೂಲತಃ ಆಂಗ್ಲ ಭಾಷೆಯಲ್ಲಿ ಬರೆಯಲ್ಪಟ್ಟಿದ್ದು,
ಸಹೋದರರಾದ ಪಾಸ್ಟರ್: ಚಾರ್ಲ್ಸ್. ಟಿ. ರಸಲ್‌ರವರು (Pastor: Charles.T. Russell)
ಸತ್ಯವೇದ ಆಧಾರಿತ, ಪವಿತ್ರಾತ್ಮಪ್ರೇರಿತರಾಗಿ ಬರೆಯಲ್ಪಟ್ಟಿರುವ ಆರು ಸಂಪುಟಗಳಲ್ಲೊಂದಾದ
'ನೂತನ ಸೃಷ್ಟಿ' ಎಂಬ ಆರನೇ ಸಂಪುಟದಿಂದ ಭಾಷಾಂತರಿಸಲಾಗಿದೆ.
ಇದನ್ನು ಕನ್ನಡಕ್ಕೆ ಭಾಷಾಂತರಿಸಿದ ಸಹೋದರರಾದ ಆಸ್ವಾಲ್ಡ್ ಎಗ್ಬರ್ಟ್ ಅಮ್ಮಣ್ಣನವರಿಗೆ
ಸತ್ಯವೇದ ವಿದ್ಯಾರ್ಥಿಗಳ ಪರವಾಗಿ ಹೃದಯ ಪೂರ್ವಕ ಕೃತಜ್ಞತೆಗಳು.
ಈ ಭಾಷಾಂತರವು ಕನ್ನಡವನ್ನು ಬಲ್ಲ ಎಲ್ಲಾ ಸಹೋದರ ಸಹೋದರಿಯರಿಗೆ
ಒಂದು ವಿಶೇಷವಾದ ಕೊಡುಗೆಯಾಗಿದೆ.
ದೇವರ ನಾಮಕ್ಕೆ ಅನಂತ ಅನಂತ ಸ್ತೋತ್ರವಾಗಲಿ.

ಕಡೆಯದಾಗಿ ಇದರ ಮುದ್ರಣಕ್ಕೆ ಮುಂಚೆ ಈ ಭಾಷಾಂತರವನ್ನು
ಪರಿಷ್ಕರಿಸಿದ ಹಿರಿಯ ಸಹೋದರರಿಗೂ, ಇದಕ್ಕಾಗಿ ಸಹಕರಿಸಿದ ಅನೇಕ
ಸಹೋದರ-ಸಹೋದರಿಯರಿಗೂ ಮತ್ತು ಈ ಪುಸ್ತಕವನ್ನು ತಮ್ಮ ಕೆಲಸವೆಂದೇ
ಪರಿಗಣಿಸಿ, ಶ್ರಮಿಸಿ ಅಂದವಾಗಿ ಮುದ್ರಿಸಿಕೊಟ್ಟ ಡಾನ್ ಪ್ರಿಂಟರ್ಸ್‌ರವರಿಗೂ
ನಮ್ಮ ಹೃದಯ ಪೂರ್ವಕ ವಂದನೆಗಳು.

ಸರ್ವಶಕ್ತನಾದ ಯೆಹೋವ ದೇವರ ಆಶೀರ್ವಾದ
ಮತ್ತು
ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಕೃಪೆಯು
ಈ ಪುಸ್ತಕವನ್ನು ಓದುವವರೆಲ್ಲರೊಂದಿಗಿದ್ದು ಆ ದೈವಜ್ಞಾನವನ್ನು
ಹೊಂದಲಿ ಎಂದು ಹಾರೈಸುತ್ತೇವೆ.

## ವಿಷಯಾನುಕ್ರಮಣಿಕೆ


### ಅಧ್ಯಯನ – 1
### "ಆದಿಯಲ್ಲಿ"

ವಿವಿಧ ಆರಂಭಗಳು – ಭೂಮಂಡಲವು ಹೇಗಿದ್ದಿತು? – ಅದನ್ನು ಕ್ರಮಪಡಿಸಿದ ಸೃಷ್ಟಿಯ ವಾರ – ಯುಗಾರಂಭದ ವಿಸ್ತಾರ – ವಿಜ್ಞಾನಿಗಳ ಅಸಮರ್ಥನೀಯ ಊಹಾಪೋಹಗಳಿಗೆ ಪ್ರೊ॥ ಡಾನಾರವರ ಅಂಗೀಕಾರ – ನಾನಾ ವರ್ಗಗಳ ಮುಂದುವರಿಕೆಯು ವಿಕಾಸವಾದವನ್ನು ನಿರಾಕರಿಸುತ್ತದೆ – ಶ್ರೀ ಡಾರ್ವಿನ್‌ರವರ ಪಾರಿವಾಳಗಳು – ವಿಶ್ವೋತ್ಪತ್ತಿಯ ವಿಚಾರ ಸರಣಿ – ಪ್ರೊಫೆಸರ್‌ಗಳಾದ ಸಿಲ್ಲಿಮನ್ ಮತ್ತು ಡಾನಾ ಇವರ ನಿಷ್ಠಾವಂತ ಸಾಕ್ಷ್ಯಗಳು – ಮೊಟ್ಟಮೊದಲ ಸೃಷ್ಟಿಯ ಯುಗಾರಂಭದ ದಿನ– ಎರಡನೆಯದು – ಮೂರನೆಯದು – ನಾಲ್ಕನೆಯದು – ಐದನೆಯದು – ಆರನೆಯದು – ಏಳನೆಯ ಯುಗಾರಂಭ ದಿನದ ಅರುಣೋದಯದಲ್ಲಿ ಸೃಷ್ಟಿಸಲ್ಪಟ್ಟ ಮಾನವ ಈ ಭೂಲೋಕದ ಒಡೆಯ – Sir J.W. Dawson L L D. F.R.S. ರವರ Meeting Places of Geology and History ಇದರ ಸಾರಾಂಶ– ಸೃಷ್ಟಿವಾರದ ಏಳನೆಯ ಯುಗಾರಂಭದ ದಿನ – ಅದರ ವಿಸ್ತಾರ – ಅದರ ವಿಶ್ರಾಂತಿ–ಅದರ ಉದ್ದೇಶ ಮತ್ತು ಪರಿಣಾಮ – ಸಂಭ್ರಮದ ಜ್ಯೂಬಿಲಿ, ಅದರ ಅಂತ್ಯದಲ್ಲಿ ಸಲ್ಲಬೇಕಾದ ಲೌಕಿಕ ಮತ್ತು ಅಲೌಕಿಕ ಸಂಗತಿಗಳು. . . . . . . . . . . . . . . . . . . . . . . . . . . . . . . . 9

### ಅಧ್ಯಯನ – 2
### ನೂತನ ಸೃಷ್ಟಿ

ನೂತನ ಸೃಷ್ಟಿಯು ಇತರ ಸಂಗತಿಗಳಿಂದ ವಿಭಿನ್ನವಾದುದು, ಹಾಗೂ ವೈಶಿಷ್ಟ್ಯಪೂರ್ಣವಾದುದು – ಸುಮಾರಾಗಿ ಬೇರೆಯವು ಗಳಿಂದಲ್ಲದೆ ಮಾನವ ಸೃಷ್ಟಿಯಿಂದಲೇ ಆಯ್ದುಕೊಂಡಿದ್ದು ಏಕೆ? – ಇದನ್ನು ಆಯ್ದುಕೊಂಡದ್ದರ ಉದ್ದೇಶ ಇಂದಿನ ಹಾಗೂ ಮುಂದಿನ ಸೇವಾಕಾರ್ಯಗಳು – ಯಾವ ರೀತಿಯಲ್ಲಿ ಪಡೆದುಕೊಂಡಿದ್ದು ಮತ್ತು ನೂತನ ಸ್ವಭಾವಕ್ಕೆ ಜನಿಸಿದ್ದು – ಎಲ್ಲಾ ಸದಸ್ಯರುಗಳೊಂದಿಗೆ, ನಾಯಕ, ಮುಖ್ಯಸ್ಥ ಮತ್ತು ಮದಲಿಂಗನೊಡನೆ ನಿಕಟ ಸಂಬಂಧ – ಸದಸ್ಯತ್ವದ ಬೆಳವಣಿಗೆ ಮತ್ತು ಪರೀಕ್ಷೆ – ಆರನೆಯ ಅಥವಾ ಆಧ್ಯಾತ್ಮಿಕ ಪ್ರಜ್ಞೆ–ಆಧ್ಯಾತ್ಮಿಕ ಸಂಗತಿಗಳನ್ನು ಗ್ರಹಿಸುವ ಪ್ರಜ್ಞೆ– ಮುಖ್ಯಸ್ಥನಿಗೆ ನಿಷ್ಠೆಯುಳ್ಳವರಾಗುವಂತೆ ಮತ್ತು ಸಹೋದರರಲ್ಲಿ ಯಾರಿಂದಲೂ ಬದಲಾಗದಂತೆ ನೂತನ ಸೃಷ್ಟಿಯನ್ನು ಯಾವ ಹೆಸರಿನಿಂದ ಕರೆಯಬೇಕು? . . . . . . . . . . . . . . . . . . . . . . . . . 33

### ಅಧ್ಯಯನ – 3
### ನೂತನ ಸೃಷ್ಟಿಯ ಕರೆ

ಕರೆಯಲ್ಪಟ್ಟವರು ಮಾತ್ರವೇ ಅರ್ಹರು – ಈ ಮಹಾ ರಕ್ಷಣೆಯ ಕರೆಯು ಉಂಟಾದಾಗ – ಪಶ್ಚಾತ್ತಾಪಕ್ಕಾಗಿ ಕರೆಯೇ ಹೊರತು ದೈವ ಸ್ವಭಾವಕ್ಕಾಗಿ ಕರೆಯಲ್ಲ – ಯೆಹೂದ್ಯರ ಕರೆ –ಸುವಾರ್ತೆಯ ಕರೆ – ಮಹಾ ಜ್ಞಾನಿಗಳನ್ನೂ, ಬುದ್ಧಿವಂತರನ್ನು, ಶಕ್ತಿವಂತರನ್ನು ಯಾಕೆ ಹೆಚ್ಚಾಗಿ ಕರೆಯಲಿಲ್ಲ – ಉತ್ಕರ್ಷೆಯು ನಿಜವಾದ ನಮ್ರತೆಯ ಮೇಲಿನ ಕಂತಾಗಿದೆ – ಗುಣನಡತೆಯು ಕರೆಯ ಒಂದು ಶರತ್ತಾಗಿದೆ – ಧರ್ಮಯುಗದಲ್ಲಿ ಪ್ರಪಂಚವನ್ನು ಕರೆಯಲಾಗುವುದಿಲ್ಲ, ಆದರೆ ಅವರಿಗೆ ಅಪ್ಪಣೆ ಮಾಡಲಾಗುವುದು – ಸುವಾರ್ತಾ ಕರೆಯ ಸಮಯವು ಮಿತಿಯುಳ್ಳದ್ದಾಗಿದೆ – ನೂತನ ಸೃಷ್ಟಿಯನ್ನು ತಂದೆಯು ಕರೆಯುತ್ತಾನೆ ಇಲ್ಲವೆ ಸೆಳಕೊಳ್ಳುತ್ತಾನೆ – ಕ್ರಿಸ್ತನು ನಮ್ಮ ಜ್ಞಾನ – ಕ್ರಿಸ್ತನು ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನು – ನಿಜವಾದ ಮತ್ತು ಹಾಗೆಂದು ಎಣಿಸಲ್ಪಟ್ಟ ನೀತಿನಿರ್ಣಯವು ಭಿನ್ನವಾಗಿದೆ – ನೂತನ ಸೃಷ್ಟಿಗೆ ನೀತಿನಿರ್ಣಯದ ಅವಶ್ಯಕತೆ ಇದೆಯೋ? –ನೀತಿನಿರ್ಣಯದ ಆಧಾರ–ಪುರಾತನಪಿತೃಗಳ ನ್ಯಾಯನಿರ್ಣಯವು ನಮ್ಮ ನ್ಯಾಯನಿರ್ಣಯತೆಗಿಂತ ವಿಭಿನ್ನವಾದುದು – ಧರ್ಮಯುಗ ಕಾಲದ ನ್ಯಾಯನಿರ್ಣಯತೆ – ಕ್ರಿಸ್ತನು ನಮ್ಮನ್ನು ಶುದ್ಧಿಪಡಿಸುವವನಾಗಿದ್ದಾನೆ – ಧರ್ಮಯುಗದ ಕಾಲದಲ್ಲಿ ಶುದ್ಧಪಡಿಸುವಿಕೆ – ಲೇವಿಯ ಕುಲದ ಎರಡು ನಿರ್ಧಿಷ್ಟವಾದ ಸಮರ್ಪಣೆಗಳು – ಭೂಮಿಯ ಬಾಧ್ಯತೆ ಇರುವುದಿಲ್ಲ – ಮಹಾ ಸಮೂಹ – ಎರಡು ಭಾಗಗಳ ಪವಿತ್ರ ಪಡಿಸುವಿಕೆ – ಮನುಷ್ಯರ ಭಾಗ – ದೇವರ ಭಾಗ – ಪ್ರಕೃತಿ ಸ್ವಭಾವಕ್ಕೆ ಅನುಸಾರವಾಗಿ ಅನುಭವಗಳು ಬದಲಾಗುತ್ತವೆ – ಶುದ್ಧೀಕರಣವು ಸಮರ್ಪಕತೆಯೂ ಅಲ್ಲ, ಭಾವೋದ್ವೇಗವೂ ಅಲ್ಲ – ನಿಮ್ಮ ಎಲ್ಲಾ ರೋಗಗಳನ್ನು ವಾಸಿಮಾಡುವವನು ಯಾರು? –ಕೃಪಾಸನದ ಅಗತ್ಯತೆ – ನೀತಿನಿರ್ಣಯವು ಯಾವ ರೀತಿಯಲ್ಲಿ ಶುದ್ಧೀಕರಣದಲ್ಲಿ ಒಂದುಗೂಡುತ್ತದೆ – "ಮಹಾ ಕರೆಯುವಿಕೆ'ಯ ಮುಕ್ತಾಯದಲ್ಲಿ ಪ್ರತಿಷ್ಠೆಪಡಿಸುವುದು– ಸಭೆಯ ರಕ್ಷಣೆ ಅಥವಾ ಬಿಡುಗಡೆ. . . . . . . . . . . 46

### ಅಧ್ಯಯನ – 4
### ಪೂರ್ವ ನಿರ್ಧಾರಿತ ನೂತನ ಸೃಷ್ಟಿ

ಆಯ್ಕೆಯ ಸಾಮಾನ್ಯ ದೃಷ್ಟಿಕೋನ – ಸರಿಯಾದ ಆಲೋಚನೆ – ಆಯ್ಕೆಯಾಗದವರಿಗೆ ಯಾವ ಹಾನಿಯೂ ಇಲ್ಲ – ಆಯ್ಕೆಯಾದವರು ಮತ್ತು ವಾಸ್ತವಿಕವಾಗಿ ಆಯ್ಕೆಯಾದವರು ಇವರ ನಡುವಣ ವ್ಯತ್ಯಾಸ – "ಮರಣಕರವಾದ ಪಾಪ ಉಂಟು" – ಜೀವಸ್ವರೂಪನಾದ ದೇವರ ಕೈಯಲ್ಲಿ ಬೀಳುವ ಭಯಾನಕ ಸಂಗತಿ – ಮಹಾ ಸಮೂಹ– ಕುರಿಯ ರಕ್ತದಲ್ಲಿ ಅವರ ಉಡುಪುಗಳು ಶುಭ್ರಗೊಂಡು ಬೆಳ್ಳಗಾಯಿತು – ಆಯ್ಕೆಯಾದ ದ್ರಾಕ್ಷೆಯ ಬಳ್ಳಿ ಮತ್ತು ಅದರ ಕೊಂಬೆಗಳು – ಹಿಂದಿನ ಹಲವಾರು ಆಯ್ಕೆಗಳು – ಇವುಗಳಲ್ಲಿ ಯಾವುದೂ ಶಾಶ್ವತವಲ್ಲ – ಯಾಕೋಬ ಮತ್ತು ಏಸಾವನ ತರಹದವರು – "ಯಾಕೋಬನೇ, ನಾನು ನಿನ್ನನ್ನು ಪ್ರೀತಿಸಿದೆನು" ಏಸಾವನೇ, ನಾನು ನಿನ್ನನ್ನು ದ್ವೇಷಿಸಿದೆನು" – ಫರೋಹನು – "ಇದೇ ಉದ್ದೇಶಕ್ಕಾಗಿ ನಾನು ನಿನ್ನನ್ನು ಎಬ್ಬಿಸಿದೆನು"– ದೇವರು ತನ್ನ ಚಿತ್ತವನ್ನು ಯಾರ ಮೇಲೆಯೂ ಬಲವಂತಗೊಳಿಸುವುದಿಲ್ಲ – ಫರೋಹನು ಸಹಾ ಈ ನಿಯಮಕ್ಕೆ ಹೊರತಾದವನಲ್ಲ – ದೇವರು ಫರೋಹನ ಹೃದಯವನ್ನು ಕಠಿಣಗೊಳಿಸಿದನು – ಇಸ್ರಾಯೇಲ್ಯ ಜನಾಂಗವು ಆಯ್ಕೆಗೊಂಡಿತು – ಹಾಗಾದರೆ, ಎಲ್ಲಾ ವಿಧದಲ್ಲಿ ಯೆಹೂದ್ಯರಿಗಾಗುವ ಲಾಭವೇನು? – ಆಯ್ಕೆಯಾದವರು "ನೂತನ ಸೃಷ್ಟಿ"ಯಾಗಿದ್ದಾರೆ – ಕೃಪೆಯ ಮಹತ್ವ – "ರಾಜನ ಸ್ವಂತ' ಎಂಬುದರ ನಿದರ್ಶನ – "ಆತನ ಮಗನ ಸ್ವರೂಪ" ಹೊಂದುವುದಕ್ಕಾಗಿ ಪೂರ್ವ ನೇಮಿತ – ಆತನ ಉದ್ದೇಶಕ್ಕನುಸಾರವಾಗಿ ಕರೆಯಲ್ಪಟ್ಟವರು – "ಕರೆಯಲ್ಪಟ್ಟವರ' ಅರ್ಹತೆ ಮತ್ತು ಗುಣಲಕ್ಷಣಗಳು – "ದೇವರು ನಮ್ಮೊಂದಿಗಿದ್ದರೆ" – ಅಪೊಸ್ತಲನ ವಾದಗಳ ಭಾವಾರ್ಥಗಳು – ನಮ್ಮ ಕರೆ ಮತ್ತು ಆಯ್ಕೆಗಳನ್ನು ಖಚಿತಪಡಿಸಿಕೊಳ್ಳುವುದು – ಓಟದ ಪಥ – ನಾನು ಗುರುತಿನ ಮೇಲೆ ಓತ್ತುತ್ತೇನೆ – "ದೇವರಿಂದ ನೀವು ಆಯ್ಕೆಗೊಂಡದ್ದನ್ನು ತಿಳುಕೊಳ್ಳುವುದು" . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . 88

### ಅಧ್ಯಯನ – 5
### ನೂತನ ಸೃಷ್ಟಿಯ ವ್ಯವಸ್ಥಾಕ್ರಮ

ಆತ್ಮೀಕ ಮಂದಿರಕ್ಕಾಗಿ ಜೀವವುಳ್ಳ ಕಲ್ಲುಗಳು – ಹೆಸರಿಗೆ ಮಾತ್ರದವರು **vs.** ನಿಜವಾದ ನೂತನ ಸೃಷ್ಟಿ – "ದೇವರ ರಹಸ್ಯ" ಮತ್ತು ದುಷ್ಟತ್ವದ ರಹಸ್ಯ – ಮಹಾ ಕ್ರಿಸ್ತವಿರೋಧಿಯ ವ್ಯವಸ್ಥೆ – ನಂಬಲರ್ಹವಾದ ವೇದೋಕ್ತಿಗಳು– ಪ್ರಪಂಚಕ್ಕೆ ಮತ್ತು ಚರ್ಚಿಯಾನಿಟಿಗೆ ನೀಡಲ್ಪಟ್ಟಿರುವ ಸ್ವಾತಂತ್ರ್ಯ– ಗೊಂದಲದ ಕಾರಣ ಕ್ರಮ – "ಸೂಕ್ತ ಸಮಯದಲ್ಲಿ" – " ಯುಗಗಳ ಅಂತ್ಯ" – ದೇವರು ನೆಟ್ಟ ದ್ರಾಕ್ಷೆಬಳ್ಳಿ –" ಕುರಿಮರಿಯ ಹನ್ನೆರಡು ಅಪೊಸ್ತಲರುಗಳು" – ಯೂದನ ಉತ್ತರಾಧಿಕಾರಿಯಾದ ಪೌಲನು – ಅಪೊಸ್ತಲರ ಸಂಖ್ಯೆ ಹನ್ನೆರಡಕ್ಕೆ ಸೀಮಿತಗೊಂಡದ್ದು – ಅಪೊಸ್ತಲರ ನಿಯೋಗ – ಅಪೊಸ್ತಲರ ಪ್ರಭಲವಾದ ಗುಣಲಕ್ಷಣಗಳು – ಅಪೊಸ್ತಲನಾದ ಪೌಲನು ಇತರ ಅಪೊಸ್ತಲರುಗಳಿಗಿಂತ ಒಂದು ಕಣವಾದರೂ ಕಡಿಮೆಯಾದವನಲ್ಲ – ಹನ್ನೆರಡು ಮಂದಿಯ ಸ್ಫೂರ್ತಿ – ಅಪೊಸ್ತಲರ ಬರಹಗಳ ದೈವಿಕ ಮೇಲ್ವಿಚಾರಣೆ – " ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು" – ಸುವಾರ್ತೆಗಳಲ್ಲಿನ

ಸಾಮರಸ್ಯ – ಅಧಿಕಾರದ ಕೀಲಿಕೈಗಳು – ಆಪೋಸ್ತೋಲಿಕ ಖಾತರಿ – ಆಕ್ಷೇಪಗಳ ಪರ್ಯಾಲೋಚನೆ – " ನಿಮ್ಮ ಒಡೆಯನು ಒಬ್ಬನೇ" – ನಿಜವಾದ ಸಭೆಯು " ದೇವರ ಹಿಂಡು" – ಅಪೋಸ್ತಲರು, ಪ್ರವಾದಿಗಳು, ಸುವಾರ್ತಿಕರು, ಉಪದೇಶಕರು – ನೂತನ ಸೃಷ್ಟಿಯಲ್ಲಿ ಕರ್ತನ ಸುವ್ಯವಸ್ಥೆಯು ನಿರ್ಬಂಧವಿಲ್ಲದೆ ಪೂರ್ಣಗೊಂಡಿದೆ – ಆತನು ಅದರ ಮೇಲ್ವಿಚಾರಕನೂ ಸಹಾ – ಆತ್ಮನ ವರಗಳು ಅದರ ಅಗತ್ಯತೆಯೊಂದಿಗೆ ಸ್ಥಗಿತಗೊಂಡಿವೆ – ಸಂತರುಗಳಿಗೆ ಒಮ್ಮೆ ನೀಡಲ್ಪಟ್ಟಿರುವ ನಂಬಿಕೆ – ಬಲವಂತಿಕೆಯ ಒಕ್ಕೂಟ, ಕ್ರಿಸ್ತ ವಿರೋಧಿ – ಬಿಷಪ್ಪರುಗಳು, ಸಭಾ ಹಿರಿಯರು, ಡೀಕನರುಗಳು – "ಪ್ರವಾದಿ"ಯ ನಿಜವಾದ ಮಹತ್ವ – ಹಿರಿಯತ್ವಕ್ಕೆ ನಮ್ರತೆ ಅಗತ್ಯ – ಇತರ ಅಗತ್ಯವಾದ ಅರ್ಹತೆಗಳು – ಡೀಕನರುಗಳು – ಪಾದ್ರಿಗಳು ಮತ್ತಿತರ ದೇವರ ಸೇವಕರುಗಳು – ಸಭೆಯಲ್ಲಿನ ಉಪದೇಶಕರುಗಳು – ಅನೇಕರು ಬೊಧಿಸಲು ಶಕ್ತರಾಗಬೇಕು –" ಸಹೋದರರೇ, ನಿಮ್ಮಲ್ಲಿ ಹೆಚ್ಚಿನವರು ಬೋಧಕರುಗಳಾಗಬೇಕಿಲ್ಲ" –ಯಾರೊಬ್ಬರೂ ನಿಮಗೆ ಬೋಧಿಸುವ ಅವಶ್ಯಕತೆ ಇಲ್ಲ – ಯಾರಿಗೆ ಬೋಧಿಸಲ್ಪಟ್ಟಿದೆಯೋ ಮತ್ತು ಯಾರಿಗೆ ಉಪದೇಶಿಸಲ್ಪಟ್ಟಿದೆಯೊ–ಸಭೆಯಲ್ಲಿ ಸ್ತ್ರೀಯರ ಕಾರ್ಯಕ್ಷೇತ್ರ – ಸ್ತ್ರಿಯರು ಜೊತೆ ಸೇವಕರುಗಳಾಗಿ – "ಆಕೆಯು ಮುಸುಕು ಹಾಕಿಕೊಳ್ಳಲಿ". . . . . . . . . . . . . . . . . . . . . . . . . . . . . . . . . . . . . . . . 106

## ಅಧ್ಯಯನ – 6

## ನೂತನ ಸೃಷ್ಟಿಯಲ್ಲಿನ ಕ್ರಮ ಮತ್ತು ಶಿಸ್ತು

ನೇಮಿಸುವಿಕೆಯ ಅರ್ಥ – ಸಂಪೂರ್ಣ ಅಧಿಕಾರವುಳ್ಳ ಹನ್ನೆರಡು ಕ್ರೈಸ್ತ ಪುರೋಹಿತರುಗಳು ಮಾತ್ರ, – ಪುರೋಹಿತರುಗಳು ಮತ್ತು ಸಾಮಾನ್ಯರು – ಹಿರಿಯರುಗಳನ್ನು ಮತ್ತು ಡೀಕನರುಗಳನ್ನು ಆಯ್ಕೆಮಾಡುವುದು – ಪ್ರತಿಯೊಂದು ಸಭೆಯಲ್ಲಿಯೂ ಹಿರಿಯರುಗಳ ದೀಕ್ಷೆ– ಯಾರು ಹಿರಿಯರುಗಳನ್ನು ಆಯ್ಕೆಮಾಡ ಬಹುದು ಮತ್ತು ಹೇಗೆ? – ಬಹುಮತ ಸಂಖ್ಯೆ ಸಾಲದು – ವಿವಿಧ ಸೇವಾ ಶಾಖೆಗಳು – ಸಂಬಳ ಪಡೆವ ಸೇವೆ? – ಸಭೆಯಲ್ಲಿ ಶಿಸ್ತು – ಬೋಧಿಸಲು ತಪ್ಪುಗ್ರಹಿಕೆಯ ಕರೆ – "ಪುಂಡಾಟ ಮಾಡುವವರನ್ನು ಎಚ್ಚರಿಸು" – ತಪ್ಪು ತೋರಿಸಿಕೊಡುವುದು ಒಂದು ಸಾಮಾನ್ಯವಾದ ಕ್ರಮವಲ್ಲ – ಸಾರ್ವಜನಿಕ ಗದರಿಕೆ ಅಪರೂಪ – "ಯಾರೂ ಕೆಡುಕಿಗೆ ಕೆಡುಕನ್ನು ಮಾಡದಂತೆ ನೋಡಿಕೊಳ್ಳಿರಿ"– ಪ್ರೀತಿಸಲು ಉತ್ತೇಜಿಸುವುದು – " ನಾವಾಗಿಯೇ ಸಭೆ ಸೇರುವುದು" – ನಮ್ಮ ಕೂಟಗಳ ವಿವಿಧತೆ ಮತ್ತು ಗುಣ ಲಕ್ಷಣಗಳು – ಸಿದ್ಧಾಂತವು ಇನ್ನೂ ಅವಶ್ಯಕವಾಗಿದೆ – ಪ್ರಶ್ನೆಗಳಿಗೆ ಅವಕಾಶಗಳು – ದೃಷ್ಟಾಂತಿಸಿದ ಲಾಭಕರ ಕೂಟಗಳು – ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ಮನಸ್ಸಿನಲ್ಲಿ ಸಂಪೂರ್ಣವಾಗಿ ಒಡಂಬಡಲಿ – ಶವ ಸಂಸ್ಕಾರಗಳು – ಸಭಾ ವಂತಿಗೆಗಳು, ಹಣ ಸಂಗ್ರಹಗಳು ಮತ್ತು ದಾನ ಧರ್ಮಗಳು . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . 147

## ಅಧ್ಯಯನ – 7

## ನೂತನ ಸೃಷ್ಟಿಯ ಧರ್ಮಶಾಸ್ತ್ರ (ಕಾನೂನು)

ಕಾನೂನನ್ನು ನೀಡುವುದೆಂದರೆ ಅದನ್ನು ಕಾಪಾಡಿಕೊಳ್ಳುವ ಸಾಮರ್ಥ್ಯವನ್ನು ನೀಡುವುದೆಂಬ ಅಭಿಪ್ರಾಯವುಂಟಾಗುತ್ತದೆ – ಮೂಲದಲ್ಲಿ ಬರೆದ ದೈವೀಕ ಕಾನೂನು ಜೀವದ ಕಾನೂನನ್ನು ಪತನಗೊಂಡ ಜನಾಂಗಕ್ಕೆ ನೀಡಲು ಸಾಧ್ಯವಿಲ್ಲ–ವಿಮೋಚನೆಯು ಕಾನೂನಲ್ಲ ಆದರೆ ಕೃಪೆ–ಕ್ರಿಸ್ತನ ಒಂದು ತ್ಯಾಗದಿಂದ ನೂತನ ಒಡಂಬಡಿಕೆಯು ಸ್ಥಿರಪಟ್ಟಿತು ಮತ್ತು ಧರ್ಮಶಾಸ್ತ್ರದ ಒಡಂಬಡಿಕೆಯ ಕಾನೂನು ನೆರವೇರಿತು – ಸಿನಾಯಿಯ ಧರ್ಮಶಾಸ್ತ್ರೀಯ ಕಾನೂನು ಶಾರೀರಿಕ ಇಸ್ರಾಯೇಲ್ಯರಿಗೆ ಮಾತ್ರ –ನೂತನ ಒಡಂಬಡಿಕೆಯ ಕಾನೂನು–ಇದರ ಕಟ್ಟಳೆಯ ಮೂಲಕ ಸಂತರುಗಳು ಪ್ರಗತಿಹೊಂದಿದರು–ದೈವೀಕ ಪ್ರಕಟನೆ ಮತ್ತು ಆ ಒಡಂಬಡಿಕೆಯ ಅಡಿಯಲ್ಲಿ ನೂತನ ಸೃಷ್ಟಿಗಳು ಪ್ರತ್ಯೇಕವಾದವರು ಮತ್ತು ಭಿನ್ನತೆಯುಳ್ಳವರು – ಸಮರ್ಪಕವಾದ ಕಾನೂನಿನ ಮೆಚ್ಚುಗೆಯಲ್ಲಿ ಬೆಳೆಯುವುದು– ಗುರಿಹಿಡಿದು ಓಡುವುದು ಮತ್ತು ಅದರಲ್ಲಿ ಭದ್ರವಾಗಿ ನಿಂತುಕೊಳ್ಳುವುದು – ಸ್ವರ್ಣ ನಿಯಮ – ವಿಮೋಚನೆಯ ಸಮರ್ಪಕವಾದ ಕಾನೂನು. . . . . . . . . . . .188

## ಅಧ್ಯಯನ – 8

## ನೂತನ ಸೃಷ್ಟಿಯ ವಿಶ್ರಾಂತಿ ಅಥವಾ ಸಬ್ಬತ್ತು

ಕ್ರೂಜೆಯಿಂದ ದೈವಿಕ ವ್ಯವಹಾರದ ದಿನಾಂಕಗಳ ಬದಲಾವಣೆ – ಅಪೋಸ್ತಲರುಗಳು ಸಬ್ಬತ್ತು ದಿನಗಳಲ್ಲಿ ಯೆಹೂದ್ಯ ಮಂದಿರಗಳಲ್ಲಿ ಮಾಡಿದ ಪ್ರಸಂಗಗಳು ಯೆಹೂದ್ಯ ಸಬ್ಬತ್ತನ್ನು ದೃಢೀಕರಿಸುವುದಾಗಲೀ ಅಥವಾ ಈ ಪದ್ದತಿಯನ್ನು ನೂತನ ಸೃಷ್ಟಿಯಲ್ಲಿ ಬಂಧನಕಾರಕವನ್ನಾಗಿ ಮಾಡುವುದಾಗಲೀ ಆಗಿರಲಿಲ್ಲ – ಯಾವ ಕಟ್ಟಡದೊಳಗಿಂದ ಸುವಾರ್ತೆಯು ಸಾರಲ್ಪಡುತ್ತದೋ ಅದರ ಪ್ರಭಾವವು ಆತನ ಸಂದೇಶಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ – ದಿನವೂ ಸಹಾ – ಕ್ರೈಸ್ತ ಸಬ್ಬತ್ತಾಗಿ ಉದ್ಭವವಾದ ವಾರದ ಮೊದಲನೆಯ ದಿನ – ಇದರ ಆಚರಣೆಯು ಕಾನ್ಸ್ಟಂಟೈನಿನ ಕಾಲಕ್ಕಿಂತಲೂ ಬಹಳ ಹಿಂದೆಯೇ ಪ್ರಾರಂಭಗೊಂಡಿತ್ತು – ಪುನರುತ್ಥಾನಗೊಂಡ ಕರ್ತನ ಹೆಚ್ಚಿನ ಎಲ್ಲಾ ಪ್ರಕಟನೆಗಳೂ ವಾರದ ಮೊದಲನೆಯ ದಿನವೇ ಮಾಡಲಾಯಿತು – ಮೊದಲನೆಯ ದಿನವನ್ನು ಸಬ್ಬತ್ತಾಗಿ ಆಚರಿಸುವುದು ಕೃತಜ್ಞತೆಯ ಸಂಗತಿಯಾಗಿದೆ – ಹೀಗಿದ್ದಾಗ್ಯೂ ಇದು ದೈವಿಕ ಗೊತ್ತುಪಡಿಸುವಿಕೆ ಅಲ್ಲ – ಫ್ರಾನ್ಸ್ ಮತ್ತು ಏಳರ ಸಂಖ್ಯೆ – ಇಸ್ರಾಯೇಲ್ಯರ ಸಬ್ಬತ್ತು ಸಾಂಕೇತಿಕವಾದುದು – ನೂತನ ಸೃಷ್ಟಿಯ ಸಬ್ಬತ್ತು ಯಾವಾಗ ಪ್ರಾರಂಭವಾಯಿತು ಮತ್ತು ಅದು ಹೇಗೆ ಮುಂದುವರಿಯುತ್ತಿದೆ. . . . . . . . . . . . . . . . . . . . 205

## ಅಧ್ಯಯನ – 9

## ನೂತನ ಸೃಷ್ಟಿಯ ನ್ಯಾಯವಿಚಾರಣೆ

ಯೆಹೋವನು ವಿಶ್ವದ ಮಹಾ ನ್ಯಾಯಾಧಿಪತಿ – ಎಲ್ಲಾ ಆಶೀರ್ವಾದಗಳೂ, ಕೃಪೆ ಮುಂತದವುಗಳು ಯೆಹೋವನಿಂದ, ಆತನ ಮಗನ ಮುಖಾಂತರ – ನೂತನ ಸೃಷ್ಟಿಗಳು ಕ್ರಿಸ್ತನೊಡನಾಡಿಗಳು, ಜೊತೆ ವಾರಸುದಾರರುಗಳು –" ಭೂಪರಲೋಕಗಳಲ್ಲಿ ಎಲ್ಲಾ ಅಧಿಕಾರಗಳು ನನಗೆ ಕೊಡಲ್ಪಟ್ಟಿದೆ" – ಮಾನವ ದಂಡನೆಯ ಬಗ್ಗೆ ತಂದೆಯ ತೀರ್ಪು ಈಗಾಗಲೆ ವ್ಯಕ್ತವಾಗಿದೆ – ಧರ್ಮಯುಗದ ಕಾಲದಲ್ಲಿನ ತೀರ್ಪು ಕರುಣೆ ಮತ್ತು ನೆರವಿನಲ್ಲಿ ಒಂದಾಗಿದೆ – ಕಾರ್ಯನಿರ್ವಾಹಕವಾದ ಅಂತಿಮ ತೀರ್ಪಿನಲ್ಲಿ ಕರುಣಾರಹಿತ ನ್ಯಾಯವಿರುತ್ತದೆ – ಸುವಾರ್ತಾ ಯುಗದಲ್ಲಿ ನೂತನ ಸೃಷ್ಟಿಯ ನ್ಯಾಯನಿರ್ಣಯ– ನೂತನ ಸೃಷ್ಟಿಯ ತೀರ್ಪು ಸಮರ್ಪಕವಾದ ಪ್ರೀತಿಯ ನಿಯಮದ ಅಡಿಯಲ್ಲಿರುತ್ತದೆ – ದೇಹದ ಮೇಲೆ ಭವ್ಯವಾದ ಶಿರಸ್ಸಿನ ಮೇಲ್ವಿಚಾರಣೆ – "ನೀವು ಇತರರಿಗೆ ತೀರ್ಪುಮಾಡಿದಂತೆಯೇ ನಿಮಗೂ ತೀರ್ಪುಮಾಡಲಾಗುವುದು" – ನಾವು ನಮ್ಮನ್ನು ಸರಿಯಾದ ರೀತಿಯಲ್ಲಿ ತೀರ್ಮಾನಿಸಿಕೊಳ್ಳತಕ್ಕದ್ದು – "ನಮಗೆ ತೀರ್ಪುಮಾಡುವಾತನು ಕರ್ತನೇ" – ಸಭೆಯು ಕೆಲವು ಸಂಗತಿಗಳ ಬಗ್ಗೆ ತೀರ್ಪುಮಾಡತಕ್ಕದ್ದು – "ನಿನ್ನ ಸಹೋದರನು ನಿನಗೆ ವಿರೋಧವಾಗಿ ತಪ್ಪು ಮಾಡಿದರೆ ಅವನನ್ನು ಏಳೆಪ್ಪತ್ತು ಸಾರಿ ಕ್ಷಮಿಸು" – ಸಭೆಗೆ ವಿರೋಧವಾದ ಅಪರಾಧಗಳು – ನಾವೆಲ್ಲರೂ ಕ್ರಿಸ್ತನ ನ್ಯಾಯಾಸ್ಥಾನದ ಮುಂದೆ ಹಾಜರಾಗತಕ್ಕದ್ದು. . . . . . . . . . . . . . . . . . . . . . . . . . . . . . . . 214

## ಅಧ್ಯಯನ – 10

## ನೂತನ ಸೃಷ್ಟಿಯ ದೀಕ್ಷಾಸ್ನಾನ

ಎರಡನೇ ಶತಮಾನದಲ್ಲಿದ್ದ ದೀಕ್ಷಾಸ್ನಾನ – ದೀಕ್ಷಾಸ್ನಾನದಲ್ಲಿ ಧಾರ್ಮಿಕ ಮಾತಾಪಿತರು – ರೋಮನ್ ಸಭೆಯ ದೀಕ್ಷಾಸ್ನಾನದ ಆಚಾರ ವಿಧಿಗಳು – ಶಿಶುಗಳ ದೀಕ್ಷಾಸ್ನಾನವನ್ನು ಯಾತಕ್ಕಾಗಿ ಜಾರಿಗೊಳಿಸಲಾಯಿತು? – ದೀಕ್ಷಾಸ್ನಾನದ ಬಗ್ಗೆ ದೇವರ ವಾಕ್ಯದ ಪುರಾವೆಗಳು – "ಡಿಸೈಪಲ್' ನವರ ದೃಷ್ಟಿಕೋನ – "ಬ್ಯಾಪ್ಟಿಸ್ಟರ'ನವರ ದೃಷ್ಟಿಕೋನ – ನಿಜವಾದ ದೃಷ್ಟಿಕೋನ – ಕ್ರಿಸ್ತನ ಮರಣದಲ್ಲಿ ದೀಕ್ಷಾಸ್ನಾನ – "ಒಂದೇ ಆತ್ಮನ ಮೂಲಕವಾಗಿ ನಾವೆಲ್ಲರೂ ಒಂದೇ ಶರೀರವಾಗಿ ದೀಕ್ಷಾಸ್ನಾನ ಹೊಂದಿದ್ದೇವೆ" – ಬೆಂಕಿಯಲ್ಲಿ ದೀಕ್ಷಾಸ್ನಾನ – ನೀರಿನಲ್ಲಿ ಸಾಂಕೇತಿಕ ದೀಕ್ಷಾಸ್ನಾನ – ಸಾಂಕೇತಿಕ ದೀಕ್ಷಾಸ್ನಾನದ ಅಗತ್ಯವಿದೆಯೋ? – ಸಮಂಜಸವಾದ ಸಂಕೇತ – ಇದನ್ನು ಯಾರು ನೆರವೇರಿಸಬಹುದು? – ಮಾತುಗಳ ರೂಪ – ಸಂಕೇತದ ಪುನರಾವರ್ತನೆ –"ಸತ್ತವರಿಗಾಗಿ ದೀಕ್ಷಾಸ್ನಾನ". . . 229

## ಅಧ್ಯಯನ – 11

## ನೂತನ ಸೃಷ್ಟಿಯ ಪಸ್ಕ

ಐಗುಪ್ತದ ನೊಗ ಮತ್ತು ಅದರಿಂದ ಬಿಡುಗಡೆ, ಸಂಕೇತ ಮತ್ತು ಪ್ರತಿಸಂಕೇತದಲ್ಲಿ – "ಚೊಚ್ಚಲಮಕ್ಕಳ ಸಭೆ" –"ನಾವು ಅನೇಕರಾಗಿದ್ದಾಗ್ಯೂ ಒಂದೇ ರೊಟ್ಟಿಯಂತಿದ್ದೇವೆ – ಸ್ಮರಣಾರ್ಥವು ಇನ್ನೂ ಯುಕ್ತವಾಗಿದೆ – ಯಾರು ಆಚರಿಸಬಹುದು? – ಯಾರು ನೆರವೇರಿಸಬಹುದು? – ಸೇವೆಯ ಕ್ರಮ – ಈಸ್ಟರ್ ಪಸ್ಕ – ಮೆಕ್. ಕ್ಲಿಂಟಾಕ್ ಮತ್ತು ಸ್ಟ್ರಾಂಗ್ ರವರ ವಿಶ್ವಜ್ಞಾನಕೋಶದಿಂದ ಸಂಗ್ರಹ. . . . . . . . . . . . . . . . . . . . . . . . . . . . . . . . . . . . . . . . . . . 250

## ಅಧ್ಯಯನ – 12

## ನೂತನ ಸೃಷ್ಟಿಯ ದಾಂಪತ್ಯ ಮತ್ತು ಇನ್ನಿತರ ಸೌಕರ್ಯಗಳು ಹಾಗೂ ಅವಶ್ಯ ಕರ್ತವ್ಯಗಳು

ನೂತನ ಸೃಷ್ಟಿಯ ಅನೇಕ ಅವಶ್ಯ ಕರ್ತವ್ಯಗಳು – "ಕ್ರಿಸ್ತ ಯೇಸುವಿನಲ್ಲಿ ಎಲ್ಲರೂ ಒಂದೇ" – ಸ್ವೇಚ್ಛೆಯ ಜತೆಗಾರಿಕೆ ಸೂಚಕವಾಗಿಲ್ಲ – ದೈವಿಕ ಕ್ರಮದಲ್ಲಿ ಸ್ತ್ರೀ ಪುರುಷರು – ಪುರುಷನ ಯಜಮಾನಿಕೆ ಬಲತ್ಕಾರವಾದುದಲ್ಲ – ನೂತನ ಸೃಷ್ಟಿಯ ವಿವಾಹ – ದಾಂಪತ್ಯದ ಅನ್ಯೋನ್ಯತೆಯಲ್ಲಿ ವಿವಿಧ ಪರಿಸ್ಥಿತಿಗಳಲ್ಲಿ ನೂತನ ಸೃಷ್ಟಿಗೆ ಬುದ್ಧಿಮಾತುಗಳು – ಪರಿತ್ಯಾಗದ ಘಟನೆಗಳಲ್ಲಿ – ಮನಸ್ಸಾಕ್ಷಿಯೇ ಅಂತಿಮ ಪರೀಕ್ಷೆ – ನಪುಂಸಕರು, ಕನ್ಯೆಯರು, ಬ್ರಹ್ಮಚರ್ಯೆ – "ಕರ್ತನಲ್ಲಿ ಮಾತ್ರವೇ"– ತಂದೆ ತಾಯಿಗಳ ಕರ್ತವ್ಯಗಳು. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . 266

## ಅಧ್ಯಯನ – 13

## ನೂತನ ಸೃಷ್ಟಿಯ ತಂದೆ ತಾಯಿಗಳ ಅವಶ್ಯಕ ಕರ್ತವ್ಯಗಳು

ಸೃಷ್ಟಿಪರ ಶಕ್ತಿಯನ್ನು ಕಾರ್ಯಗೊಳಿಸುವಲ್ಲಿ ಅಂಟಿಕೊಂಡಿರುವ ಹೆಚ್ಚಿನ ಅವಶ್ಯಕ ಕರ್ತವ್ಯಗಳು – ಜನನ ಪೂರ್ವದಲ್ಲಿನ ಪ್ರಭಾವಗಳು – "ಮಗುವು ಸಾಗಬೇಕಾದ ಮಾರ್ಗದಲ್ಲಿಯೇ ಆತನನ್ನು ತರಬೇತುಗೊಳಿಸು!"– ಭಾನುವಾರ ಶಾಲೆಗಳ ಪ್ರಭಾವ – ಮಕ್ಕಳ ಆತ್ಮವಿಶ್ವಾಸ – ಮಕ್ಕಳ ತರಬೇತಿಯ ಸಲಹೆಗಳ ಶಕ್ತಿ – ಮಹಾಸಂಕಟ ಕಾಲದಲ್ಲಿ ನಮ್ಮ ಮಕ್ಕಳು – ಸೂಕ್ತವಾದ ಮತ್ತು ಸೂಕ್ತವಲ್ಲದ ಮೋಜುಗಳು – ನೂತನ ಸೃಷ್ಟಿಗಳ ಮಕ್ಕಳ ವಿವಾಹಗಳು. . . . . . . .284

## ಅಧ್ಯಯನ – 14

## ನೂತನ ಸೃಷ್ಟಿಯ ಪ್ರಾಪಂಚಿಕ ಹಂಗುಗಳು

•"ಎಲ್ಲರ ದೃಷ್ಟಿಯಲ್ಲಿ ಯಾವುದು ಗೌರವವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ"–" ಯಾರ ಋಣದಲ್ಲಿರಬೇಡಿರಿ, ಯಾವ ಪುನರಾಪೇಕ್ಷೆ  ಇಲ್ಲದೆ ಎರವಲು ನೀಡಿರಿ" – " ಕ್ರಿಸ್ತೀಯ ಸೌಜನ್ಯ" – "ನಾಳಿನ ವಿಷಯವಾಗಿ ಚಿಂತೆಮಾಡಬೇಡಿ"–"ನನ್ನ ಗುರಿ ಕ್ರಿಸ್ತನು, ಕ್ರಿಸ್ತನೊಬ್ಬನೇ'' –"ಹಣವಂತರು ದೇವರ ರಾಜ್ಯದಲ್ಲಿ ಸೇರುವುದಕ್ಕಿಂತ, ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗ್ಗುವುದು ಸುಲಭ"– ವಿಮೆ–ಪರಸ್ಪರ ಲಾಭಕ್ಕಾಗಿ ಇರುವ ಸಂಸ್ಥೆಗಳು, ಮುಂತಾದವುಗಳು – ಧರ್ಮಶೀಲ ಮಧ್ಯೆ ಪ್ರವೇಶಿಸುವಿಕೆ –"ದೇವರನ್ನು ಸ್ತುತಿಸುವುದು, ಮನುಷ್ಯರನ್ನು ಶಪಿಸುವುದು" ಸಾಮಾಜಿಕ ಹಂಗುಗಳು –" ಎಲ್ಲಾ ಮನುಷ್ಯರನ್ನೂ ಗೌರವಿಸಿರಿ"–"ನೂತನ ಸೃಷ್ಟಿಯವರು ಸಾರ್ವಜನಿಕ ಮತದಾನದಲ್ಲಿ ಭಾಗವಹಿಸಬಹುದೋ?" – ನೂತನ ಸೃಷ್ಟಿಗಳು ಮತ್ತು ನೈತಿಕ ಸುಧಾರಣೆಗಳು – ಬೆಳೆಬಾಳುವ ಉಡುಪುಗಳನ್ನು ಧರಿಸುವುದು – ನಾವು "ಮಹಿಮೆ, ಗೌರವ ಮತ್ತು ನಿರ್ಲಯತ್ವ" ಇವುಗಳ ಶೃಂಗಾರಕ್ಕಾಗಿ ಕಾದುಕೊಳ್ಳೋಣ. . . . . . . . . . . . . . . . . . . . . . . . . . . . . 308

## ಅಧ್ಯಯನ – 15

## ನೂತನ ಸೃಷ್ಟಿಗಳ ವಿರೋಧಿಗಳು ಮತ್ತು ಆಕ್ರಮಣಕಾರರು

'ಪೂರ್ವಸ್ವಭಾವವು'– ನೂತನ ಸೃಷ್ಟಿಯ ಶತ್ರುವಾಗಿ ಈ ಪ್ರಪಂಚವು – ಮಹಾ ವಿರೋಧಿಯಾದ ಸೈತಾನನು. – ಆತನು ಆದಿಯಿಂದಲೂ ಸುಳ್ಳುಗಾರನೂ, ಕೊಲೆಗಾರನೂ ಆಗಿದ್ದಾನೆ – ಕೆಡುಕಿನಲ್ಲಿ ಸೈತಾನನ ಸಹಚರರು; ಪಿಶಾಚಿಗಳ ದಂಡು –ದುಷ್ಟ ಶಕ್ತಿಗಳ ದೊಡ್ಡಸಮೂಹ– ಸೈತಾನನ ಪ್ರಥಮ ಸುಳ್ಳು ಯಾವ ರೀತಿಯಲ್ಲಿ ಶಾಶ್ವತಗೊಂಡಿದೆ – ಕ್ರೈಸ್ತ ವಿಜ್ಞಾನ ಮತ್ತು ದೈವಜ್ಞಾನ –"ನಾವು ಹೋರಾಡುವುದು ಕೇವಲ ಮಾಂಸ ಮತ್ತು ರಕ್ತದೊಂದಿಗೆ ಅಲ್ಲ" –ಕೆಡುಕನ ಸೇವೆ –ವಿರೋಧಿಯ ಆಕ್ರಮಣಗಳು–ವಿಶ್ವಾಸಿಗಳ ಪ್ರಾರ್ಥನೆಯು ರೋಗಿಗಳನ್ನು ರಕ್ಷಿಸುತ್ತದೆ – ಸೈತಾನನು ಸೈತಾನನ್ನು ಹೊರ ಹಾಕಿದರೆ ಆತನ ರಾಜ್ಯವು ಕ್ಷೀಣಿಸುತ್ತದೆ – ನೀತಿವಂತಿಕೆಯನ್ನು ಪ್ರೀತಿಸಿರಿ; – ದುಷ್ಟತನವನ್ನು ದ್ವೇಷಿಸಿರಿ. ಮಾರ್ಕ 16: 9–20 – ನೂತನ ಸೃಷ್ಟಿಯ ವಿರೋಧಿಯಾಗಿ ನಾಮಾಂಕಿತ ಕ್ರೈಸ್ತ ಸಭೆ – ದೇವರ ಶಸ್ತ್ರ. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .  328

## ಅಧ್ಯಯನ – 16

## ನೂತನ ಸೃಷ್ಟಿಯ ಪ್ರಸ್ತುತ ಪಾರಂಪರ್ಯ ಬಾಧ್ಯತೆಗಳು

ಆತ್ಮನ ಪ್ರಪ್ರಥಮ ಫಲ – ಸತ್ಯ ನಿರೀಕ್ಷೆಯ ಪ್ರತಿಯಾಗಿ ಸುಳ್ಳು ನಿರೀಕ್ಷೆಗಳು – ನಮ್ಮ ನಿರೀಕ್ಷೆ – ಪರದೈಸಿನಲ್ಲೊಬ್ಬ ಕಳ್ಳ – ಸಂತ ಪೌಲನ ಶ್ರದ್ಧಾಪೂರ್ವಕ ಅಭಿಲಾಷೆ –"ನಮ್ಮ ಈ ಲೋಕದ ಮನೆ' ಮತ್ತು "ಪರಲೋಕದಿಂದ ಕೊಡಲ್ಪಡುವ ನಮ್ಮ ಮನೆ' – ರೂಪಾಂತರ ದೃಶ್ಯ – ಸತ್ತವರೊಳಗಿಂದ ಮೊದಲಿಗೆ ಎದ್ದುಬರಬೇಕಾದವರು – ನೂತನ ಸೃಷ್ಟಿಯ ಪ್ರಸ್ತುತ ಆನಂದಗಳು – "ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವುದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವುದು" – ವಿಶ್ವಾಸವು ಆತ್ಮನ ಫಲವೂ ಮತ್ತು ನೂತನ ಸೃಷ್ಟಿಯ ಬಾಧ್ಯತೆಯ ಪಾಲೂ ಆಗಿದೆ. . . . . . . . . . . . . . . . . . . . . . . . .361

## ಅಧ್ಯಯನ – 17

## ನೂತನ ಸೃಷ್ಟಿಯ ಪುನರುತ್ಥಾನದ ಭಾಧ್ಯತೆಗಳು

ಆತ್ಮೀಕ ಸಂಗತಿಗಳನ್ನು ವೈಶಿಷ್ಟ್ಯಪೂರ್ಣವಾಗಿ ಮೆಚ್ಚಿಕೊಳ್ಳುವಂತೆ ನಂಬಿಕೆಯ ಕಣ್ಣು ಮತ್ತು ಕಿವಿಗಳನ್ನು ತರಬೇತುಗೊಳಿಸಬೇಕು – "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು " – ಪುನರುತ್ಥಾನದ ನಂತರ ಜೀವನಕ್ಕೆ – ಅನಾಸ್ಟೇಸಿಸ್; ಪುನಃಸ್ಥಾಯಿ ಅಥವಾ ಪುನರುತ್ಥಾನ – ಹಿಂದಿನ ಪಾಪಗಳಿಗಾಗಿ ನ್ಯಾಯ ತೀರ್ಪು ಅಥವಾ ನ್ಯಾಯವಿಚಾರಣೆ ಅಲ್ಲ; ಆದರೆ ಜೀವಕ್ಕಾಗಿ ಮತ್ತೊಂದು ನ್ಯಾಯ ವಿಚಾರಣೆ – ಪುನರುತ್ಥಾನವನ್ನು ಹೊಂದಿಕೊಳ್ಳಲು ಯೋಗ್ಯರಾಗಿ ಎಣಿಸಲ್ಪಡುವುದು – ಈ ಜೀವನದಲ್ಲಿನ ಪಾಪಗಳಿಗಾಗಿ ಶಿಕ್ಷೆ – ಕೆಲವರ ಪಾಪಗಳು ಮೊದಲೇ ನ್ಯಾಯತೀರ್ಪಿನ ಮುಂದೆ ಹೋಗುತ್ತವೆ – (ವಿಶೇಷವಾಗಿ) ಸತ್ತವರಿಗಾಗುವ (ಮುಖ್ಯವಾದ) ಪುನರುತ್ಥಾನವು ಅದೇ ಪ್ರಕಾರವಾಗಿರುವುದು – ನಾವು ಯಾವ ರೀತಿಯಲ್ಲಿರುತ್ತೇವೆಂದು ಇನ್ನೂ ಕಂಡುಬಂದಿರುವುದಿಲ್ಲ – ನಾವು ಆತನಂತೆಯೇ ಇರುತ್ತೇವೆ. . . . . . . . . . . . 380

**“ ...ಅದಕ್ಕೆ ಯೇಸು – ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು. ...ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು...”**
**–ಯೋಹಾನ 3:3–8**

**ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು. –2ಕೊರಿಂಥ. 5:17**

**ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ** (the bathing of a new birth) **ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟುಮಾಡುವುದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು. – ತೀತನಿಗೆ 3:5**

**ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವೂ ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು.**
**–ರೋಮಾಪುರ 6:4**

**ನೀವು ಪೂರ್ವ ಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನ ಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ. ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಮೇರೆಗೆ ದಿನೇ ದಿನೇ ನೂತನವಾಗುತ್ತಾ ಪೂರ್ಣ ಜ್ಞಾನವನ್ನು ಉಂಟುಮಾಡುತ್ತದೆ. –ಕೊಲೊಸ್ಸೆ 3:10**

**ಆದುದರಿಂದ ನಾವು ಧೈರ್ಯಗೆಡುವುದಿಲ್ಲ. ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಆಂತರ್ಯವು ದಿನೇ ದಿನೇ ಹೊಸದಾಗುತ್ತಾ ಬರುತ್ತದೆ. –2 ಕೊರಿಂಥ 4:16**

**ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ, ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.**
**–ರೋಮಾಪುರ 12:2.**

**ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ; ಹೊಸ ಸೃಷ್ಟಿಯೇ ಬೇಕು. ಈ ಸೂತ್ರಕ್ಕೆ ಸರಿಯಾಗಿ ನಡೆಯುವವರೆಲ್ಲರಿಗೆ ಅಂದರೆ ದೇವರ ಇಸ್ರಾಯೇಲ್ಯರಿಗೆ ಶಾಂತಿಯೂ ಕರುಣೆಯೂ ಆಗಲಿ.**

...And as many as walk according to this rule, peace *be* on them, and mercy, and upon the Israel of God.

**ಸಹೋದರರೇ, ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯು ನಿಮ್ಮ ಆತ್ಮದೊಂದಿಗಿರಲಿ. ಆಮೆನ್.**
**–ಗಲಾತ್ಯ 6:15,16,18**

# ನೂತನ ಸೃಷ್ಟಿ

## ಅಧ್ಯಯನ – 1 (Study 1)

## “ಆದಿಯಲ್ಲಿ” "IN THE BEGINNING"

**ವಿವಿಧ ಆರಂಭಗಳು – ಭೂಮಂಡಲವು ಹೇಗಿದ್ದಿತು? – ಅದನ್ನು ಕ್ರಮಪಡಿಸಿದ ಸೃಷ್ಟಿಯ ವಾರ – ಯುಗಾರಂಭದ ವಿಸ್ತಾರ – ವಿಜ್ಞಾನಿಗಳ ಅಸಮರ್ಥನೀಯ ಊಹಾಪೋಹಗಳಿಗೆ ಪ್ರೊ॥ ಡಾನಾರವರ ಅಂಗೀಕಾರ – ನಾನಾ ವರ್ಗಗಳ ಮುಂದುವರಿಕೆಯು ವಿಕಾಸವಾದವನ್ನು ನಿರಾಕರಿಸುತ್ತದೆ – ಶ್ರೀ ಡಾರ್ವಿನ್‌ರವರ ಪಾರಿವಾಳಗಳು – ವಿಶ್ವೋತ್ಪತ್ತಿಯ ವಿಚಾರ ಸರಣಿ – ಪ್ರೊಫೆಸರ್‌ಗಳಾದ ಸಿಲ್ಲಿಮನ್ ಮತ್ತು ಡಾನಾ ಇವರ ನಿಷ್ಠಾವಂತ ಸಾಕ್ಷ್ಯಗಳು – ಮೊಟ್ಟಮೊದಲ ಸೃಷ್ಟಿಯ ಯುಗಾರಂಭದ ದಿನ– ಎರಡನೆಯದು – ಮೂರನೆಯದು – ನಾಲ್ಕನೆಯದು – ಐದನೆಯದು – ಆರನೆಯದು – ಏಳನೆಯ ಯುಗಾರಂಭ ದಿನದ ಅರುಣೋದಯದಲ್ಲಿ ಸೃಷ್ಟಿಸಲ್ಪಟ್ಟ ಮಾನವ ಈ ಭೂಲೋಕದ ಒಡೆಯ –** Sir J.W. Dawson L L D. F.R.S. ರವರ Meeting Places of Geology and History **ಇದರ ಸಾರಾಂಶ– ಸೃಷ್ಟಿವಾರದ ಏಳನೆಯ ಯುಗಾರಂಭದ ದಿನ – ಅದರ ವಿಸ್ತಾರ – ಅದರ ವಿಶ್ರಾಂತಿ–ಅದರ ಉದ್ದೇಶ ಮತ್ತು ಪರಿಣಾಮ – ಸಂಭ್ರಮದ ಜ್ಯೂಬಿಲಿ, ಅದರ ಅಂತ್ಯದಲ್ಲಿ ಸಲ್ಲಬೇಕಾದ ಲೌಕಿಕ ಮತ್ತು ಅಲೌಕಿಕ ಸಂಗತಿಗಳು.**

ಯೆಹೋವನ ಕಾರ್ಯಕರ್ತರುಗಳು ಅನೇಕ, ಆತನ ಸೃಷ್ಟಿಯ ಒಂದಲ್ಲಾ ಮತ್ತೊಂದು ವೈಶಿಷ್ಟ್ಯದ ಬಗ್ಗೆ ಸಂಬಂಧವಿರಿಸಿಕೊಂಡ ಕಾರ್ಯಸ್ಥಾನಗಳು ಅನೇಕ; ಆದರೆ ಅದರ ಹಿಂದಿರುವುದೆಲ್ಲಾ ಆತನೇ ಸೃಷ್ಟಿಸಿದ ತನ್ನ ಸ್ವಂತ ಕ್ರಿಯಾತ್ಮಕ ಜ್ಞಾನ ಮತ್ತು ಶಕ್ತಿ. ಆತನೊಬ್ಬನೇ ಸೃಷ್ಟಿಕರ್ತ, "ಆತನ ಎಲ್ಲಾ ಕಾರ್ಯಗಳೂ ಪರಿಪೂರ್ಣವಾಗಿವೆ", ಎಂಬುದಾಗಿ ದೇವರ ವಾಕ್ಯಗಳು ಧೃಢಪಡಿಸುತ್ತವೆ. ಆತನು ಕೆಟ್ಟ ದೂತರುಗಳಿಗೆ ಮತ್ತು ಕೆಟ್ಟ ಮನುಷ್ಯರಿಗೆ ಆತನ ಸಮರ್ಪಕವಾದ ಕಾರ್ಯಗಳನ್ನು ದುರುಪಯೋಗ ಪಡಿಸಿಕೊಳ್ಳಲು ಅನುಮತಿಸಬಹುದು; ಆದರೆ ಕೆಡುಕನಿಗೆ ದೀರ್ಘಕಾಲ ಭಂಗಪಡಿಸಲು ಮತ್ತು ಹಾಳುಮಾಡಲು ಆತನು ಬಿಡುವವನಲ್ಲ; ಮತ್ತು ಕೊನೆಯಲ್ಲಿ ಆತನು ದುಷ್ಟತ್ವವನ್ನು ನಿಗ್ರಹಿಸಿ ಅದನ್ನು ನಾಶಪಡಿಸುವಾಗ ಆತನು ಅದಕ್ಕೆ ಕೇವಲ ಪರೀಕ್ಷಾರ್ಥವಾಗಿ, ಶುದ್ಧೀಕರಿಸಲು ಮತ್ತು ಮೆರುಗುಗೊಳಿಸಲು ಅಲ್ಪಸಮಯದ ಮಟ್ಟಿಗೆ ಮಾತ್ರ ಅವಕಾಶ ಕೊಟ್ಟಿದ್ದನೆಂದು ನಾವು ಗ್ರಹಿಸಿಕೊಳ್ಳುತ್ತೇವೆ. ಈ ಮೂಲಕ ಆತನು ತನ್ನ ಸ್ವಂತ ಪವಿತ್ರತೆಯನ್ನು, ಕೃಪಾ ಸ್ವಭಾವವನ್ನು ತೋರಿಸಿಕೊಟ್ಟು ಆತನ ಜ್ಞಾನಯುತ ಸೃಷ್ಟಿಗಳ ದೃಷ್ಟಿಯಲ್ಲಿ ಅತೀ ತೇಜಸ್ವಿಯಾಗಿ ಕಂಡುಬರುವಂತೆ ಹಂಚಿಕೆ ಮಾಡುವವನಾಗಿದ್ದಾನೆ.

ಆದಿಕಾಂಡ ಗ್ರಂಥದಲ್ಲಿ ನಾವು ಆದಿಯಲ್ಲಿ ದೇವರು ಆಕಾಶವನ್ನೂ, ಭೂಮಿಯನ್ನೂ ಉಂಟುಮಾಡಿದನು ಎಂಬುದಾಗಿ ಓದುವಾಗ, ಈ ಆರಂಭವು ಇಡೀ ವಿಶ್ವಕ್ಕೆ ಸಂಬಂಧಿಸಿದ್ದಲ್ಲವೆಂದು, ಕೇವಲ ಇದು ನಮ್ಮ ಭೂಗ್ರಹಕ್ಕೆ ಮಾತ್ರ ಸಂಬಂಧಿಸಿದ್ದೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಆಗ "ಮುಂಜಾನೆ ನಕ್ಷತ್ರಗಳು ಒಟ್ಟಾಗಿ ಉತ್ಸಾಹಧ್ವನಿಯೆತ್ತುತ್ತಾ" ದೇವಕುಮಾರರೆಲ್ಲರೂ ಅನಂದ ಘೋಷಮಾಡುತ್ತಾ ಇರಲು ಕರ್ತನು ಭೂಲೋಕದ ಅಸ್ತಿವಾರವನ್ನು ಹಾಕಿದನು. ಸಮುದ್ರವು ಗರ್ಭವನ್ನು ಭೇಧಿಸಿಕೊಂಡು ಬರಲು ಅದರ ದ್ವಾರಗಳನ್ನು ಮುಚ್ಚಿದನು, ಮೋಡಗಳನ್ನು ಅದಕ್ಕೆ ವಸ್ತ್ರಗಳನ್ನಾಗಿಯೂ ಕಾರ್ಗತ್ತಲನ್ನು ಸುತ್ತುಬಟ್ಟೆಯನ್ನಾಗಿಯೂ ಮಾಡಿದನು" (ಯೋಬ 38:4–11). ಆದರೆ ಇದಕ್ಕಿಂತಲೂ ಮುಂಚಿನ ಆರಂಭವೊಂದನ್ನು ಸತ್ಯವೇದದಲ್ಲಿ ಹೇಳಿಯದೆ: ಆ ದೇವಕುಮಾರರುಗಳು ಸೃಷ್ಟಿಸಲ್ಪಡುವುದಕ್ಕಿಂತಲೂ ಮೊದಲಿನ ಆರಂಭ: “ಆದಿಯಲ್ಲಿ ವಾಕ್ಯವಿತ್ತು, ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬಾತನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು. ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು; ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ (ಯೋಹಾನ 1:1–3) (ಗ್ರಂಥಶ್ರೇಣಿ:5 ಅಧ್ಯಾಯ 3 ನೋಡಿರಿ). ಯೆಹೋವನು ಎಂದೆಂದಿಗೂ ಇರುವಾತನಾಗಿದ್ದು ಆತನಿಗೆ ಆದಿಯೆಂಬುದಿಲ್ಲ. ದೇವರ ಪ್ರತಿರೂಪನು ಮಾತ್ರವೇ ಎಲ್ಲರಿಗಿಂತ ಅತ್ಯಂತ ವಿಶೇಷ ಲಕ್ಷಣ ಹೊಂದಿದವನಾಗಿದ್ದು, ಸೃಷ್ಟಿಗೆಲ್ಲಾ ಮೂಲನೂ, ಜೇಷ್ಠಪುತ್ರನ ಸ್ಥಾನ ಹೊಂದಿದವನೂ ಆಗಿದ್ದಾನೆ (ಪ್ರಕಟನೆ 3:14; ಕೊಲೊಸ್ಸೆ 1:15). ಇತರ ಆರಂಭಗಳು ವಿವಿಧ ದೇವದೂತರ ಕ್ರಮದಲ್ಲಿ ಒಂದರ ನಂತರ ಒಂದಾಗಿ ಸೃಷ್ಟಿಸಲ್ಪಟ್ಟವುಗಳಾಗಿವೆ; ಈ ಆರಂಭಗಳು ಮೊದಲೇ ಇದ್ದವುಗಳು ಎಂದು ಆದಿಕಾಂಡದಲ್ಲಿ ಹೇಳಿದೆ

ಆದಿಕಾಂಡದ ಹೇಳಿಕೆಗಳನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸುವಾಗ, ಪರಲೋಕ ಮತ್ತು ಭೂಲೋಕಗಳ ಆ ಸೃಷ್ಟಿಯಲ್ಲಿ ಭಿನ್ನತೆಯನ್ನು ಕಾಣುತ್ತೇವೆ (ವಚನ:1), ಮತ್ತು ನಂತರದ ಕಟ್ಟುಪಾಡುಗಳಲ್ಲಿ ಅಥವಾ ಅವನ್ನು ಕ್ರಮಪಡಿಸುವಲ್ಲಿ, ಮಾತ್ರವಲ್ಲದೆ ಸಸ್ಯ–ಪ್ರಾಣಿ ಜೀವಿಗಳನ್ನು ಸೃಷ್ಟಿಸುವಾಗ ಈ ವ್ಯತ್ಯಾಸವನ್ನು ನಾವು ಗ್ರಹಿಸಬಹುದು. ಈ ತರುವಾಯದ ಕ್ರಿಯೆಗಳನ್ನು ಯುಗಾರಂಭದ ಆರು ದಿನಗಳ ದೈವಿಕ ಸೃಷ್ಟಿಕಾರ್ಯಗಳೆಂಬುದಾಗಿ ವರ್ಣಿಸಲಾಗಿದೆ. ಎರಡನೆಯ ವಚನದ ಪ್ರಕಾರ ಈ ಭೂಮಿ ಇದ್ದಿತಾದರೂ ಅದು ಕ್ರಮವಿಲ್ಲದೆಯೂ, ಬರಿದಾಗಿಯೂ ಉಪಯೋಗವಿಲ್ಲದೆಯೂ, ಏನೂ ಇಲ್ಲದೆಯೂ ಮತ್ತು ಅಂಧಕಾರದಿಂದಲೂ ತುಂಬಿ ಕೊಂಡಿತ್ತು. ಈ ಮುಖ್ಯವಾದ ಅಂಶವನ್ನು ವೈಶಿಷ್ಟ್ಯಪೂರ್ಣವಾಗಿ ಪರಿಗಣಿಸಬೇಕಾಗುತ್ತದೆ. ಇದನ್ನು ಗುರುತಿಸುವುದಾದರೆ ಈವರೆಗಿನ ಭೂಗರ್ಭಶಾಸ್ತ್ರದ ಪುರಾವೆಗಳನ್ನು ತಕ್ಷಣವೇ ಸಮರ್ಥಿಸುವುದಾಗಿದೆ ಮತ್ತು ಭೂಗರ್ಭಶಾಸ್ತ್ರಿಗಳಿಗೆ ಕೆಲವು ಅಂಶಗಳ ಊಹಾಪೋಹದ ಬಗ್ಗೆ ಇರುವ ವಿವಾದಗಳ ಬಗ್ಗೆ ನಾವು ಅನುಮಾನಿಸಬೇಕಾಗುತ್ತದೆ. ಮಾತ್ರವಲ್ಲದೆ ನಾವು ಸತ್ಯವೇದದ ರಕ್ಷಣೆಗಾಗಿ ತೃಪ್ತಿಪಡಿಸಲು ಅಗತ್ಯವಿಲ್ಲದವುಗಳನ್ನು ತಡವಿಲ್ಲದೆ ಅಂಗೀಕರಿಸಿ ಅವುಗಳನ್ನೂ ವಿಸರ್ಜಿಸಬೇಕಾಗುತ್ತದೆ. ದೇವರು ಪರಲೋಕ ಭೂಲೋಕಗಳ ಸೃಷ್ಟಿಯ ಪ್ರಾರಂಭಕ್ಕೂ, ಅದನ್ನು ಮಾನವರಿಗಾಗಿ ಕ್ರಮಪಡಿಸುವ ವಾರದ ಆರಂಭಕ್ಕೂ ಎಷ್ಟುಕಾಲ ಕಳೆದಿರಬಹುದೆಂಬುದರ ಬಗ್ಗೆ ಸತ್ಯವೇದವು ಏನೂ

ಹೇಳುವುದಿಲ್ಲ; ಭೂವಿಜ್ಞಾನಿಗಳು ಸಹಾ ಈ ಮಧ್ಯಂತರ ಅವಧಿಯ ಬಗ್ಗೆ ತಮ್ಮಲ್ಲಿ ಸಮ್ಮತಿ ಸೂಚಿಸುವುದಿಲ್ಲ ಕೆಲವು ತೀವ್ರಗಾಮಿಗಳು ಮಾತ್ರ ಕೋಟ್ಯಾಂತರ ವರ್ಷಗಳೆಂಬ ಉಗ್ರ ಊಹಾಪೋಹಗಳನ್ನು ಹೊಂದಿದ್ದಾರೆ.

ಈಗ ಸೃಷ್ಟಿಯ ಕಾಲಾವಧಿಯ ಬಗ್ಗೆ ಬರುವಾಗ – ನಮ್ಮ ಪರಲೋಕ ಭೂಲೋಕಗಳಲ್ಲಿ ದೇವರ ಪರದೈಸನ್ನು ಮಾನವರ ಶಾಶ್ವತವಾಸ ಸ್ಥಳವಾಗಿ ಸಿದ್ಧಪಡಿಸುವ ಬಗ್ಗೆ ನಾವು ಲಕ್ಷ್ಯದಲ್ಲಿಡಬೇಕಾದುದೇನೆಂದರೆ, ಆ "ದಿವಸಗಳು" ಎಲ್ಲಿಯೂ 24 ಘಂಟೆ ಅವಧಿಯುಳ್ಳ ದಿನಗಳೆಂದು ಘೋಷಿತವಾದವುಗಳು ಅಲ್ಲವಾದ್ದರಿಂದ ನಾವು ಅವನ್ನು ಮಿತಿಗೊಳಿಸಲು ಒತ್ತಾಯ ಪಡಿಸಲಾಗದು. ನಾವು ಸತ್ಯವೇದದಲ್ಲಿ "ದಿನ" ಎಂಬ ಪದವು ಯುಗ ಅಥವಾ ಕಾಲಾವಧಿಗೆ ಸೂಚಕವಾಗಿರುವುದನ್ನು ಕಾಣುತ್ತೇವೆ. ಅದನ್ನು 24 ಘಂಟೆಗಳ ಅವಧಿ ಎಂಬುದಾಗಿ ಬಹಳ ವಾಡಿಕೆಯಾಗಿರುವುದರ ಬಗ್ಗೆ ನಮಗೆ ಅರಣ್ಯದಲ್ಲಿ ಇಸ್ರಾಯೇಲ್ಯರು 40 ವರ್ಷಗಳ ಕಾಲ ಪ್ರಯಾಣಿಸಿದರೆಂಬ... (ಕೀರ್ತನೆ 95 : 8–10) ದಾಖಲೆಗಳಿರುವವರೆಗೆ ನಮಗೇನೂ ಅಭ್ಯಂತರವಿಲ್ಲ. ಕೆಲವೊಮ್ಮೆ "ದಿನ" ಮತ್ತು "ಕಾಲ" ಇವುಗಳು ಒಂದು ವರ್ಷ ಅವಧಿಯನ್ನು ಪ್ರತಿನಿಧಿಸುತ್ತವೆ (ಅರಣ್ಯ 14: 33,34 ಮತ್ತು ಯೆಹೆ. 4:1–8) ಅಪೊಸ್ತಲನಾದ ಪೇತ್ರನು ಸಹ **"ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರ್ಷಗಳಂತೆಯೂ, ಸಾವಿರ ವರ್ಷಗಳು ಒಂದು ದಿನದಂತೆಯೂ ಅವೆ"** (2 ಪೇತ್ರ 3:8) ಎಂದಿದ್ದಾನೆ. ಸಂಶಯಾತೀತವಾಗಿ, ಈ ಯುಗಾರಂಭದ ದಿನಗಳು ಸೂರ್ಯನ ದಿನಗಳಾಗಿರಲಿಲ್ಲ. ಸೂರ್ಯನು ನಾಲ್ಕನೆಯ ದಿನದವರೆಗೆ – ನಾಲ್ಕನೆಯ ಯುಗಾರಂಭ ದಿನದವರೆಗೆ ಕಂಡುಬರಲಿಲ್ಲ ಎಂಬುದು ದಾಖಲಾಗಿದೆ.

ಯುಗಾರಂಭ ದಿನಗಳ ಅವಧಿಯ ಬಗ್ಗೆ ಸರಿಯಾದ ಸೂಚನೆಗಳು ಇಲ್ಲವಾದರೂ, ಅವುಗಳು ಸೃಷ್ಟಿ ವಾರದ ದಿನಗಳಾಗಿ ಏಕ ಪ್ರಕಾರವಾಗಿ ಮುಕ್ತಾಯಗೊಂಡ ಕಾರಣ ಈ ಯುಗಾರಂಭ ದಿನಗಳು ಸರಿ ಸಮಾನ ಕಾಲಾವಧಿ ಹೊಂದಿದ್ದವೆಂದು ನಮ್ಮ ವಾಚಕರು ಒಪ್ಪಿಕೊಳ್ಳುತ್ತಾರೆಂದು ನಾವು ನಂಬುತ್ತೇವೆ. ಆದ ಕಾರಣ ನಮಗೆ ಇವುಗಳಲ್ಲಿ ಒಂದು ದಿನದ ಅವಧಿಯ ಬಗ್ಗೆ ಸಮಂಜಸವಾದ ಮಾಹಿತಿ ಏನಾದರೂ ದೊರೆತಲ್ಲಿ ನಾವು ಇತರ ದಿನಗಳ ಅವಧಿಯೂ ಅದರಷ್ಟೇ ಇತ್ತೆಂದು ನ್ಯಾಯ ಯುತವಾಗಿ ಊಹಿಸಬಹುದಾಗಿದೆ. ಈ ಸೃಷ್ಟಿ ದಿನಗಳಲ್ಲಿ ಒಂದು ದಿನದ ಅವಧಿ ಏಳು ಸಾವಿರ ವರ್ಷಗಳಾಗಿತ್ತೆಂದೂ, ಈ ಕಾರಣ ಇಡೀ ಸೃಷ್ಟಿ ವಾರದ ಅವಧಿಯು 7,000 X 7= 49000 ವರ್ಷಗಳಾಗಿವೆ. ಈ ಅವಧಿಯು ಕೆಲವು ಭೂವೈಜ್ಞಾನಿಕ ಊಹೆಗಳೊಂದಿಗೆ ಹೋಲಿಸಿದಾಗ ಅತ್ಯಂತ ಸೂಕ್ಷ್ಮವಾಗಿ ಕಂಡುಬರುವುದಾದರೂ ನಾವು ಅದರಲ್ಲಿ ಪೂರೈಸಲ್ಪಟ್ಟ ಕಾರ್ಯಗಳನ್ನು – ಈಗಾಗಲೇ ಇದ್ದ ಕ್ರಮವಿಲ್ಲದೆಯೂ ಬರಿದಾಗಿಯೂ ಇದ್ದ ಭೂಮಿಯನ್ನು ಕ್ರಮಪಡಿಸುವುದು ಮತ್ತು ತುಂಬಿಸುವುದು ಇತ್ಯಾದಿಗಳನ್ನು ನೋಡಿ ಅವು ಯುಕ್ತವಾಗಿ ವಿಫುಲವಾಗಿತ್ತೆಂದು ನಂಬುತ್ತೇವೆ.

ವಿಜ್ಞಾನಿಗಳ ಊಹೆಗಳಿಗೆ ಆಧಾರವಾದ ಮಾಹಿತಿಗಳ ಬಗ್ಗೆ ಮತ್ತು ಅವರು ಪ್ರಯೋಗಿಸಿದ ಲೆಕ್ಕಾಚಾರಗಳನ್ನು ಕುರಿತು ಪ್ರೊ॥ ದಾನಾ ರವರು ಟೀಕೆ ಮಾಡುತ್ತಾ ಹೀಗೆ ಹೇಳಿದ್ದಾರೆ :

"ಕಾಲ ಗತಿಸಿದಂತೆ ಭೂಮಿಯು ಸದಾ ಕುಸಿಯುತ್ತಿರುವುದರಿಂದ ಈ ದಟ್ಟವಾದ ರಚನೆಯ ಮೇಲೆ ಹೊಂದಿಕೊಂಡು ಮಾಡುವ ಲೆಕ್ಕಾಚಾರದಲ್ಲಿ ಯಾವಾಗಲೂ ಅನಿಶ್ಚಿತತೆ ಕಂಡುಬರುತ್ತದೆ. ಕೆಸರು ನೆಲದಲ್ಲಿ ನೀರಿನಿಂದ ಮರಳು ಕೂಡಿಡುವ ಬಗ್ಗೆ ಮಾಡುವ ಅಂದಾಜಿ ನಲ್ಲಿಯೂ, ಮಾಹಿತಿಯು ಕೊಡಲ್ಪಟ್ಟ ವರ್ಷಗಳಲ್ಲಿ (ಕಳೆದ 2000 ವರ್ಷವೆಂದು ಹೇಳೋಣ) ರಾಶಿಗೊಳ್ಳುವುದರ ಮೇಲೆ ಆಧಾರಗೊಂಡಿರುವಾಗ ಉಂಟಾಗುವ ಅನುಮಾನಗಳು ಇಡೀ ಲೆಕ್ಕಾಚಾರವನ್ನು ಬುಡಮೇಲು ಮಾಡಬಹುದಾಗಿದ್ದು ಅದನ್ನು ಹೆಚ್ಚು ಕಡಿಮೆ ಯೋಗ್ಯವಲ್ಲದನ್ನಾಗಿಸಿಬಿಡುತ್ತದೆ... ಈ ಅಂದಾಜು ಘನ ಪದಾರ್ಥಗಳಿಂದ ಕ್ರಮೇಣವಾಗಿ ಸವಕಳಿಯಾದವುಗಳ ಮೇಲೆ ಅವಲಂಬಿಸಿದಾಗ ಹೆಚ್ಚು ಮಹತ್ವವುಳ್ಳದ್ದಾಗಿರುತ್ತದೆ; ಆದರೆ ಇಲ್ಲಿಯೂ ಹೆಚ್ಚಿನ ಅನುಮಾನಗಳಿಗೆ ಆಸ್ಪದವುಂಟು."

ಈ ಸಂಗತಿಗಳನ್ನು ದೇವರ ಪ್ರಕಟನೆಯೆಂದೇ ನಾವು ನಂಬಿರುವ ಸತ್ಯವೇದದ ದೃಷ್ಟಿಕೋನದಲ್ಲಿ ಪರೀಕ್ಷಿಸೋಣ. ಯಾಕೆಂದರೆ, ಸತ್ಯವೇದದ ಪುರಾವೆ ಮತ್ತು ಭೂವಿಜ್ಞಾನಿಗಳ ಊಹೆಗಳ ನಡುವೆ ಯಾವುದೇ ವ್ಯತ್ಯಾಸಗಳು ಕಂಡುಬಂದಾಗ್ಯೂ ತಪ್ಪುಗಳು ಎರಡನೆಯವರದೇ ಆಗಿರುವುದಕ್ಕೆ ಅವರ ತತ್ವಜ್ಞಾನವು ಪೂರ್ಣವಾದ ವೈಜ್ಞಾನಿಕ ನೆಲೆಯನ್ನಾಗಲಿ ಬೆಳವಣಿಗೆಯನ್ನಾಗಲೀ ಇನ್ನೂ ತಲುಪಿರುವುದಿಲ್ಲ.

ಆದಿಕಾಂಡದ ಬರಹಗಾರನು ತಾನು ದಾಖಲಿಸಿರುವ ಎಲ್ಲಾ ಸಂಗತಿಗಳ ಬಗ್ಗೆ – ಆ ದಿನಗಳ ವಿಸ್ತಾರ ಮತ್ತು ಅವುಗಳ ನಿಖರವಾದ ಫಲಿತಾಂಶ ಇವುಗಳ ಬಗ್ಗೆ ಚೆನ್ನಾಗಿ ತಿಳುಕೊಂಡಿದ್ದನೆಂಬುದಾಗಿ ಊಹಿಸುವ ಅಗತ್ಯವಿಲ್ಲ. ಆದಿಕಾಂಡದ ವಿವರಣೆಗಳು ದೈವಿಕ ಪ್ರಕಟಣೆಯಾದ ಸತ್ಯವೇದದ ಒಂದು ಭಾಗವೆಂಬುದಾಗಿ ನಾವು ಒಪ್ಪುತ್ತೇವೆ. ಮತ್ತು ಅವುಗಳ ಗಂಭೀರವಾದ ಹೇಳಿಕೆಗಳು ಸಂದಿಗ್ಧವಾದ ವೈಜ್ಞಾನಿಕ ಸಂಶೋಧನೆಗಳಲ್ಲಿ ಕೆಲವೇ ವಾಕ್ಯಗಳಲ್ಲಿ ಬಹಳ ಅಸಾಧಾರಣವಾದ ರೀತಿಯಲ್ಲಿ ಧೃಢಪಡುವುದನ್ನು ನಾವು ನೋಡುವವರಾಗಿದ್ದೇವೆ. ಇದಕ್ಕೆ ವಿರೋಧವಾಗಿ, ಯಾವುದೇ ಅನ್ಯಧಾರ್ಮಿಕ ಪುಸ್ತಕಗಳಲ್ಲಿ ಈ ಸಂಗತಿಗಳ ಬಗ್ಗೆ ಅಸಂಬದ್ಧ ಹೇಳಿಕೆಗಳಲ್ಲದೇ ಬೇರೇನೂ ಇರುವುದಿಲ್ಲ.

**"ಆದಿಯಲ್ಲಿ ದೇವರು ಉಂಟುಮಾಡಿದನು"** ಎಂಬ ದೇವರ ಪ್ರಕಟನೆಯ ಆರಂಭದ ಹೇಳಿಕೆಯಲ್ಲಿ ನಿರಾಡಂಬರತೆಯ ಭವ್ಯತೆ ಇದೆ. ಅದು ಉದ್ದೇಶದ ಮೊದಲನೆ ವಿಚಾರಣೆಗಳಾದ ನಾನು ಯಾವುದರಿಂದ (ಎಲ್ಲಿಂದ) ಬಂದೆ?, ನಾನು ಯಾರಿಗೆ ಜವಾಬ್ದಾರನಾಗಿದ್ದೇನೆ ಎಂಬ ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸುವುದಾಗಿದೆ. ನಮ್ಮ ಪ್ರಕಾಶಮಾನವಾದ ದಿನದಿಂದ ಕೆಲವು ಪ್ರಕಾಶಯುತ ಮನಸ್ಸುಗಳು ಜ್ಞಾನವಂತ ಸೃಷ್ಟಿಕರ್ತನ ಇರುವಿಕೆಯ ಬಗ್ಗೆ ತಮ್ಮ ಅಲೋಚನೆಗಳಿಗೆ ಬೆನ್ನು ಹಾಕಿ ಒಂದು ಅಂಧಶಕ್ತಿಯಿಂದ ಕಾರ್ಯವೆಸಗುತ್ತಿರುವ ವಿಕಾಸವಾದ ಮತ್ತು **"ಅರ್ಹರು ಮಾತ್ರ ಬದುಕುಳಿಯುತ್ತಾರೆ"** (Surival of the fittest) ಎಂಬುದನ್ನು ಅಂಗೀಕರಿಸುತ್ತವೆ. ಅಯ್ಯೋ! ಈ ವಾದವು ಉಚ್ಚ ವಿದ್ಯಾಸಂಸ್ಥೆಗಳ ಸರ್ವಸಾಮಾನ್ಯ ಅಂಗೀಕಾರ ಪಡೆದುದೆಯಲ್ಲದೆ, ಕ್ರಮೇಣವಾಗಿ ನಮ್ಮ ಸಾಮಾನ್ಯ ಶಾಲೆಗಳ ಪಠ್ಯ ಪುಸ್ತಕಗಳಲ್ಲಿಯೂ ಅಳವಡಿಸಿಕೊಳ್ಳಲಾಗಿದೆ.

ನಿಜವಾಗಿಯೂ, ಸೃಷ್ಟಿಕರ್ತನ ಇರುವಿಕೆಯನ್ನು ಕೆಲವರು ಧೈರ್ಯವಾಗಿ ಅಲ್ಲಗಳೆಯುವುದಿಲ್ಲವಾದರೂ, ಧರ್ಮನಿಷ್ಠರು ಸಹಾ ಸೃಷ್ಟಿಯು ಪ್ರಕೃತಿ ಸಹಜವೆಂದು ಸಾಧಿಸುವುದರ ಮೂಲಕ ಈ ವಾದದಡಿಯಲ್ಲಿ ತಮ್ಮ ವಿಶ್ವಾಸದ ಚೌಕಟ್ಟನ್ನು ಕಡೆಗಣಿಸುತ್ತಾರೆ. ಹೆಚ್ಚು ಹಿಂದಕ್ಕೆ ಹೋಗಬೇಕಾಗಿಲ್ಲ, ಅವರು ಸೂರ್ಯನು ಅಪಾರವಾದ ಅನಿಲವನ್ನು ಹೊರಹಾಕುತ್ತಾನೆ ಮತ್ತು ಈ ಅನಿಲವು ಅಂತಿಮವಾಗಿ ಶೇಖರಗೊಂಡು ನಮ್ಮ ಭೂಮಿಯನ್ನು ಉಂಟುಮಾಡಿದೆ; ಕೂಡಲೇ ಜೀವದ್ರವ್ಯವು ಉತ್ಪತ್ತಿಗೊಂಡು ಆದರಿಂದ ಸೂಕ್ಷ್ಮ ಜೀವಿಗಳು ಹುಟ್ಟಿಕೊಂಡವು ಎನ್ನಲಾಗಿದೆ. ಆದರೆ, ಇದೆಲ್ಲಾ ಹೇಗಾಯಿತೆಂದು ಅವರಿಗೆ ತಿಳಿದಿರುವುದಿಲ್ಲ! ಈ ರೀತಿಯಲ್ಲಿ ಒಂದು ಸಣ್ಣಜೀವಿಯೂ ಉತ್ಪನ್ನವಾಗಬೇಕಾದರೂ ದೈವಿಕ ಶಕ್ತಿಯ ಅಗತ್ಯವಿದೆ ಎಂಬುದನ್ನು ಅವರು ಒಪ್ಪಿಕೊಳ್ಳಲೇಬೇಕು – ಅದರೆ, ಅವರು ಇದಕ್ಕಾಗಿ ಒಂದು ಸ್ವಾಭಾವಿಕ ನಿಯಮವನ್ನು ಉದ್ಯಮಶೀಲರಂತೆ ಹುಡುಕುತ್ತಿದ್ದಾರೆ. ಈ ರೀತಿಯಲ್ಲಿ ಸೃಷ್ಟಿಕರ್ತನಾದ ದೇವರ ಅಗತ್ಯತೆ ಅವರಿಗೆ ತೋಚುತ್ತಿಲ್ಲ. ಈ ಕಂಡುಹಿಡಿಯುವಿಕೆಯು ಬಹು ಮಟ್ಟಿಗೆ ಯಶಸ್ವಿಯಾಗಿದೆ ಯೆಂದು ಸಹಾ ಹೇಳಲಾಗುತ್ತಿದೆ. ಈ **"ಪ್ರಬುದ್ಧರುಗಳು"** ದೇವರ ಬದಲಾಗಿ ಪ್ರಕೃತಿಯ ಬಗ್ಗೆ ಅದರ ಕಾರ್ಯಗಳು, ಅದರ ನಿಯಮಗಳು, ಅದರ ಪ್ರತಿಫಲಗಳು ಇವುಗಳ ಬಗ್ಗೆ ಅಲೋಚಿಸುತ್ತಾರೆ ಮತ್ತು ಮಾತನಾಡುತ್ತಾರೆ. ಇದು ನಿಜವಾಗಿ ಕಣ್ಣೂ, ಕಿವಿಯೂ ಇಲ್ಲದ ದೇವರಾಗಿದೆ!

ಪ್ರಕೃತಿ ನಿಯಮದಡಿಯಲ್ಲಿ ಜೀವದ್ರವ್ಯದಿಂದ (Protoplasm) ಸೂಕ್ಷ್ಮಜೀವಾಣುಗಳೂ, ಹುಳುಗಳೂ (Maggots) ವಿಕಸಿತಗೊಂಡವು, ನಂತರ ಇವುಗಳು ತೆವಳಿಕೊಂಡು ಮತ್ತು ತಿರುವಿಕೊಂಡು ತಮ್ಮ ಸ್ವಜಾತಿಯವುಗಳನ್ನು ಸೃಷ್ಟಿಸಿಕೊಂಡವು. ನಂತರದಲ್ಲಿ ಬಾಲವೊಂದರ ಉಪಯೋಗ ಕಂಡು ಬಂದು ಅದನ್ನು ಸಹಾ ಬೆಳೆಸಿಕೊಂಡವು ಎಂದು ಹೇಳಲಾಗುತ್ತದೆ. ಇದಾದ ನಂತರ, ಇವುಗಳಲ್ಲಿ ಇನ್ನೂ ಹೆಚ್ಚು ಬುದ್ದಿಶಾಲಿ ಸಂತತಿಯು ಈಜುರೆಕ್ಕೆಗಳು ಉಪಯೋಗಕರ ಎಂಬ ತೀರ್ಮಾನಕ್ಕೆ ಬಂದು ಅವುಗಳನ್ನು ಬೆಳೆಸಿಕೊಂಡವು. ನಂತರದಲ್ಲಿ ಹಸಿವೆಯಿಂದ ಅಟ್ಟಿಸಲ್ಪಟ್ಟ ಜೀವಿಗಳಿಂದ ಮತ್ತೊಂದು ಜೀವಿಯು ನೀರಿನಿಂದ ಹೊರಗೆ ಹಾರುವಂತೆ, ಈ ಈಜುರೆಕ್ಕೆಗಳು ಮುಂದುವರೆದು ಹಾರುವ ರೆಕ್ಕೆಗಳಾಗುವ ಅಲೋಚನೆ ಮಾಡಿತು. ಇದರಂತೆಯೇ ಆದಾಗ ಈ ನೂತನ ಶೈಲಿಯನ್ನು ಹೊಂದಿಕೊಂಡಂತೆ ನೀರಿನ ಹೊರಗೆ ಜೀವಿಸಲಾರಂಭಿಸಿತು. ನಂತರ ಅದು ಕಾಲು ಮತ್ತು ಕಾಲಿನ ಬೆರಳುಗಳಿದ್ದರೆ ಮತ್ತಷ್ಟು ಅನುಕೂಲವಾದೀತೆಂದು ಅಲೋಚಿಸಿ ಅವುಗಳನ್ನು ಬೆಳೆಸಿಕೊಂಡಿತು. ಇದೇ ಕುಟುಂಬಕ್ಕೆ ಸೇರಿದ ಮತ್ತೆ ಕೆಲವು ಜೀವಿಗಳು ಬೇರೆ "ಕಲ್ಪನೆ"ಗಳನ್ನು ಅನುಸರಿಸಿದವು. ಬಹುಶಃ ಇಂತಹ ಉದ್ದೇಶಗಳು ಮುಗಿಯದಂತೆ ಅವುಗಳಿಗೆ ಒದಗಿ ಬರುತ್ತಿತ್ತೆಂದು ನಮ್ಮ ಸುತ್ತಲಿರುವ ವಿಭಿನ್ನ ಪ್ರಾಣಿಗಳಿಂದ ನಮಗೆ ಸ್ಪಷ್ಟವಾಗುತ್ತದೆ. ಹೀಗಿದ್ದಾಗ್ಯೂ, ಸೂಕ್ತಸಮಯದಲ್ಲಿ ಮಂಗನವರೆಗೆ ಬೆಳೆದುಬಂದಿದ್ದ ಪ್ರಥಮ ಹುಳು(Maggots)ವಿನ ಒಂದು ಸಂತತಿಗೆ ಶ್ರೇಷ್ಟವಾದ ಒಂದು ಆಲೋಚನೆ ಹೊಳೆಯಿತು. ಅದು ತನ್ನಷ್ಟಕ್ಕೆ ತನ್ನ ಮನಸ್ಸಿನಲ್ಲಿ ನಾನು ನನ್ನ ಬಾಲವನ್ನು ತ್ಯಜಿಸುತ್ತೇನೆ, ನನ್ನ ಕೈಗಳನ್ನು ಕಾಲಿನಂತೆ ಉಪಯೋಗಿಸುವುದನ್ನು ಬಿಟ್ಟುಬಿಡುತ್ತೇನೆ, ನನ್ನ ಕೂದಲನ್ನು ಸಹ ಉದುರಿಸಿ ಹಾಕುತ್ತೇನೆ ಮತ್ತು ಮೂಗು ಹಣೆ, ಮಿದುಳು ಹಾಗೂ ನೀತಿಯುಕ್ತವಾದ ಮತ್ತು ಆಲೋಚನಾತ್ಮಕ ಅಂಗಗಳನ್ನು ಬೆಳೆಸಿಕೊಳ್ಳುತ್ತೇನೆ. ನಾನು ದರ್ಜಿ ಹೊಲಿದ ಉಡುಪುಗಳನ್ನು, ಉತ್ತಮ ರೇಷ್ಮೆಯ ಟೋಪಿಯನ್ನು ಧರಿಸುತ್ತೇನೆ ಮತ್ತು ನನ್ನನ್ನು ಡಾರ್ವಿನ್ ಎಲ್.ಎಲ್.ಡಿ ಎಂದು ಕರೆದುಕೊಳ್ಳುತ್ತೇನೆ ಮತ್ತು ವಿಕಾಸವಾದದ ದಾಖಲೆಯನ್ನು ಬರೆಯುತ್ತೇನೆ ಎಂದು ಹೇಳಿಕೊಳ್ಳುತ್ತದೆ.

ಈ ಡಾರ್ವಿನ್ ಎಂಬಾತನು ಕುಶಲನಾಗಿದ್ದನು ಎಂಬುದು ಅವನು ಯಾವ ರೀತಿಯಲ್ಲಿ ತನ್ನ ವಾದಗಳಿಂದ ಸಂಗಡಿಗರನ್ನು ವಂಚಿಸಿದನೆಂದು ಇದರಿಂದ ಸ್ಪಷ್ಟವಾಗುತ್ತದೆ. ಆದಾಗ್ಯೂ, ದೇವರ ಪ್ರಕಟನೆ ಎಂದು ತಾನು ನಂಬಿರುವ ಸತ್ಯವೇದವನ್ನು ಅವಸರದಿಂದ ತ್ಯಜಿಸಲಾರದ ಭಕ್ತಿವಂತ ದೇವರ ಮಗುವು, ಕೂಡಲೆ ಡಾರ್ವಿನ್ನನ ವಾದದಲ್ಲಿರುವ ಕುತರ್ಕವನ್ನು ಕಂಡುಕೊಳ್ಳುತ್ತದೆ. ಡಾರ್ವಿನ್ನನು ತನ್ನಲ್ಲಿರುವ ಪಾರಿವಾಳಗಳಿಂದ ಬೇಕಾದಂತೆ ರೆಕ್ಕೆಪುಕ್ಕ ತಲೆಯ ಮೇಲೆ ಜುಟ್ಟು, ಚಾಚಿದ ಗಂಟಲು ಇತ್ಯಾದಿಗಳನ್ನು ಬೆಳೆಸಲು ಶಕ್ತನಾಗಿದ್ದೇನೆಂದು ಹೇಳಿಕೊಂಡರಷ್ಟೇ ಸಾಲದು. ಇತರರೂ ಇದನ್ನೇ ತಮ್ಮ ಕೋಳಿ, ನಾಯಿ ಮತ್ತು ಕುದುರೆ ಮುಂತಾದ ಸಾಕಣಿಕೆ ಕೇಂದ್ರಗಳಲ್ಲಿ ಮಾಡಿದ್ದಾರೆ. ಮತ್ತು ಹೂವಾಡಿಗರು ಹೂವುಗಳು ಮತ್ತು ಕುರುಚಲು ಗಿಡಗಳೊಂದಿಗೆ ತಮ್ಮ ಪ್ರಯೋಗಗಳನ್ನು ಮಾಡಿ ಅದೇ ರೀತಿಯ ಫಲಿತಾಂಶ ಪಡೆದಿದ್ದಾರೆ. ಡಾರ್ವಿನ್ನನ ಹೊಸ ಸಂಗತಿಯೆಂದರೆ ಎಲ್ಲಾ ರೀತಿಯ ಜೀವಿಗಳೂ ಸಾಮಾನ್ಯವಾದ ಅರಂಭದಿಂದ ವಿಕಸಿತಗೊಂಡವು ಎಂಬ ಆತನ ವಿಕಾಸವಾದ.

ಆದರೆ, ಪಾರಿವಾಳಗಳೊಂದಿಗೆ ಡಾರ್ವಿನ್ನನು ನಡಿಸಿದ ಪ್ರಯೋಗದ ಅನುಭವಗಳು, ಇತರ ಯಾವುದೇ ಕಲ್ಪನಾ ತಳಿ ಪೋಷಕರಂತೆ ಸತ್ಯವೇದದ ಹೇಳಿಕೆಯಾದ ದೇವರು ಎಲ್ಲಾ ಜಾತಿಗನುಸಾರ ಉಂಟುಮಾಡಿದನು ಎಂಬುದನ್ನು ಧೃಢಪಡಿಸುತ್ತದೆ. ಪ್ರತಿಯೊಂದು ಜಾತಿಯಲ್ಲಿಯೂ ಆಶ್ಚರ್ಯಕರವಾದ ವಿವಿಧ ವರ್ಗಗಳ ಸಾಧ್ಯತೆ ಇದೆ. ಆದರೆ ಇವುಗಳನ್ನು ಮಿಶ್ರ ಮಾಡುವುದಾಗಲೀ, ನೂತನ ವಾದುವುಗಳನ್ನು ಉಂಟು ಮಾಡುವುದಾಗಲೀ ಸಾಧ್ಯವಿಲ್ಲ. ಇದರ ಹತ್ತಿರದ ಸಮೀಪಿಸುವಿಕೆ ಯನ್ನು "ಬೆರಕೆ" (mule-ing) ಎನ್ನುತ್ತಾರೆ. ಆದರೆ, ಈ ರೀತಿಯಲ್ಲಿ ಉಂಟುಮಾಡಲ್ಪಟ್ಟ ಪ್ರಾಣಿಗಳಿಗೆ ಅದರ ಜಾತಿಯನ್ನು ಶಾಶ್ವತವಾಗಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಿಲ್ಲವೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಇತರರು ಮಾಡಿದಂತೆ ಡಾರ್ವಿನ್ನನು ತನ್ನ ಕಲ್ಪನಾ ಪಾರಿವಾಳಗಳನ್ನು ಜಾಗರೂಕತೆಯಿಂದ ಅದರ ಜಾತಿಯವುಗಳಿಂದ ಬೇರೆಯಾಗಿಯೇ ಇಡಬೇಕು, ಇಲ್ಲವಾದಲ್ಲಿ ಅವು ತ್ವರಿತವಾಗಿ ಸಾಮಾನ್ಯ ಮಟ್ಟಕ್ಕೆ ಇಳಿದುಬಿಡುತ್ತದೆ ಎಂಬುದನ್ನು ಗಮನಿಸಿದ್ದಿರಬೇಕು. ಆದರೆ ನಾವು ಪ್ರಕೃತಿಯಲ್ಲಿ ವಿವಿಧ ಜಾತಿಯ ಪ್ರಾಣಿಪಕ್ಷಿಗಳನ್ನು ನೋಡುತ್ತೇವೆ. ಇವುಗಳಲ್ಲಿ ಪ್ರತಿಯೊಂದೂ ತಮ್ಮ ಜಾತಿಗೇ ಸೇರಿದವು ಮತ್ತು ಇತರವುಗಳಿಂದ ಬೇರೆಯಾದವುಗಳೇ ಆಗಿವೆ ಮತ್ತು ಈ ರೀತಿಯಾಗಿ ಅವು ಯಾವುದೇ ಕೃತಕ ಬೇಲಿಯೊಳಗೆ ಇಡಲ್ಪಟ್ಟಿರುವುದಿಲ್ಲ. ಅವು ತಮ್ಮ ಸೃಷ್ಟಿಕರ್ತನ ನಿಮಯದೊಳಗೆ ಆ ರೀತಿಯಾಗಿ ಇಡಲ್ಪಟ್ಟಿವೆ. ಮಾನವ ವಿಚಾರಗಳು ದೇವರ ಇರುವಿಕೆಯನ್ನು, ಆದಿಕಾಂಡದಲ್ಲಿ ಮುಖ್ಯ ಅಂಶಗಳಾಗಿ

ಕಂಡು ಬರುವ ಆತನ ಜ್ಞಾನ ಮತ್ತು ಶಕ್ತಿಯನ್ನು ನಿರ್ಲಕ್ಷಿಸುವ ಮಟ್ಟಿಗೆ ಸತ್ಯವನ್ನು ಕಳೆದುಕೊಂಡಿದೆಯೆಂದು ಸೃಷ್ಟಿಕರ್ತನ ನಂಬಿಗಸ್ತರಾದ ನಮಗೆ ಇವುಗಳಿಂದ ದೃಢವಾಗುತ್ತದೆ.

ದೇವರು ನಮ್ಮ ಸೃಷ್ಟಿಕರ್ತನು ಎಂಬ ನಂಬಿಕೆಗೆ, ಆದಿಕಾಂಡದ ಯುಗಾರಂಭ ದಿನಗಳನ್ನು ಕೇವಲ 24 ಘಂಟೆಗಳ ದಿನಗಳೆಂದು ತಪ್ಪಾಗಿ ಭಾವಿಸಿರುವುದಕ್ಕಿಂತ ಹೆಚ್ಚಾದ ಮುಸುಕನ್ನು ಅಥವಾ ಒಳಸಂಚನ್ನು ಬೇರೆ ಯಾವುದೂ ಮಾಡಿರಲಿಕ್ಕಿಲ್ಲ. ಕಲ್ಲು ಬಂಡೆ ಮತ್ತು ಜೇಡಿ ಮಣ್ಣುಗಳ ಪದರು ಪದರಾದ ಜೋಡಣೆ ಬಲವಾದ ಬದಲಾವಣೆಗಳಾಗಲು ದೀರ್ಘ ಕಾಲ ಹಿಡಿಸಿವೆ ಎಂಬುದನ್ನು ಎಲ್ಲಾ ವಾಗ್ವಾದಗಳನ್ನು ಮೀರಿ ರುಜುವಾತುಪಡಿಸುತ್ತವೆ. ಸತ್ಯವೇದವು ನಮಗೆ ಯುಗಾರಂಭ ದಿನಗಳ ಬಗ್ಗೆ ತಿಳಿಸಿಕೊಡುತ್ತವೆಯೆಂದು ನೋಡುವಾಗ, ಸತ್ಯವೇದದಲ್ಲಿರುವ ಸಾಕ್ಷಿಗಳನ್ನೇ ಬಂಡೆ ಕಲ್ಲುಗಳು ಸಹ ನಮಗೆ ಒದಗಿಸುತ್ತವೆಂದು ಕೇಳಲು ನಾವು ಸಿದ್ಧರಿದ್ದೇವೆ ಮತ್ತು ಎರಡನೆಯದಾಗಿ ನಮ್ಮ ನಂಬಿಕೆಯು ಹೆಚ್ಚಾದ ರೀತಿಯಲ್ಲಿ ಬಲಗೊಳ್ಳುತ್ತದೆ. ನಾವು ನಮ್ಮವುಗಳನ್ನು ಮಾತ್ರ ನಂಬುತ್ತಿಲ್ಲ ಅಥವಾ ಇತರರ ಊಹೆಗಳನ್ನೂ ಅಲ್ಲ, ಆದರೆ, ಪ್ರಕೃತಿಯ ಸಹಜತೆಗಳಿಂದ ಪ್ರಾಮಾಣೀಕರಿಸಲ್ಪಟ್ಟ ಸೃಷ್ಟಿಕರ್ತನ ಮಾತುಗಳನ್ನು ಎಂದು ಭಾವಿಸುತ್ತೇವೆ.

## ವಿಶ್ವಸೃಷ್ಟಿಯ ಒಂದು ವಿಚಾರ ಸರಣಿ
## (A Theory of Cosmogony)

ನಮ್ಮ ಕೆಲವು ಓದುಗರ ಸಲುವಾಗಿ ನಾವು ಕ್ರಿಯಾತ್ಮಕ ಅವಧಿಯ ಬಗ್ಗೆ ನಮ್ಮ ಲೇಖಕರನ್ನು ವಿಶೇಷವಾದ ರೀತಿಯಲ್ಲಿ ಆಕರ್ಷಿಸಿದ "The Vailian Theory" ಅಥವಾ "Canopy Theory" ಎಂಬುದರ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ಹೇಳುವವರಾಗಿದ್ದೇವೆ. ಕ್ರಮೇಣವಾಗಿ ಇದು ಯಾವ ರೀತಿಯಲ್ಲಿ ಆದಿಕಾಂಡದ 1:1 ಮತ್ತು 2:3 ರಲ್ಲಿನ ನಿರೂಪಣೆಗಳೊಂದಿಗೆ ಸಾಮರಸ್ಯ ಹೊಂದಿವೆ ಎಂದು ಕಂಡು ಹಿಡಿಯುವ ಪ್ರಯತ್ನ ಮಾಡುತ್ತೇವೆ.

ಆದಿಕಾಂಡ 1:2ರಲ್ಲಿನ ಪ್ರಾರಂಭದ ಪರಿಸ್ಥಿತಿಯಂತೆ, **"ಆಗ ಈ ಭೂಮಿಯು ಕ್ರಮವಿಲ್ಲದೆಯೂ, ಬರಿದಾಗಿಯೂ. ಕತ್ತಲೆಯಿಂದ ತುಂಬಿದ್ದಾಗಿಯೂ ಇತ್ತು"**, ಯಾವ ರೀತಿಯಲ್ಲಿ ದೇವರು ಪೂರ್ವದಲ್ಲಿ ಭೂಮಿಯ ಕಣಗಳನ್ನು ಶೇಖರಿಸಲು ಸಾಧ್ಯವಾಯಿತು ಎಂದು ತಿಳಿಸದ ಸಂಗತಿಯ ಬಗ್ಗೆ ಜ್ಞಾನಿಗಳು ಊಹಿಸಲು ಪ್ರಯತ್ನಿಸುವುದಿಲ್ಲ. ಬಯಲುಪಡಿಸದ ಈ ಸಂಗತಿಗಳು (ರಹಸ್ಯಗಳು) ದೇವರಿಗೆ ಸೇರಿವೆ ಅವು ಸೂಕ್ತ ಸಮಯದಲ್ಲಿ ಪ್ರಕಟಗೊಳ್ಳುವಂತೆ ನಾವು ತಾಳ್ಮೆಯಿಂದ ಕಾಯುವುದು ಒಳ್ಳೆಯದು. ಕೈಯಲ್ಲಿ ಹಾರೆ, ಗುದ್ದಲಿಗಳನ್ನು ತೆಗೆದುಕೊಂಡು, ವಿಮರ್ಶಾತ್ಮಕ ಕಣ್ಣುಳ್ಳವನಾಗಿ ಮಾನವನು ಭೂಮಿಯು ಒಂದರ ಮೇಲೆ ಒಂದರಂತೆ ಅನೇಕ ಪದರುಗಳನ್ನು ಹೊಂದಿದ್ದು ಇವುಗಳು ಹಿಂದೊಮ್ಮೆ ಮೂಲ ಬಂಡೆಗಳ ಮೇಲೆ ನಿರಂತರವಾಗಿ ಮೃದು ಹಾಗೂ ತೇವದಿಂದ ಕೂಡಿದವುಗಳಾಗಿತ್ತೆಂದು ಕಂಡುಕೊಂಡಿದ್ದಾನೆ. ಈ ಮೂಲ ಬಂಡೆಗಳು ಸಹಾ ಹಿಂದೊಮ್ಮೆ ಅತಿಯಾದ ಶಾಖದಿಂದ ಅವು ಮೃದುವಾಗಿಯೂ, ದ್ರವರೂಪದಲ್ಲಿಯೂ ಇತ್ತೆಂದು ಸೂಚಿಸುತ್ತವೆ. ಮತ್ತು ಈಗಲೂ ಈ ಪದರಿನ ಕೆಳಗೆ ಸ್ವಲ್ಪ ಆಳದಲ್ಲಿ ಶಾಖ ಮತ್ತು ದ್ರವವಸ್ತುಗಳಿವೆಯೆಂದು ವಿಜ್ಞಾನಿಗಳು ಸಾಮಾನ್ಯವಾಗಿ ಒಪ್ಪುತ್ತಾರೆ.

ಈ ಮೂಲ ಹಾಗೂ ಬೆಂಕಿಯಿಂದ ಕೂಡಿದ ಬಂಡೆಗಳು, ಗ್ರಾನೈಟ್ ಕಲ್ಲುಗಳು, ಕಂದು ಬಣ್ಣದ ಅಗ್ನಿಶಿಲೆ ಮುಂತಾದವುಗಳು ಒಂದಾನೊಂದು ಸಮಯದಲ್ಲಿ ಅತ್ಯಂತ ಹೆಚ್ಚಿನ ಶಾಖವನ್ನು ಹೊಂದಿ ಅವುಗಳಿಂದ ಬೆಂಕಿ ಹೊತ್ತಿಸುವ ಅಂಶಗಳನ್ನು ಹೊರ ಹಾಕಲ್ಪಡುತ್ತಿದ್ದವು. ಅವು ತಳದಲ್ಲಿರುವ ಬಂಡೆಗಳಾಗಿರುವುದರಿಂದ, ನಾವು ಒಂದಾನೊಂದು ಕಾಲದಲ್ಲಿ ಈ ಭೂಮಿಯು ಸಹಾ ವಿಪರೀತ ಶಾಖದಿಂದ ಕೂಡಿತ್ತು ಎಂಬ ತೀರ್ಮಾನಕ್ಕೆ ಸುಲಭವಾಗಿ ಬರಬಹುದು. ಆ ಕಾಲದ ತರ್ಕಕ್ಕೆ ಅನುಗುಣವಾಗಿ ನೀರು ಮತ್ತು ಖನಿಜಗಳು (ನೀರಿನೊಳಗಿದ್ದು ಈಗ ಅವುಗಳು ಮೇಲ್ಮಟ್ಟದಲ್ಲಿ ಕಾಣಿಸುವಂತೆ) ಅವುಗಳು ಅನಿಲಗಳಾಗಿ ಹೊರದೂಡಲ್ಪಟ್ಟು ಒಂದು ಅವಿಭಾಜ್ಯ (ಅಚ್ಛಾದನೆ) ಆವರಣ (canopy) ವಾಗಿ ಮೈಲಿಗಟ್ಟಲೆ ಭೂಮಿಯ ಸುತ್ತ ಆವರಿಸಿಕೊಂಡಿರುವ ಈ ಅನಿಲಗಳು (gases) ಚಲನೆಯ ಪರಿಣಾಮವಾಗಿ ಭೂಮಧ್ಯ ರೇಖೆಯ ಬಳಿಯಲ್ಲಿ ಕ್ರೋಢೀಕೃತವಾಯಿತು ಭೂಮಿಯು ತಂಪಾಗಲು ಯಾವಾಗ ಪ್ರಾರಂಭವಾಯಿತೋ ಇವುಗಳು ಕೂಡ ತಂಪಾದವು. ನಂತರ ಈ ಅನಿಲಗಳು ಘನ ಪದಾರ್ಥವಾಗಿಯೂ ನೀರಾಗಿಯೂ ಪರಿವರ್ತನೆಯಾಗಿ ಇವುಗಳೊಳಗಿದ್ದ ಘನ ಪದಾರ್ಥಗಳು (weightier minerals) ಗುರುತ್ವಾಕರ್ಷಣೆಯಿಂದಾಗಿ ತಳಕ್ಕಿಳಿಯಲ್ಪಟ್ಟವು ಆಗ ಭೂಮಿಯು ಭಾಗಶಃ ಉಂಗುರಗಳನ್ನು ಹೊಂದಿದ ಶನಿಗ್ರಹದಂತೆ ಕಂಡುಬಂದಿರಬೇಕು.

ಈ ತಂಪಾಗುವಿಕೆ ಪ್ರಕ್ರಿಯೆಯು ಮುಂದುವರಿದಂತೆಲ್ಲಾ ಈ ಬೇರೆಯಾದ ಮತ್ತು ದೂರದಲ್ಲಿರುವ ಸುತ್ತುಂಗುರವು ಕ್ರಮೇಣವಾಗಿ ಭೂಮಿಯಿಂದ ವಿವಿಧ ರೀತಿಯ ತಿರುಗುವ ಚಲನೆಯನ್ನು ಪಡಕೊಂಡು ಅದರ ಹತ್ತಿರಕ್ಕೆ ಆಕರ್ಷಿಸಲ್ಪಡುತ್ತದೆ. ಒಂದರ ನಂತರ ಒಂದಾಗಿ ಇವು ಭೂಮಿಯ ಮೇಲ್ಮೈಗೆ ನುಗ್ಗಿ ಬರುತ್ತವೆ. "ಅಂತರಿಕ್ಷ' ಅಥವಾ "ವಿಸ್ತಾರ' ಅಥವಾ "ವಾಯು ಮಂಡಲ'ವು ನಿರ್ಮಾಣಗೊಂಡ ಮೇಲೆ ಕೆಳಕ್ಕಿಳಿಯುವ ಸುತ್ತುಂಗುರಗಳಿಂದುಂಟಾದ ಈ ಜಲಪ್ರಳಯಗಳು ಭೂಚಲನೆಯಿಂದಾಗಿ ಕೇಂದ್ರದಿಂದ ದೂರಕ್ಕೆ ಚಿಮ್ಮುವ ಶಕ್ತಿಯ ಕೇಂದ್ರವಾಗಿರುವದರಿಂದ, ಎರಡೂ ಧೃವಗಳ ಕಡೆಯಿಂದ ಎಲ್ಲಿ ಬಹಳ ಕಡಿಮೆ ಪ್ರತಿರೋಧವಿದೆಯೋ ಆ ಕಡೆ ಭೂಮಧ್ಯರೇಖೆಯಿಂದ ಬಹಳಷ್ಟು ದೂರದಲ್ಲಿ ಸ್ವಾಭಾವಿಕವಾಗಿ ಭೂಮಿಯನ್ನು ತಲಪುತ್ತವೆ. ಈ ಸುತ್ತುಂಗರಗಳ ಒಡೆಯುವಿಕೆ, ಇದಲ್ಲದೆ ದೀರ್ಘಾವಧಿಯಲ್ಲಿ ಇವುಗಳು ಬಹಳಷ್ಟು ಜಲಪ್ರಳಯಗಳನ್ನು ಒದಗಿಸಿ ಕೊಡುತ್ತವೆ ಮತ್ತು ಭೂಮಿಯ ಮೇಲ್ಮೈಯಲ್ಲಿ ಪದರದ ಮೇಲೆ ಪದರವು ಶೇಖರವಾಗುತ್ತದೆ. ಧೃವಗಳಿಂದ ಭೂಮಧ್ಯ ರೇಖೆಯ ಕಡೆಗೆ ನುಗ್ಗುವ ನೀರು ಮರಳು, ಕೆಸರು ಮತ್ತು ಖನಿಜಗಳನ್ನು ವಿವಿಧ ರೀತಿಯಲ್ಲಿ ಹರಡುತ್ತದೆ. ನೀರು ಸಹಾ ಖನಿಜದಿಂದ ಕೂಡಿದ್ದು ಇಡೀ ಭೂಮಿಯ ಮೇಲ್ಮೈಯಲ್ಲಿ ಆದಿಕಾಂಡದ ಪ್ರಾರಂಭದ ಹೇಳಿಕೆಗಳಂತೆ ಕ್ರಮವಾದ ರೀತಿಯಲ್ಲಿ ಹರಡಿಕೊಳ್ಳುತ್ತದೆ.

ಈ ಏಳು ಸಹಸ್ರ ವರ್ಷಗಳ ದೀರ್ಘಾವಧಿ ದಿನಗಳಲ್ಲಿ, ಆದಿಕಾಂಡದಲ್ಲಿ ಹೇಳಿರುವಂತೆ ಪ್ರತಿಯೊಂದರಲ್ಲೂ

ನಿರ್ಧಾರವಾದ ಕಾರ್ಯ ಪ್ರಗತಿಯಾಯಿತು. ಪ್ರತಿಯೊಂದೂ ಬಹುಶಃ ಜಲಪ್ರಳಯದೊಂದಿಗೆ ಮುಕ್ತಾಯಗೊಂಡು ಅವು ಅಮೂಲಾಗ್ರ ಬದಲಾವಣೆಯನ್ನು ಉಂಟುಮಾಡಿ, ಸೃಷ್ಟಿಯ ಮುಂದಿನ ಹಂತವನ್ನು ಸಿದ್ಧಪಡಿಸುತ್ತಾ ಮಾನವನ ಸೃಷ್ಟಿಗೆ ಎಡೆಮಾಡಿ ಕೊಟ್ಟಿತು. Vailian theoryಯು ಊಹಿಸುವುದೇನೆಂದರೆ, ಈ ಸುತ್ತುಂಗುರಗಳಲ್ಲಿ (Rings) ಕಡೆಯದು ಖನಿಜಗಳಿಂದಲೂ ಮತ್ತು ಎಲ್ಲಾ ಕಲ್ಮಶಗಳಿಂದಲೂ, ಮುಕ್ತವಾದ ಶುದ್ಧ ನೀರಾಗಿದ್ದು ಅದು ಒಡೆಯದೇ ಇದ್ದು. ಆದಾಮನ ಸೃಷ್ಟಿಯ ದಿನದಲ್ಲಿ ಹರಿದು ಬರದೆ ವಾತಾವರಣದ ಮೇಲೆ ಒಂದು ಪಾರದರ್ಶಕವಾದ (ಮಸುಕಾಗಿರುವ) ತೆರೆಯಾಗಿ ಭೂಮಿಯ ಸುತ್ತಲೂ ವ್ಯಾಪಿಸಿತು ಎಂಬುದಾಗಿ, ಅದು ಕೃತಕ ಶಾಖದ ಆವರಣದ ಬಿಳಿ ಗಾಜಿನಂತೆ ಕಾರ್ಯವೆಸಗಿ ಉಷ್ಣಾಂಶವನ್ನು ಸಮಗೊಳಿಸುವುದಾಗಿದೆ. ಹೀಗಾಗಿ ದೃವಗಳಲ್ಲಿ ಶೀತ ವಾತಾವರಣವಿದ್ದು ಅದು ಭೂಮಧ್ಯ ರೇಖೆಯಲ್ಲಿರುವುದಕ್ಕಿಂತ ಬೇರೆಯದಾಗಿದೆ. ಈ ರೀತಿಯ ಸಮವಾದ ಪರಿಸ್ಥಿತಿಯಲ್ಲಿ ಉಷ್ಣವಲಯದ ಗಿಡಗಳು ಎಲ್ಲಿಯಾದರೂ ಬೆಳೆಯುತ್ತವೆ ಎಂಬುದನ್ನು ಭೂಗರ್ಭ ವಿಜ್ಞಾನವು ತೋರಿಸಿಕೊಡುತ್ತದೆ ಮತ್ತು ಉಷ್ಣಾಂಶದ ತ್ವರಿತ ಬದಲಾವಣೆಗಳಿಂದುಂಟಾಗುವ ಬಿರುಗಾಳಿಯು ಆಗ ಅಪರಿಚಿತವಾಗಿದ್ದಿರಬೇಕು: ಇದೇ ರೀತಿಯ ಕಾರಣದಿಂದ ಆಗ ಮಳೆ ಇರಲಿಲ್ಲ.

ದೇವರ ವಾಕ್ಯದ ವಿವರಣೆಗಳು ಇದನ್ನು ಒಪ್ಪುತ್ತವೆ ಮತ್ತು ಜಲಪ್ರಳಯವುಂಟಾಗುವವರೆಗೆ ಭೂಮಿಯ ಮೇಲೆ ಮಳೆ ಇರಲಿಲ್ಲವೆಂದು, ಸಸ್ಯದ ಬೆಳೆಗೆ ಭೂಮಿಯಿಂದುಂಟಾಗುವ ತೇವದಿಂದ ಮಂಜು ಒದಗಿ ಬರುತ್ತಿತ್ತೆಂದು ದೃಡಪಡಿಸುತ್ತದೆ – ಬಿಸಿ ಮನೆಯಂತಿರುವ ಪರಿಸ್ಥಿತಿ (ಆದಿ.2:5,6). ನೋಹನ ದಿವಸಗಳಲ್ಲಿ ಉಂಟಾದ ಜಲಪ್ರಳಯದಿಂದಾಗಿ ಬಲವಾದ ಬದಲಾವಣೆಗಳುಂಟಾದವು. ಇದರೊಂದಿಗೆ ಮನುಷ್ಯನ ಆಯುಷ್ಕಾಲವನ್ನೂ ಕುಂಠಿತಗೊಳಿಸಲಾಯಿತು. ಮೇಲೆ ತಿಳಿಸಿದ ನೀರಿನ ಪರದೆಯನ್ನು ಒಡೆದು ಹಾಕುವುದರೊಂದಿಗೆ ಕೃತಕಶಾಖದ ಆವರಣ ಸ್ಥಿತಿ ಮುಕ್ತಾಯವಾಯಿತು, ಸೂರ್ಯನ ಸಮಭಾಜಕ ಹಾದಿಯು ಹೆಚ್ಚು ಬಿಸಿಯಾಗತೊಡಗಿತು. ದೃವಗಳಲ್ಲಿ ಭಯಂಕರ ಬದಲಾವಣೆಗಳೇ ಆಗಿದ್ದಿರಬೇಕು – ಬಹುಮಟ್ಟಿಗೆ ಬಿಸಿ ಮನೆ ಉಷ್ಣಾಂಶದಿಂದ ಉತ್ತರ ದೃವದ ಶೀತಕ್ಕೆ ತಕ್ಷಣದ ಪರಿವರ್ತನೆಯಾಯಿತು.

ಉಷ್ಣಾಂಶದ ಈ ತ್ವರಿತ ಬದಲಾವಣೆಯ ಸಮರ್ಥನೆಯು ಉತ್ತರ ಧೃವದಲ್ಲಿ ಕಂಡು ಬರುತ್ತದೆ; ದೊಡ್ಡ ಆನೆಯನ್ನು ಸಂಪೂರ್ಣವಾಗಿ ಹೋಲುವ ಎರಡು ಪ್ರಾಣಿಗಳು (mastodons) ನಿಚ್ಚಳವಾದ ಮಂಜುಗೆಡ್ಡೆಗಳಲ್ಲಿ ತ್ವರಿತವಾಗಿ ಘನೀಕೃತವಾದ ಪರಿಣಾಮದಿಂದಾಗಿ ಹುದುಗಿರುವುದು ರುಜುವಾತಾಗಿ ಕಂಡುಬಂದಿದೆ. ಅದೇ ಮಂಜುಗಟ್ಟಿದ ಸೈಬೀರಿಯಾ ಕ್ಷೇತ್ರದಲ್ಲಿ ಸಾವಿರಾರು ಕಿಲೋಗ್ರಾಂಗಳಷ್ಟು ತೂಕದ ಆನೆ ದಂತಗಳು ದೊರೆತಿವೆ. ಅಲ್ಲದೆ ಚರಿತ್ರೆಯಲ್ಲಿನೋಡುವಂತೆ ಇದು ಆನೆ ಮತ್ತು ದೊಡ್ಡ ಗಾತ್ರದ ಅನೇಕ ಪ್ರಾಣಿಗಳಿಗೆ ಆಶ್ರಯ ಕೊಡಲಾಗದಂತಹ ಅತ್ಯಂತ ಶೀತ ಪ್ರದೇಶವಾಗಿದೆ. ಇದೇ ರೀತಿಯಲ್ಲಿ ಜಿಂಕೆಯೊಂದು ಈ ಉತ್ತರ ಧೃವದಲ್ಲಿ ದೊಡ್ಡ ಹಿಮಗಡ್ಡೆಯೊಳಗೆ ಮುರುಟಿ ಹೋದದ್ದು ಕಂಡುಬಂದಿದೆ. ಅದರ ಹೊಟ್ಟೆಯಲ್ಲಿ ಇನ್ನೂ ಜೀರ್ಣಗೊಳ್ಳದ ಹುಲ್ಲು ಇರುವುದು ಆ ಪ್ರಾಣಿಯು ಹುಲ್ಲು ತಿಂದ ಮರುಗಳಿಗೆಯಲ್ಲಿಯೇ ಆಕಸ್ಮಿಕವಾಗಿ ಆ ಹಿಮಗೆಡ್ಡೆಯ ಭಾರದಡಿ ಸಿಲುಕಿಬಿದ್ದಿತ್ತೆಂದು ತೋರಿಸುತ್ತದೆ, ಈ ಪ್ರದೇಶದಲ್ಲಿ ಇಂದು ಹುಲ್ಲು ಬೆಳೆಯಲು ಸಾಧ್ಯವಿಲ್ಲ.

ಈ ಆಕಸ್ಮಿಕ ನೀರಿನ ಸುರಿಯುವಿಕೆ – ಭೂಮಿಯ ಹಾಗೂ ಸೂರ್ಯನ ಶಾಖವನ್ನು ಸಮನಾಗಿ ಹಿಡಿದಿಟ್ಟ ಹೊದಿಕೆಯ ಮುರಿದು ಬೀಳುವಿಕೆಯು ಉತ್ತರ ದೃವದ ಕ್ಷೇತ್ರದಲ್ಲಿ ವಿಶಾಲವಾದ ಮಂಜಿನಿಂದ ಕೂಡಿದ ಪ್ರದೇಶ ಮತ್ತು ಮಂಜಿನ ಬೆಟ್ಟಗಳನ್ನೂ ಉಂಟುಮಾಡಿದೆ. ಇವುಗಳಿಂದ ಪ್ರತಿ ವರ್ಷವೂ ಮಂಜಿನ ಬೆಟ್ಟಗಳು ಸಡಿಲಗೊಂಡು ದಕ್ಷಿಣ ದಿಕ್ಕಿಗೆ ಭೂಮಧ್ಯ ರೇಖೆಯತ್ತ ಹರಿಯುತ್ತವೆ. ಈ ವರೆಗೆ ನಾವು ನಿರ್ಣಯಿಸಿದಂತೆ ಈ ಪದ್ಧತಿಯು ಶತಮಾನಗಳಿಂದ ನಡೆದುಕೊಂಡು ಬಂದಿದೆ. ಆದರೆ ಇದು ಸತತವಾಗಿ ಕಡಿಮೆಯಾಗುತ್ತಾ ಇದೆ. ಇಲ್ಲಿ ನಾವು ಭೂ ವಿಜ್ಞಾನಿಗಳ "ಮಂಜುಗಡ್ಡೆಯ ಯುಗ" (Glacial Period) ವನ್ನು ಕಾಣುವವರಾಗಿದ್ದೇವೆ. ದೊಡ್ಡ ಹಿಮಗಡ್ಡೆಗಳು ಕ್ಷಿಪ್ರವಾದ ಸೆಳವಿನಿಂದಾಗಿ ಆಳವಾದ ಬಿರುಕುಗಳನ್ನು ಉತ್ತರ ಅಮೇರಿಕಾದ ಎಲ್ಲಡೆಗಳಲ್ಲಿ ಮಾಡಿರುವುದನ್ನು ಸುಸ್ಪಷ್ಟವಾಗಿ ಕಾಣಬಹುದು. ವಾಯುವ್ಯ ಯೂರೋಪಿನ ಗುಡ್ಡಗಳಲ್ಲಿಯೂ ಇದೇ ರೀತಿಯಾಗಿ ಕಂಡುಬರುವುದು. ಆದರೆ ಆಗ್ನೇಯ ಯೂರೋಪ್ ಅರ್ಮೇನಿಯಾದ ಸುತ್ತುಮುತ್ತು ನಮ್ಮ ಜನಾಂಗದ ತೊಟ್ಟಿಲು ಮತ್ತು ನೋಹನು ನಾವೆ ಕಟ್ಟಿದ ಸ್ಥಳಗಳಾದ ಅರ್ಮೇನಿಯ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಹಾಗಿಲ್ಲ. ಇದರ ಹತ್ತಿರದಲ್ಲಿ ಅರಾರಟ್ ಪರ್ವತವು ನಿಶ್ಚಲವಾಗಿ ನಿಂತಿದೆ. ಪ್ರೊ॥ Wright ಮತ್ತು Sir T.W. Dawson L.L.D, F.R.S. ಇವರುಗಳ ಸಾಕ್ಷಿಗಳ ಪ್ರಕಾರ ಆರೇಬಿಯಾದ ಆಸುಪಾಸಿನಲ್ಲಿ ಭೂಮಿಯ ಸಾಮಾನ್ಯ ಮುಣುಗುವಿಕೆ ಮತ್ತು ತದ ನಂತರದಲ್ಲಿ ಅದರ ಮೇಲೇರುವಿಕೆ ಇವುಗಳು ಉಂಟಾಗಿವೆ. ಈ ಸಾಕ್ಷಿಗಳು ನಾವೆಯು ತುಲನಾತ್ಮಕವಾಗಿ, ಒಂದೆಡೆ ಸಾಮನ್ಯವಾದ ನೀರಿನ ಒತ್ತಡದೊಡನೆ ಶಾಂತವಾದ ಜಲಾವರ್ತದಲ್ಲಿ ತೇಲಿತೆಂಬ ಸಾಮಾನ್ಯವಾದ ಅಭಿಪ್ರಾಯವನ್ನು ನೀಡುವುದಾಗಿದೆ. ಇದು ಆ ಕ್ಷೇತ್ರದಲ್ಲಿ ಕಂಡು ಬರುವ ಮಿತಿಮೀರಿದ ಜೇಡಿಮಣ್ಣಿನ ಶೇಖರಣೆಯಿಂದ ಸೂಚಿತವಾಗುತ್ತದೆ. ಇಡೀ ಪ್ರಪಂಚವು ಸ್ಪಷ್ಟವಾಗಿ ಉತ್ತರ ಮತ್ತು ದಕ್ಷಿಣ ದೃವಗಳಿಂದ ಹರಿದು ಬಂದ ನೀರಿನಿಂದಾಗಿ ಜಲಾವೃತ್ತಗೊಂಡಿತ್ತು, ಅದೇ ವೇಳೆ ಜನಾಂಗದ ತೊಟ್ಟಿಲು ವಿಶೇಷವಾದ ರೀತಿಯಲ್ಲಿ ಮೊದಲನೆಯ ತಗ್ಗಿಸುವಿಕೆ ಮತ್ತು ಸೂಕ್ತ ಸಮಯದಲ್ಲಿ ಮೇಲೇರಿಸುವಿಕೆಗಳಿಂದ ವ್ಯವಹರಿಸಲ್ಪಟ್ಟಿತು, ಮಾರ್ಚ್ 30, 1901 ರ *New York Journal* ನಲ್ಲಿ Oberlin, O., ಕಾಲೇಜಿನ ಪ್ರಖ್ಯಾತ ಭೂವಿಜ್ಞಾನಿ ಪ್ರೊ॥ G.F. Wright ರವರು ಮಾಡಿದ ಟಿಪ್ಪಣಿಗಳು ಇಂತಿವೆ.

## ಧೃಡಗೊಂಡ ಜಲಪ್ರಳಯ
## The Flood Corroborated

Oberlin ಕಾಲೇಜಿನ ಪ್ರಸಿದ್ಧ ಭೂವಿಜ್ಞಾನಿ ಪ್ರೊ॥ George Frederick Wright ಎಂಬುವವರು ಯೂರೋಪಿನಿಂದ ಹಿಂತಿರುಗಿ ಬಂದಿದ್ದಾರೆ. ಅವರು "The Ice of North America" ಇವೇ ಮುಂತಾದ ಅನೇಕ ಲೇಖನಗಳನ್ನು ಬರೆದಿದ್ದು ಅವುಗಳಲ್ಲಿ ಹಿಮನದಿ ಕಾಲಕ್ಕೆ ಸಂಬಂದಿಸಿದ ಅಧ್ಯಯನ ಮತ್ತು ವಿವರಣೆಗಳನ್ನು ನೀಡಿದ್ದಾರೆ. ಅವರು ವಿಜ್ಞಾನ ಸಂಬಂದಿತ ವಿಶ್ವಪರ್ಯಟನೆ ನಡೆಸಿದವರು. ಅವರ ಸಮಗ್ರ ಸಂಶೋಧನೆಗಳು ಅವರನ್ನು ಏಷ್ಯಾ ಮತ್ತು ಆಫ್ರಿಕಾ ಖಂಡಗಳ ವಿವಿಧ ಸ್ಥಳಗಳಿಗೆ ಕೊಂಡೊಯ್ಯಿತಾದರೂ, ಅವರು ಸೈಬೀರಿಯಾದಲ್ಲಿ ಭೂವೈಜ್ಞಾನಿಕ ರಚನೆಗಳು ಮತ್ತು ಸಂಕೇತಗಳು ಇವುಗಳ ಅಧ್ಯಯನದಲ್ಲಿ ಹೆಚ್ಚಿನ ಸಮಯವನ್ನು ಕಳೆದಿದ್ದಾರೆ.

ಪ್ರೊ॥ Wright ರವರ ಮುಖ್ಯ ಉದ್ದೇಶವು ಭೂವಿಜ್ಞಾನಿಗಳಿಗಿದ್ದ ದೀರ್ಘಕಾಲದ ವಿವಾದಿತ ಪ್ರಶ್ನೆಗಳಿಗೆ ಸಾಧ್ಯವಾದಲ್ಲಿ ಉತ್ತರಿಸುವುದು. ಅವುಗಳೆಂದರೆ, ಉತ್ತರ ಅಮೇರಿಕಾ ಮತ್ತು ಯೂರೋಪಿನ ಕೆಲವು ಭಾಗಗಳು ಜಲಾವೃತ್ತ ಸಮಯದಲ್ಲಿ ಆಗಿದ್ದಂತೆ ಸೈಬೀರಿಯಾವೂ ಎಂದಾದರೂ ಹಿಮಾವೃತ್ತವಾಗಿತ್ತೇ? ಎಂಬುದು.

ಶ್ರೇಷ್ಠ ರಷ್ಯಾ ವಿಜ್ಞಾನಿಗಳನ್ನು ಒಳಗೊಂಡಂತೆ ಬಹಳಷ್ಟು ಭೂವಿಜ್ಞಾನಿಗಳು ಸೈಬೀರಿಯಾವು ಹಿಮದಿಂದ ಆವರಿಸಿ ಕೊಂಡಿತ್ತೆಂದು ನಂಬಿದ್ದರು.

ಈ ಪ್ರಸ್ತುತ ಅಧ್ಯಯನದ ಫಲವಾಗಿ ಪ್ರೊ॥ Wright ರವರು ಬಹಳ ಹಿಂದೆ ಉತ್ತರ ಅಮೇರಿಕಾವು ಹಿಮಗಡ್ಡೆಗಳಿಂದ ಕೂಡಿತ್ತಾದರೂ, ಸೈಬೀರಿಯಾವು ಕೇವಲ ನೀರಿನಿಂದ ಆವರಿಸಿಕೊಂಡಿತ್ತೆಂದು ಪ್ರಬಲವಾಗಿ ನಂಬಿದ್ದರು.

ಈ ನೀರು ಮತ್ತು ಹಿಮಗಡ್ಡೆಯು ಸತ್ಯವೇದದಲ್ಲಿನ ಜಲಪ್ರಳಯದ ವಿವಿಧ (Phase) ಮಜಲುಗಳಾಗಿದ್ದವು.

ಮೊದಲಿಗೆ ಆದಿಕಾಂಡದಲ್ಲಿರುವ ಜಲಪ್ರಳಯದ ಸಂಕ್ಷಿಪ್ತ ವಿವರಣೆಯನ್ನು ಓದಿಕೊಳ್ಳೋಣ :–

"ಜಲಪ್ರಳಯವು ನಾಲ್ವತ್ತು ದಿನ ಭೂಮಿಯ ಮೇಲೆ ಇದ್ದು ನೀರು ಹೆಚ್ಚುತ್ತಾ ನಾವೆಯನ್ನು ಭೂಮಿಗಿಂತ ಮೇಲೆ ಎತ್ತಲು ನೀರಿನ ಮೇಲೆ ತೇಲಾಡಿತು. ನೀರು ಪ್ರಬಲವಾಗಿ ಬಲು ಹೆಚ್ಚಲು ನಾವೆಯು ನೀರಿನ ಮೇಲೆ ಚಲಿಸಿತು. ನೀರು ಭೂಮಿಯ ಮೇಲೆ ಅತ್ಯಧಿಕವಾಗಿ ಪ್ರಬಲವಾದ್ದರಿಂದ ಆಕಾಶಮಂಡಲದ ಕೆಳಗಿರುವ ಎಲ್ಲಾ ದೊಡ್ಡ ಬೆಟ್ಟಗಳೂ ಮುಚ್ಚಿಹೋದವು. ನೀರು ಆ ಬೆಟ್ಟಗಳಿಗಿಂತಲೂ ಹದಿನೈದು ಮೊಳ ಹೆಚ್ಚಲು ಅವುಗಳು ಸಂಪೂರ್ಣವಾಗಿ ಮುಚ್ಚಿಹೋದುದರಿಂದ ಪಶು ಪಕ್ಷಿ ಮೃಗ ಕ್ರಿಮಿಗಳು ಮನುಷ್ಯರು ಸಮೇತವಾಗಿ ಭೂಮಿಯ ಮೇಲೆ ಸಂಚರಿಸುವ ಸಕಲ ಪ್ರಾಣಿಗಳೂ ಲಯವಾದವು. ಮೂಗಿನಿಂದ ಶ್ವಾಸಬಿಡುವ ಭೂಜಂತುಗಳೆಲ್ಲವೂ ಸತ್ತವು. ಮನುಷ್ಯರು ಮೊದಲುಗೊಂಡು ಪಶುಕ್ರಿಮಿಗಳವರೆಗೂ ಭೂಮಿಯ ಮೇಲಿದ್ದದೆಲ್ಲಾ ನಾಶವಾಯಿತು. ಅವು ಭೂಮಿಯ ಮೇಲಿನಿಂದ ಲಯವಾಗಿ ಹೋದವು. ನೋಹನೂ ಅವನೊಂದಿಗೆ ನಾವೆಯಲ್ಲಿದ್ದ ಜೀವಿಗಳೂ ಮಾತ್ರ ಉಳಿದರು. ಪ್ರಳಯದ ನೀರು ಭೂಮಿಯ ಮೇಲೆ 150 ದಿನ ಪ್ರಬಲವಾಯಿತು' (ಆದಿಕಾಂಡ 7 : 17–24)

ಈಗ ಪ್ರೊ॥ Wright ರವರು ಏನು ಹೇಳಿದ್ದಾರೆಂದು ಹೇಳಲಾಗಿರುವುದನ್ನು ನಾವೀಗ ಕೇಳೋಣ :–

56ನೇ ಡಿಗ್ರಿಯ ದಕ್ಷಿಣಕ್ಕೆ ನಮಗೆ ಹಿಮನದಿಗೆ ಸಂಬಂದಿಸಿದ ಸಂಗತಿಗಳು ಗೋಚರಿಸುವುದಿಲ್ಲ. ಅದರ ಉತ್ತರಕ್ಕೆ ನಾನು ಹೋಗಲಿಲ್ಲ, ಆದರೆ, ಇತರ ಸಂಗತಿಗಳಿಂದ ಈ ಭೂಪ್ರದೇಶವು ಹಿಮಗಡ್ಡೆಗಳಿಂದ ಆವರಿಸಿಕೊಂಡಿತ್ತೆಂದು ಮನದಟ್ಟಾಗಿದೆ. ನಮ್ಮ ಪ್ರಕಾರ ಇದರ ಸಂಕೇತಗಳು ನ್ಯೂಯಾರ್ಕಿನ ದಕ್ಷಿಣದಲ್ಲಿ ಕಂಡುಬರುತ್ತದೆ.

ಇಲ್ಲಿನ ಎಲ್ಲಾ ಸಂಗತಿಗಳ ಮೇಲೆ ನೂತನ ಬೆಳಕನ್ನು ಚೆಲ್ಲುವಂತೆ ಯಾವುದೇ ವ್ಯಾಪಕವಾದ ಪ್ರದೇಶದ ಸೂಚನೆಯನ್ನು ನಾವುಅಲ್ಲಿ ಕಂಡುಕೊಳ್ಳಲಿಲ್ಲ.

ಕಪ್ಪು ಸಮುದ್ರದ ತೀರದಲ್ಲಿರುವ Trebizond ನಲ್ಲಿ 700 ಅಡಿಗಳ ತಗ್ಗಿನ ಪ್ರದೇಶವಿದೆ. ಇದು ಗುಡ್ಡದ ಮೇಲಿನ ಹರಳು ಮಿಶ್ರಿತ ಮರಳಿನ ಶೇಖರಣೆಯಿಂದ ಕಂಡುಬರುತ್ತದೆ.

Turkestan ನ ಮಧ್ಯಭಾಗದಲ್ಲಿ ನೀರಿನ ಮಟ್ಟ ಸಮುದ್ರಮಟ್ಟಕ್ಕೆ 2000 ಅಡಿಗಳಿಗೆ ಮೇಲ್ಪಟ್ಟು ತಲುಪಿದ್ದಲ್ಲದೆ ನಾವು ಈ ಮರಳಿನ ಶೇಖರಣೆಯನ್ನು ಕಾಣಬಹುದು. ಇಲ್ಲಿ ಕಂಡುಬಂದಂತೆಯೇ ದಕ್ಷಿಣ ರಷ್ಯಾದಲ್ಲಿಯೂ ಕಪ್ಪು ಮಣ್ಣಿನ ಶೇಖರಣೆಯ ಭೂಮಿಯನ್ನು ಕಾಣಬಹುದಾಗಿದೆ.

ಭೂಮಂಡಲದ ಈ ಭಾಗವನ್ನು ನೀರು ಮುಚ್ಚಿಕೊಂಡಿದ್ದ ಇನ್ನೂ ಅನೇಕ ಸಾಕ್ಷ್ಯಗಳಿವೆ. ಸೈಬೀರಿಯಾ ಸಮುದ್ರ ಮಟ್ಟಕ್ಕಿಂತ 1600 ಅಡಿ ಎತ್ತರದಲ್ಲಿರುವ ಬೈಕಲ್ ಸಾಗರದಲ್ಲಿ ಸೀಲ್ ಎಂಬ ಕಡಲ ಪ್ರಾಣಿಗಳು ಇನ್ನೂ ಇರುವುದನ್ನು ನಾವು ನೋಡಬಹುದು. ಈ ಪ್ರಾಣಿಗಳು ಉತ್ತರ ಧೃವದ ಜಾತಿಗೆ ಸೇರಿದವು ಮತ್ತು ಕ್ಯಾಸ್ಪಿಯಾನ್ ಸಮುದ್ರದಲ್ಲಿರುವ ಜಾತಿಗೆ ಸೇರಿದವುಗಳು.

ಒಂದೇ ಅಭಿಪ್ರಾಯವೇನೆಂದರೆ, ನೀರು ಇಳಿಮುಖ ವಾದಾಗ ಇವುಗಳು ಇಲ್ಲಿ ಸಿಕ್ಕಿಹಾಕಿಕೊಂಡಿದ್ದಿರಬೇಕು. ಬಹುಶಃ ಎಲ್ಲವುಗಳಿಗಿಂತ ಅದ್ಭುತವಾದ ಸಂಶೋಧನೆಯೆಂದರೆ Nippur ನದಿಯ ತೀರದಲ್ಲಿರುವ Kief ಎಂಬ ಊರಿನಲ್ಲಿ ಕಪ್ಪು ಮಣ್ಣಿನ ಶೇಖರಣೆಗಿಂತ 53 ಅಡಿ ಕೆಳಗೆ ಕಲ್ಲಿನ ಸಲಕರಣೆಗಳು ಕಂಡು ಬಂದುದು. ಇದು ಮಾನವ ಯುಗದ ನಂತರದಲ್ಲಿ ನೀರು ಅಲ್ಲಿಗೆ ಬಂತೆಂಬುದನ್ನು ತೋರಿಸುತ್ತದೆ.

ಇವುಗಳು ನಮಗೆ ಈ ಭೂಕುಸಿತದ ಕಾಲವನ್ನು ನಿರ್ಧರಿಸಲು ಸಹಾಯ ಮಾಡುತ್ತವೆ. ಮಾನವನು ಅಲ್ಲಿಗೆ ಬಂದ ಮೇಲೆ Trebizond ನಲ್ಲಿ 750 ಅಡಿಗಳ ಕುಸಿತ ಮತ್ತು ದಕ್ಷಿಣ

Turkestan ದಲ್ಲಿ 2000 ಅಡಿ ಆಳವಾದ ಕುಸಿತಗಳು ಕಂಡು ಬರುತ್ತವೆ. ಇಲ್ಲಿ ಕಂಡು ಬಂದಿರುವ ಕಲ್ಲಿನ ಸಲಕರಣೆಗಳು ಜಲಪ್ರಳಯ ಕಾಲಕ್ಕೂ ಮುಂಚೆ ಉತ್ತರ ಅಮೇರಿಕಾದಲ್ಲಿ ಮಾಡಲ್ಪಟ್ಟವುಗಳಾಗಿದ್ದು, ಹಿಮನದಿಯಿಂದುಂಟಾದ ಹಿಮಗಡ್ಡೆಗಳ ಕಾರಣ ಇಲ್ಲಿ ಕುಸಿತವುಂಟಾಯಿತೆಂಬ ನಂಬಿಕೆಗೆ ಇವು ಒಳ್ಳೆಯ ನೆಲೆಯನ್ನು ಒದಗಿಸಿಕೊಡುತ್ತವೆ. ನಿಜವಾಗಿಯೂ, ಬಹುಮಟ್ಟಿಗೆ ಇದುವೇ ಜಲಪ್ರಳಯ!

ಆರಂಭದಲ್ಲಿಯೇ ಅಂತ್ಯವನ್ನು ಬಲ್ಲಾತನಾದ ಯೆಹೋವನು ತಕ್ಕ ಸಮಯದಲ್ಲಿ ಮಾನವನನ್ನು ಸೃಷ್ಟಿಸಿ, ಭೂಮಿಯ ಮೇಲಿನ ಕಡೇ ನೀರಿನ ಸುತ್ತುಂಗುರವು ಪ್ರಳಯದ ಮೂಲಕ ಸಕಾಲದಲ್ಲಿ ಇಳಿದು ಬಂದು ನೋಹನ ಕಾಲದ ಭ್ರಷ್ಟ ಸಂತತಿಯನ್ನು ನಾಶಪಡಿಸಿತಲ್ಲದೆ, ಸತ್ಯವೇದದಲ್ಲಿ ತಿಳಿಸಿದ ದೇವರ ಯೋಜನೆಯ ಪ್ರಸ್ತುತ ಕೆಟ್ಟ ಲೋಕವನ್ನು ಪರಿಚಯಪಡಿಸಿತು. ನೀರಿನ ಸುತ್ತುವರಿಕೆಯನ್ನು ತೆಗೆದುದರಿಂದ ಬೇಸಿಗೆ ಮತ್ತು ಚಳಿಗಾಲಗಳೆಂಬ ಬದಲಾಗುವ ಕಾಲಗಳನ್ನು ಕೊಟ್ಟಿತ್ತಲ್ಲದೆ, ಭಯಂಕರವಾದ ಚಂಡಮಾರುತಗಳಿಗೆ ಅವಕಾಶ ಮಾಡಿಕೊಟ್ಟಿತು. ಆದರೆ, ಇದರಿಂದ ಜಲಪ್ರಳಯದ ನಂತರ ಕಂಡುಬಂದ ಕಾಮನ ಬಿಲ್ಲು ಸಾಧ್ಯವಾಯಿತು. ಯಾಕೆಂದರೆ, ಈ ಮೊದಲು ಸೂರ್ಯನ ಕಿರಣಗಳು ಕಾಮನ ಬಿಲ್ಲಿನ ಪರಿಣಾಮ ಬೀರುವ ರೀತಿಯಲ್ಲಿ ನೇರವಾಗಿ ನೀರಿನ(ಪೊರೆ) ಆವರಣವನ್ನು ತೂರಿಬರುವಂತಿರಲಿಲ್ಲ. (ಆದಿ 9:12–17).

ಹಿಂದಿನವುಗಳನ್ನು ಬರೆಯುವಾಗ ನಾವು Scientific American ಪ್ರಕಟಗೊಂಡ ಪ್ರೊ॥ Vail ರವರು ತಮ್ಮ ಸ್ವಂತ ಲೇಖಣಿಯಲ್ಲಿ ಬರೆದ ಕೆಳಗಿನ ಸಂಕ್ಷಿಪ್ತ ಟಿಪ್ಪಣಿಯನ್ನು ನೀಡುವವರಾಗಿದ್ದೇವೆ. :–

## ಹಿಮಗಟ್ಟಿದ ಆ ಅತಿದೊಡ್ಡ ಪ್ರಾಣಿ

### That Frozen Mammoth

Scientific American ಪತ್ರಿಕೆಯ ಸಂಪಾದಕರಿಗೆ,

ನಿಮ್ಮ ಏಪ್ರಿಲ್ ತಿಂಗಳ 12ನೇ ಸಂಚಿಕೆಯಲ್ಲಿ ಡಾ॥ Herz ರವರು ಇತ್ತೀಚೆಗೆ ಪೂರ್ವ ಸೈಬೀರಿಯಾ ಕ್ಷೇತ್ರದಲ್ಲಿನ ಹಿಮಭರಿತ ಪ್ರದೇಶವೊಂದರಲ್ಲಿ ಕಂಡುಕೊಂಡ ಹಿಮಗಟ್ಟಿದ ಪ್ರಚಂಡ ಪ್ರಾಣಿಯೊಂದರ ಬಗ್ಗೆ ನಾನು ಅತ್ಯಂತ ಆಸಕ್ತಿಯಿಂದ ಓದಿದೆ. ಇದು ನನಗೆ ಭೂವಿಜ್ಞಾನಿಗಳ ಹಾದಿಯಲ್ಲಿ "Rosetta stone" ಗಿಂತಲೂ ಹೆಚ್ಚಿನದಾಗಿ ನನಗೆ ಕಂಡುಬರುತ್ತಿದೆ. ಈ ಭೂಮಿಯು ಈ ವರೆಗೆ ಕಂಡ ಎಲ್ಲಾ ಹಿಮದ ಯುಗಾರಂಭಗಳು ಮತ್ತು ಎಲ್ಲ ಪ್ರಳಯಗಳು ಪ್ರಾಚೀನ ಕಾಲದಲ್ಲಿ ಭೂಮಿಯ ಮೇಲಿನ ಹಗುರವಾಗಿ ಮೋಡದಂತೆ ಇದ್ದ ಹಬೆಯು ಮುಂದುವರೆದು ಮತ್ತು ಅನುಕ್ರಮವಾದ ಕ್ಷೀಣಿಸುವಿಕೆಂದುಂಟಾದುದು ಎಂಬ ಹೇಳಿಕೆಯನ್ನು ಬಲವಾಗಿ ಸಮರ್ಥಿಸುತ್ತದೆ. ಇಂದಿನ ಗುರು ಮತ್ತು ಶನಿಗ್ರಹಗಳ ಹಬೆಯಂತೆ ಈ ಮೋಡದ ಹಬೆಯು ಭೂಮಿಯ ಸುತ್ತ ಹರಡಿತ್ತು.

ಭೂಮಿಯ ನೀರಿನ ಹಬೆಯ ಉಳಿಕೆಗಳು ಭೂಮಿಯ ಸುತ್ತಲೂ ಸೂರ್ಯಗ್ರಹದ ಆಚ್ಛಾದನೆಯಂತೆ ಇತ್ತೀಚಿನ ಭೂವಿಜ್ಞಾನ ಸಮಯದವರೆಗೂ ಪ್ರದಕ್ಷಿಣೆ ಮಾಡುತ್ತಿರ ಬಹುದೆಂಬ ಸಲಹೆಯನ್ನು ನನ್ನ ಭೂವಿಜ್ಞಾನಿ ಸಹೋದರರಿಗೆ ನೀಡಲು ನನಗೆ ಅವಕಾಶ ಮಾಡಿಕೊಡಿ. ಈ ಹಬೆಯು ಮುಖ್ಯವಾಗಿ ಅತ್ಯಂತ ಕಡಿಮೆ ಪ್ರತಿರೋಧ ಶಕ್ತಿಯಿರುವ ಮತ್ತು ಹೆಚ್ಚಿನ ಆಕರ್ಷಣೆಯಿರುವ ಕಾಲುವೆಗಳ ಮೂಲಕ ದೃವ ಪ್ರದೇಶಗಳಲ್ಲಿ ನಿಶ್ಚಯವಾಗಿ ಪೃಥ್ವಿಗೆ ಸಂಬಂಧಿಸಿದ ವಿಸ್ತಾರವಾದ ಮಂಜುಗಡ್ಡೆಗಳಂತೆ ಬಿದ್ದಿರಬೇಕು. ಆಗ ಸಹಾ ಅಂತಹ ಪರದೆಯು ಅಥವಾ ಪ್ರಪಂಚದ ಮೇಲ್ಹಾವಣಿಯು ಹವಾಮಾನದ ತೀವ್ರತೆಯನ್ನು ದೃವಗಳವರೆಗೆ ಹದಮಾಡಿರಬೇಕು. ಈ ರೀತಿಯಲ್ಲಿ ಪ್ರಚಂಡ ಪ್ರಾಣಿ ಮತ್ತು ಉತ್ತರ ದೃವಲೋಕದ ಅದರ ಸಜಾತಿಯರಿಗೆ ಹುಲ್ಲುಗಾವಲನ್ನು ಒದಗಿಸಿ, ಹಸಿರು ಮೇಲ್ಹಾವಣಿಯುಳ್ಳ ಹಸಿರು ಮನೆಯೊಂದನ್ನು ಮಾಡಿಕೊಟ್ಟಿದ್ದಿರಬಹುದು. ಇದು ಅಂಗೀಕಾರವಾದಲ್ಲಿ, ನಾವು ಸಮೃದ್ಧಿ ಜೀವನವುಳ್ಳ ಈ ಲೋಕವನ್ನು ನಾಶಪಡಿಸಬಲ್ಲ ಮಂಜುಗಡ್ಡೆಗಳ ಮೇಲ್ಕಟ್ಟುಗಳ ಗಾತ್ರ ಮತ್ತು ಕಾರ್ಯ ಸಮರ್ಥತೆಗೆ ಯಾವ ಮಿತಿಯನ್ನೂ ಇಡುವಂತಿಲ್ಲ. ಡಾ॥ Herzರವರಂತೆ ಇನ್ನೂ ಅನೇಕರು ಕಂಡುಕೊಂಡ, ಹಿಮಗಡ್ಡೆಯಲ್ಲಿ ಹುದುಗಿಹೋಗಿದ್ದ ಆದರೆ ಅದರ ಜಠರದಲ್ಲಿ ಇನ್ನೂ ಜೀರ್ಣವಾಗದೆ ಉಳಿದು ಹೋಗಿದ್ದ ಹುಲ್ಲು ಹೊಂದಿದ್ದ ಪ್ರಚಂಡ ಪ್ರಾಣಿಗಳು ಆಕಸ್ಮಿಕವಾಗಿ ಥಕ್ಕನೇ ಬೀಳುವ ಮಂಜುಗಡ್ಡೆಗಳ ಒತ್ತಡಕ್ಕೆ ಸಿಕ್ಕಿಹಾಕಿಕೊಂಡಿರಬಹುದು ಎಂದು ತೋರುತ್ತದೆ. ಈ ಪ್ರಕರಣದಲ್ಲಿ, ಇನ್ನೂ ಮೆಲ್ಲದ ಹುಲ್ಲನ್ನು ಬಾಯಲ್ಲಿ ಕಚ್ಚಿಕೊಂಡಿದ್ದ ಪ್ರಾಣಿಗಳು ಹಿಮಸಮಾಧಿಯಾಗಿರುವ ಕಥೆಯೊಂದು ನಮಗೆ ತಪ್ಪಿಲ್ಲದೆ ದೊರೆಯುತ್ತದೆ. ಇದನ್ನು ಒಪ್ಪುವುದಾದರೆ, ನಮಗೆ ಹಿಮನದಿಗೆ ಸಂಬಂದಿಸಿದ ಸರಿಯಾದ ಮಂಜುಗಡ್ಡೆಯ ಮೂಲ ದೊರೆತಂತಾಯಿತು ಮತ್ತು ಇದರಿಂದ ನಾವು ಈ ಭೂಮಿಯು ಮಂಜಿನ ಚೌಕಟ್ಟನ್ನು ಹೊಂದುವುದಕ್ಕಾಗಿ ತಂಪಾಯಿತೆಂಬ ತತ್ವಜ್ಞಾನವಲ್ಲದ ಕಲ್ಪಿತ ಸಂಗತಿಗಳಿಂದ ಸಂತೋಷವಾಗಿ ತಪ್ಪಿಸಿಕೊಳ್ಳಬಹುದು.

ಅಗ್ನಿಪರ್ವದ ಕಾಲದಲ್ಲಿ ಮಹಾಸಾಗರಗಳು ಅಳತೆಯಿಲ್ಲದ ಖನಿಜ ಮತ್ತು ಲೋಹ ವಸ್ತುಗಳೊಡನೆ ಆಕಾಶದ ಮಟ್ಟವನ್ನು ತಲುಪಿದವು; ನಾವು ಈ ಹಬೆಯು ವಾರ್ಷಿಕ ಪದ್ಧತಿಯಲ್ಲಿ ಉಂಟಾಗುತ್ತವೆ ಮತ್ತು ಕಾಲಾನಂತರ ಭವ್ಯ ಹಂತಗಳಲ್ಲಿ ಹಿಂತಿರುಗುತ್ತವೆಂದು ನಾವು ಒಪ್ಪಿಕೊಂಡಲ್ಲಿ, ಅವುಗಳಲ್ಲಿ ಕೆಲವು ಮಾನವ ಯುಗದ ಪ್ರಾರಂಭದಿಂದ ಇಂದಿನವರೆಗೂ ಹಿಂಬಾಲಿಸಿಕೊಂಡು ಬಂದಿವೆ. ನಾವು ಇಂದು ಅಂಧಕಾರವಾಗಿಯೂ, ಗಲಿಬಿಲಿಯಾಗಿಯೂ ಕಂಡು ಬರುವ ಅನೇಕ ಸಂಗತಿಗಳನ್ನು ವಿವರಿಸಬಹುದು

ಈ ಹಿಂದೆ 1874 ರಲ್ಲಿ ನಾನು ಇಂತಹ ಕೆಲವೊಂದು ಅಲೋಚನೆಗಳನ್ನು ಕರಪತ್ರಗಳ ರೂಪದಲ್ಲಿ ಪ್ರಕಟಿಸಿದ್ದೆ. ನಾನು ಈ "ಆಚ್ಛಾದನಾ ವಾದವನ್ನು' (Canopy Theory) ಈಗ ಮತ್ತೊಮ್ಮೆ ಮುಂದಿಡುವಾಗ 20ನೇ ಶತಮಾನದ ಅಲೋಚನಾಕಾರರು ಇದನ್ನು ತಮ್ಮ ನೆನಪಿಗೆ ತಂದುಕೊಳ್ಳಬಹುದೆಂದು ನಿರೀಕ್ಷಿಸುತ್ತೇನೆ. - Issac N Vail

## ಸೃಷ್ಟೀಕರಣದ ಸಪ್ತಾಹ (ವಾರ)
## The Creative Week

ನಮ್ಮ ಮನಸ್ಸಿನ ಮುಂದೆ ಸೃಷ್ಟಿಯ ಸಾಮಾನ್ಯ ದೃಷ್ಟಿಕೋನವನ್ನು ಇಟ್ಟುಕೊಂಡು, ನಾವೀಗ ಆದಿಕಾಂಡದ ವಿವರಣೆಗಳತ್ತ ತಿರುಗೋಣ ಮತ್ತು ಈ ಊಹನಾತ್ಮಕ ವಿಚಾರಗಳನ್ನು ಅವುಗಳ ಹೇಳಿಕೆಗಳೊಂದಿಗೆ ಸಾಮರಸ್ಯ ಗೊಳಿಸಲು ಪ್ರಯತ್ನಿಸೋಣ. ಮೊಟ್ಟಮೊದಲನೆಯದಾಗಿ ಈ ಸೃಷ್ಟಿ ಸಪ್ತಾಹವು ನಾಲ್ಕು ಭಾಗಗಳಾಗಿರುವುದನ್ನು ನಾವು ನೋಡುತ್ತೇವೆ:– (1) ಎರಡು ದಿನಗಳು (ಯುಗಾರಂಭ ದಿನಗಳು, ನಮ್ಮ ಲೆಕ್ಕಾಚಾರದಲ್ಲಿ 2 X 7,000 = 14,000 ವರ್ಷಗಳು) ಭೂಮಿಯನ್ನು ಪ್ರಾಣಿ ಜೀವಿತಕ್ಕೆ ಸಿದ್ಧಪಡಿಸುವಂತೆ, ಕ್ರಮ ಪಡಿಸುವುದಕ್ಕೆ ಮೀಸಲಾಗಿತ್ತು (2) ಮುಂದಿನ ಮತ್ತೆರಡು ದಿನಗಳು (ಮೇಲಿನ ಲೆಕ್ಕಾಚಾರದಂತೆ ಇನ್ನೂ 14,000 ಅಧಿಕ ವರ್ಷಗಳು) ಸಸ್ಯಗಳ ಮತ್ತು ಕೆಳ ಜಾತಿಯ ಅಂದರೆ ಕಪ್ಪೆಚಿಪ್ಪು, ಮೀನು ಇತ್ಯಾದಿಗಳ ಉತ್ಪತ್ತಿಗಾಗಿ ಸುಣ್ಣಕಲ್ಲು, ಕಲ್ಲಿದ್ದಲು ಇವೇ ಮುಂತಾದ ಖನಿಜ ವಸ್ತುಗಳ ಸಂಗ್ರಹಣೆಗಾಗಿ ಮೀಸಲಾಗಿತ್ತು (3) ಇನ್ನು ಮುಂದಿನ 2 ಯುಗಾರಂಭ ದಿನಗಳು ಅಂದರೆ 14,000 ವರ್ಷಗಳು ನೀರು ಮತ್ತು ಭೂಮಿಯ ಮೇಲೆ ಚಲಿಸುವ ಪ್ರಾಣಿಗಳನ್ನು ದೊಡ್ಡ ಸಸ್ಯ, ಮರಗಳನ್ನು ಉಂಟು ಮಾಡುವುದಕ್ಕಾಗಿ, ಇನ್ನೂ ಮುಂದುವರೆದು ಸೃಷ್ಟಿಕರ್ತನ ಸ್ವರೂಪನಾದ ಈ ಲೋಕದ ಮಾನವನನ್ನು ಮಹಿಮೆ ಮತ್ತು ಗೌರವಯುತನಾದ ಈ ಲೋಕದ ರಾಜನನ್ನಾಗಿ ತಯಾರು ಮಾಡಲು ವಿನಿಯೋಗಿಸ ಲಾಯಿತು. (4) ಮಾನವ ಸೃಷ್ಟಿ ಎಂಬ ಅಂತಿಮ ಕಾರ್ಯವು ಆರನೆಯ ದಿನದ ಅಂತ್ಯದಲ್ಲಿ ಅಥವಾ ಏಳನೆಯ ಯುಗಾರಂಭ ದಿನದ ಪ್ರಾರಂಭದಲ್ಲಿ ನೆರವೇರಿತು. ಯಾಕೆಂದರೆ, "ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು ಎಂದು ಬರೆದದೆ. (ಆದಿಕಾಂಡ 2 : 1 )

## ಎರಡು ನಿಷ್ಟಾಪೂರ್ವಸಾಕ್ಷ್ಯಗಳು
## (Two Loyal Testimonies )

ಪ್ರೊ॥ ಸಿಲ್ಲಿಮ್ಯಾನ್ ಎಂಬುವವರು ಈ ರೀತಿಯಾಗಿ ದೃಢವಾಗಿ ಹೇಳುತ್ತಾರೆ : "ಗ್ರಹದಲ್ಲಿನ ಪ್ರತಿಯೊಂದು ಮಹಾ ವೈಶಿಷ್ಟ್ಯವೂ ಸತ್ಯವೇದದ ಇತಿಹಾಸದಲ್ಲಿ ಹೇಳಿರುವ ಘಟನಾ ಕ್ರಮಗಳಿಗೆ ಈ ಚರಿತ್ರೆಯು (ಸತ್ಯವೇದವು) ತತ್ವಜ್ಞಾನ ಮತ್ತು ಧರ್ಮದಷ್ಟೇ ಮುಖ್ಯವಾದ ದಾಖಲೆಯನ್ನು ಒದಗಿಸುತ್ತದೆ ಮತ್ತು ಈ ಭೂಗ್ರಹವೇ (ಸತ್ಯವೇದದ) ದಾಖಲೆಯು ನಿಜವೆಂಬುದಕ್ಕೆ ರುಜುವಾತುಗಳನ್ನು ನಾವು ನೋಡಬಹುದು.

ಆದಿಕಾಂಡದಲ್ಲಿನ ಸೃಷ್ಟಿಕಾರಕ ವಿವರಣೆಗಳನ್ನು ಉಲ್ಲೇಖಿಸಿ ಪ್ರೊ॥ ದಾನಾರವರು ಹೀಗೆ ಹೇಳುತ್ತಾರೆ: "ಈ ಅನುಕ್ರಮದಲ್ಲಿ ನಾವು ಕೇವಲ ವಿಜ್ಞಾನದಲ್ಲಿ ತರ್ಕಿಸಿರುವ ಘಟನೆಗಳ ಕ್ರಮಾಗತಿಯನ್ನು ಮಾತ್ರ ಅವಲೋಕಿಸುವವರಲ್ಲ. ಆದರೆ ಏರ್ಪಾಟಿನಲ್ಲಿ ಸುವ್ಯವಸ್ಥೆಯಿದೆ ಮತ್ತು ತತ್ವಜ್ಞಾನವು ಯಾವುದೇ ರೀತಿಯಲ್ಲಿ ಆದೇಶಿಸಿದರೂ ಹೊಂದಿ ಕೊಳ್ಳಲಾಗದ, ಬಹುದೂರದಲ್ಲಿ ತಲಪುವ ಪ್ರವಾದನೆಯೊಂದು ಕಂಡುಬರುತ್ತದೆ.

ಅವರು ಮುಂದುವರಿದು ಹೀಗೆ ಹೇಳುತ್ತಾರೆ : ಯಾವುದೇ ಮಾನವ ಮನಸ್ಸು ಸಹಾ ಈ ಘಟನೆಗಳಿಗೆ ಸಾಕ್ಷಿಯಲ್ಲ. ಆದಿಕಾಲದಲ್ಲಿ ಯಾವುದೇ ಅಂತಹ ಮನಸ್ಸು ಅತಿಮಾನುಷ್ಯ ಜ್ಞಾನದ ವರದಾನವಿಲ್ಲದೆ, ಆ ರೀತಿಯ ಯೋಜನೆಯನ್ನು ಕಲ್ಪಿಸಲು ಅಥವಾ ಸೂರ್ಯನ ಸೃಷ್ಟಿ, ಭೂಮಿಗೆ ಬೆಳಕನ್ನುಂಟು ಮಾಡಿದ 4ನೇ ದಿನದ ನಂತರ ಸಸ್ಯ ಮತ್ತು ಪ್ರಾಣಿಗಳ ಉತ್ಪತ್ತಿಗೆ ಏಕ ಪ್ರಕಾರವಾಗಿ ಪ್ರಮುಖನಾದ ಸೂರ್ಯನನ್ನು ಈ ಲೋಕದ ಬೆಳಕಿನ ಮೂಲನಾಗಿ ಇಡಲು ಸಾಧ್ಯವಿಲ್ಲ. ಈ ಸಂಪೂರ್ಣವಾದ ಯೋಜನೆಯಲ್ಲಿ ಪ್ರದರ್ಶಿತಗೊಂಡಿರುವ ತತ್ವ ಜ್ಞಾನದ ಆಳವನ್ನು ಯಾರೂ ತಲುಪಿರುವುದಿಲ್ಲ.

## ಯುಗಾರಂಭದಲ್ಲಿ ಸೃಷ್ಟಿಯ ಪ್ರಥಮ ದಿನ
## The First Creative Epoch-Day

**"ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು. ಆಗ ದೇವರು–ಬೆಳಕಾಗಲಿ ಅನ್ನಲು ಬೆಳಕಾಯಿತು" (ಆದಿ. 1:2–3).**

ಬೆಳಕಿನ ಸ್ವಭಾವ ಮತ್ತು ಅದರ ಭೌತಿಕ ಕಾರಣ ಇವುಗಳನ್ನು ಇನ್ನೂ ಅಸಮರ್ಪಕವಾಗಿ ಗ್ರಹಿಸಲಾಗಿದೆ. – ಬೆಳಕೆಂದರೇನು? ಎಂಬ ಪ್ರಶ್ನೆಗೆ ತೃಪ್ತಿಕರವಾದ ಉತ್ತರವಿನ್ನೂ ಕಂಡುಬಂದಿಲ್ಲ. ಹೀಗಿದ್ದಾಗ್ಯೂ ಇದು ಪ್ರಕೃತಿಯಲ್ಲೆಲ್ಲಾ ಬಹು ಪ್ರಾಮುಖ್ಯವಾದ ಅಗತ್ಯವಾಗಿದೆ ಎಂಬುದು ನಮಗೆ ತಿಳಿದಿದೆ. ಖಾಲಿಯಾಗಿಯೂ, ಅಪ್ರಯೋಜನಕರವಾಗಿಯೂ ಇದ್ದ ಈ ಭೂಮಿಯ ಮೇಲೆ ಮಾನವನನ್ನು ಉತ್ಪತ್ತಿ ಮಾಡುವ ಸಿದ್ಧತೆಗೆ ದೇವರ ಚೈತನ್ಯ ಮುಂದಾದಾಗ ದೇವರ ಕ್ರಮದಲ್ಲಿ ಬೆಳಕೇ ಸರ್ವ ಪ್ರಥಮವಾಗಿತ್ತೆಂಬುದಕ್ಕೆ ಆಶ್ಚರ್ಯಪಡಬೇಕಾದ್ದಿಲ್ಲ. ದೇವರಾತ್ಮವು ಚೈತನ್ಯಸ್ವರೂಪವಾಗಿ ಭೂಮಿಯ ಮೇಲೆ ಚಲಿಸುತ್ತಿತ್ತು ಎಂದು ಹೇಳಿರುವಾಗ ಬಹುಶಃ ಅದು ವಿದ್ಯುತ್ ಸಾಮರ್ಥ್ಯ ಮತ್ತು ಬೆಳಕು ಅಂದರೆ aurora borealis ಅಥವಾ ಉತ್ತರದ ಬೆಳಕನ್ನು ಸಚೇತನಗೊಳಿಸುತ್ತಿದ್ದಿರಬೇಕು. ಅಥವಾ ಈ ಚೈತನ್ಯವು ಸಂಭವನೀಯವಾಗಿ ಕೆಲವೊಂದು ಭಾರವಾದ ಜಲ ಮತ್ತು ಖನಿಜ ವಸ್ತುಗಳನ್ನು ಹೊಂದಿದ ಸುತ್ತುಂಗುರಗಳನ್ನು ಕೆಳಕ್ಕೆ ತಂದಿದ್ದಿರಬಹುದು. ಇದರಿಂದ ಬೆಳಕು ಮತ್ತು ಕತ್ತಲೆ, ಹಗಲು ಮತ್ತು ರಾತ್ರಿ ಇವುಗಳ ವ್ಯತ್ಯಾಸವನ್ನು ಮಾಡಲು ಸಾಧ್ಯವಾಯಿತು. ಆದಾಗ್ಯೂ ನಕ್ಷತ್ರಗಳನ್ನಾಗಲೀ, ಚಂದ್ರನನ್ನಾಗಲೀ, ಸೂರ್ಯನನ್ನಾಗಲೀ ಇಂದಿಗೂ ಭೂಮಿಯನ್ನು ಸುತ್ತುವರಿದಿರುವ ಈ ಭಾರವಾದ ಸುತ್ತುಂಗರ ಅಥವಾ ಸುತ್ತು ಪಟ್ಟಿಯ ಮೂಲಕ ಗ್ರಹಿಸಲು ಸಾಧ್ಯವಿಲ್ಲ .

"ಸಾಯಂಕಾಲವೂ ಮತ್ತು ಪ್ರಾತಃಕಾಲವೂ – ಪ್ರಥಮ ದಿನ". ಇಬ್ರಿಯ ಸೌರ ದಿನಗಳಲ್ಲಿಯೂ ಮತ್ತು ಈ ಯುಗಾರಂಭ ದಿನಗಳಲ್ಲಿಯೂ ಸಾಯಂಕಾಲವು ಮೊದಲಿಗೆ ಬರುತ್ತದೆ. ಕ್ರಮೇಣವಾಗಿ ದೇವರ ಉದ್ದೇಶಗಳನ್ನು ಸಂಪೂರ್ಣವಾಗಿ ನೆರವೇರಿಸುತ್ತದೆ. ಆಗ ಬೇರೊಂದು ಕಾರ್ಯಕ್ಕೆ ವಿಭಾಗಿಸಿದ ಮತ್ತೊಂದು 7000 ವರ್ಷಗಳ ದಿನವು ಅಂಧಕಾರದಲ್ಲಿ ಪ್ರಾರಂಭಗೊಂಡು ಪ್ರಗತಿಯತ್ತ ಮುಂದುವರೆಯುತ್ತದೆ. ಈ ಅವಧಿ ಅಥವ ದಿನವನ್ನು ವೈಜ್ಞಾನಿಕವಾಗಿ "azoic" ಅಥವಾ "ನಿರ್ಜೀವ' ಎನ್ನುತ್ತಾರೆ.

## ಯುಗಾರಂಭದಲ್ಲಿ ಸೃಷ್ಟಿಯ ಎರಡನೆಯ ದಿನ
## The Second Creative Epoch-Day

**"ಬಳಿಕ ದೇವರು – ಜಲಸಮೂಹಗಳ ನಡುವೆ ವಿಸ್ತಾರವಾದ ಗುಮ್ಮಟವು ಉಂಟಾಗಲಿ; ಅದು ಕೆಳಗಣ ನೀರುಗಳನ್ನೂ, ಮೇಲಣ ನೀರುಗಳನ್ನೂ ಬೇರೆ ಬೇರೆ ಮಾಡಲಿ ಅಂದನು. ದೇವರು ವಿಸ್ತಾರವಾದ ಗುಮ್ಮಟವನ್ನು ಮಾಡಿ ಅದರ ಕೆಳಗಿದ್ದ ನೀರುಗಳನ್ನು ಅದರ ಮೇಲಿದ್ದ ನೀರುಗಳಿಂದ ವಿಂಗಡಿಸಿದನು; ಹಾಗೆಯೇ ಆಯಿತು. ದೇವರು ಆ ಗುಮ್ಮಟಕ್ಕೆ ಆಕಾಶವೆಂದು ಹೆಸರಿಟ್ಟನು" (ಆದಿ. : 1 : 6–7)**

7000 ವರ್ಷಗಳ ಅವಧಿಯುಳ್ಳ ಈ ಯುಗಾರಂಭದ ಎರಡನೆಯ ದಿನವು ಸಂಪೂರ್ಣವಾಗಿ ವಾತಾವರಣವನ್ನು ಉಂಟು ಮಾಡುವುದಕ್ಕಾಗಿಯೇ ಮೀಸಲಾಗಿತ್ತು. ಇದನ್ನು ಬಹುಶಃ ಆತನ ಹಂಚಿಕೆ, ಕ್ರಮಪಡಿಸುವಿಕೆ ಮತ್ತು ಸೃಷ್ಟಿ ಕಾರ್ಯಗಳಿಗೆ ಕಡಿಮೆಯಾಗದಂತೆ ಸ್ವಾಭಾವಿಕವಾದ ಸಮರ್ಪಕ ರೀತಿಯಲ್ಲಿ ಕ್ರಮಪಡಿಸಿದನು. ಯುಗಾರಂಭದ ಮೊದಲನೆಯ ದಿನದಲ್ಲಿ ಭೂಮಿಯ ಮೇಲೆ ಬೆಳಕು ತೂರಿಕೊಂಡು ಹೋಗಲು ಎಡೆ ಮಾಡಿ ಕೊಟ್ಟಿದ್ದ ನೀರು ಮತ್ತು ಖನಿಜಗಳ ಸುತ್ತುಂಗುರದ ಬೀಳುವಿಕೆಯು ಇನ್ನೂ ಶಾಖದಿಂದ ಕೂಡಿದ ಭೂಭಾಗಗಳನ್ನು ತಲುಪಿ ಕುದಿಯುವ ಪ್ರವಾಹ ನೀರಿನೊಡನೆ ಬೆರೆತು ವಿವಿಧ ರೀತಿಯ ಅನಿಲಗಳನ್ನು ಉಂಟು ಮಾಡುವುದಾಗಿದೆ. ಇವು ಒಂದು ರೀತಿಯ ಮೃದುವಾದ ಅಂತರಿಕ್ಷವನ್ನು ಅಥವಾ ವಾಯುಮಂಡಲವನ್ನು ಭೂಮಿಯ ಸುತ್ತಲೂ ರಚಿಸಿ ಸುತ್ತುಂಗುರದಲ್ಲಿನ ಉಳಿದ ನೀರನ್ನು ಭೂಮಿಯಿಂದ ತಡೆಹಿಡಿದು ಕಾಪಾಡುವುದಾಗಿದೆ. ಈ "ದಿನ" ವು ಸಹಾ ದೇವರ ವಾಕ್ಯವು ಹೇಳುವಂತೆ ನಿರ್ಜೀವ (Azoic) ಅವಧಿಗೆ ಸಂಬಂಧಿಸಿದೆ. ಆದರೆ ಭೂವಿಜ್ಞಾನವು ಇದನ್ನು ವಿರೋಧಿಸುತ್ತದೆ ಮತ್ತು ಈ ಸಮಯಕ್ಕೆ ಯುಕ್ತವಾದ ಬಂಡೆಗಳಲ್ಲಿ ಹರಿಯುವ ಕ್ರಿಮಿಕೀಟಗಳ ಮತ್ತು ಭಾರಿ ಸಂಖ್ಯೆಯ ಚಿಕ್ಕ ಪುಟ್ಟ ಚಿಪ್ಪು-ಮೀನುಗಳ ಅವಶೇಷಗಳು ಸುಣ್ಣಕಲ್ಲಿನ ಬಳಿ ಕಂಡುಬಂದಿವೆ ಎಂದು ಹೇಳುತ್ತಾರೆ. ಅವರು ಈ ಮೊದಲ ಜೀವಿಗಳ Palaeozoic ಕಾಲವನ್ನು Silurian period ಎಂದು ಹೇಳುತ್ತಾರೆ. ಇದು ಸತ್ಯವೇದದ ವಿವರಣೆಗಳಿಗೆ ಹೆಚ್ಚಿನ ವ್ಯತ್ಯಾಸವನ್ನೇನೂ ಮಾಡುವುದಿಲ್ಲ, ಅದು ಈ ಅತ್ಯಂತ ಸಣ್ಣಜೀವಿಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಯುಗಾರಂಭದ ಎರಡನೆಯ ದಿನದಲ್ಲಿ ಮೇಲ್ಮೈಯ ನೀರು ಒಂದು ವಾತಾವರಣದ ಮೂಲಕ ಮೋಡ ಮತ್ತು ಹಬೆಯಿಂದ ಪ್ರತ್ಯೇಕಗೊಳಿಸುವುದರ ಮೂಲಕ ದೇವರ ಉದ್ದೇಶವನ್ನು ಗೌರವಿಸಿ, ಅದನ್ನು ಸಂಪೂರ್ಣವಾಗಿ ಪೂರೈಸಿ ಆ ದಿನದ ಸಾಯಂಕಾಲವೂ, ಪ್ರಾತಃಕಾಲವೂ ಯಶಸ್ವಿಯಾಗಿ ಮುಕ್ತಾಯವಾಯಿತು.

## ಯುಗಾರಂಭದಲ್ಲಿ ಸೃಷ್ಟಯ ಮೂರನೆಯ ದಿನ
## The Third Creative Epoch-Day

**"ಅನಂತರ ದೇವರು – ಆಕಾಶದ ಕೆಳಗಿರುವ ನೀರೆಲ್ಲಾ ಒಂದೇ ಸ್ಥಳದಲ್ಲಿ ಕೂಡಿಕೊಳ್ಳಲಿ, ಒಣನೆಲವು ಕಾಣಿಸಲಿ ಅಂದನು; ಹಾಗೆಯೇ ಆಯಿತು. ದೇವರು ಒಣನೆಲಕ್ಕೆ ಭೂಮಿಯೆಂದೂ ಜಲಸಮೂಹಕ್ಕೆ ಸಮುದ್ರವೆಂದೂ ಹೆಸರಿಟ್ಟನು. ಆತನು ಅದನ್ನು ಒಳ್ಳೆಯದೆಂದು ನೋಡಿದನು. ತರುವಾಯ ದೇವರು – ಭೂಮಿಯು ಹುಲ್ಲನ್ನೂ ಬೀಜಬಿಡುವ ಕಾಯಿಪಲ್ಯದ ಗಿಡಗಳನ್ನೂ ಬೆಳೆಸಲಿ; ಮತ್ತು ಬೀಜವುಳ್ಳ ಹಣ್ಣಿನ ಮರಗಳನ್ನೂ ಅವುಗಳ ಜಾತಿಗನುಸಾರವಾಗಿ ಹುಟ್ಟಿಸಲಿ ಎಂದು ಹೇಳಿದನು; ಹಾಗೆಯೇ ಆಯಿತು. ಭೂಮಿಯಲ್ಲಿ ಹುಲ್ಲು ಬೆಳೆಯಿತು; ತಮ್ಮ ತಮ್ಮ ಜಾತಿಗನುಸಾರವಾಗಿ ಬೀಜಬಿಡುವ ಕಾಯಿಪಲ್ಯದ ಗಿಡಗಳು ಉಂಟಾದವು; ತಮ್ಮ ತಮ್ಮ ಜಾತಿಗನುಸಾರವಾಗಿ ಬೀಜವುಳ್ಳ ಹಣ್ಣಿನ ಮರಗಳು ಕಾಣಿಸಿದವು" (ಆದಿ. 1 : 9–12)**

ಭೂವಿಜ್ಞಾನವು ಸಂಪೂರ್ಣವಾಗಿ ಈ ದಾಖಲೆಯನ್ನು ಸಮರ್ಥಿಸುತ್ತದೆ. ಇದು ನಮಗೆ ಸೂಚಿಸುವುದೇನೆಂದರೆ ಭೂಮಿಯ ಮೇಲಿನ ಗಟ್ಟಿಯಾದ ಪದರು ತಣ್ಣಗಾಗಲು, ನೀರಿನ ಭಾರವು ಅದನ್ನು ತಿರುಚಿ, ಮುದುರಿಸುತ್ತದೆ – ಕೆಲವು ಭಾಗವು ಕುಂದಿಹೋಗಿ ಸಮುದ್ರದ ತಳಭಾಗವಾಗುತ್ತದೆ. ಇತರ ಭಾಗಗಳು ರಭಸದಿಂದ ಮೇಲಕ್ಕೇರಿಸಲ್ಪಟ್ಟು ಪರ್ವತ ಶ್ರೇಣಿಗಳು ಸ್ಥಾಪಿಸಲ್ಪಡುತ್ತವೆ. ಇವುಗಳು ಕೂಡಲೇ ಉಂಟಾಗದೆ, ಒಂದರ ನಂತರ ಮತ್ತೊಂದು ಶ್ರೇಣಿಯಂತೆ ಕ್ರಮೇಣವಾಗಿ ಉಂಟಾಗುತ್ತವೆ. ಈ ಎಲ್ಲಾ ಬದಲಾವಣೆಗಳೂ ಮೂರನೆಯ ಯುಗಾರಂಭ ದಿನದ 7000 ವರ್ಷಗಳಲ್ಲಿಯೇ ಉಂಟಾಯಿತೆಂದು ನಾವು ಭಾವಿಸಲಾಗದು. ಆದರೆ ಇದು ಕೇವಲ ಸಸ್ಯಜೀವಿಗಳ ಪ್ರಾರಂಭದ ಕಾರ್ಯಗಳಿಗೆ ಬೇಕಾದ ಸಿದ್ಧತೆಗಳನ್ನು ಕಂಡಿತು. ಸ್ಪಷ್ಟವಾಗಿ, ಈ ರೀತಿಯ ಕೆಲವೊಂದು ದೊಡ್ಡ ಬದಲಾವಣೆಗಳು ಇತ್ತೀಚಿನ ದಿನಗಳಲ್ಲಿ ಆಗಿವೆ ಎಂಬ ಭೂವಿಜ್ಞಾನಿಗಳ ಹೇಳಿಕೆಗಳು ಸರಿಯಾಗಿಯೇ ಇವೆ. ಒಂದು ಶತಮಾನದೊಳಗೂ ನಾವು ಈ ರೀತಿಯ ಶಕ್ತಿಯ ಉದಾಹರಣೆಗಳನ್ನು ನೋಡಿದ್ದೇವೆ. ಮುಂದಿನ ಕೆಲವು ವರ್ಷಗಳಲ್ಲಿಯೂ ಸಹ ನಾವು ಪ್ರಕೃತಿಯ ಆವೇಶವನ್ನು ನೋಡುವುದಾದಲ್ಲಿ ಆಶ್ಚರ್ಯಪಡಬೇಕಿಲ್ಲ. ಯಾಕೆಂದರೆ, ನಾವೀಗ ಮತ್ತೊಂದು ಪರಿವರ್ತನೆಯ ಕಾಲದಲ್ಲಿದ್ದೇವೆ – Millennial Age ಯುಗಾಂತರ ಕಾಲದ ಪ್ರಾರಂಭ, ಇದಕ್ಕೆ ಬದಲಾದ ಪರಿಸ್ಥಿತಿ ಅನಿವಾರ್ಯ.

ನೀರು ಸಮುದ್ರಕ್ಕೆ ಹರಿದು ಹೋಗುವಾಗ, ಸಸ್ಯಗಳು ಉತ್ಪನ್ನವಾಗುತ್ತವೆ – ಪ್ರತಿಯೊಂದೂ ತಮ್ಮ ಜಾತಿ, ವರ್ಗಗಳಿಗನುಸಾರವಾಗಿ, ಮತ್ತು ಇದರಲ್ಲಿನ ಬೀಜವು ಅದೇ ಜಾತಿಯ ಸಸ್ಯಗಳನ್ನು ಮಾತ್ರ ಪುನರೋತ್ಪತ್ತಿ ಮಾಡುವಂತೆ. ಈ ಸಂಗತಿಯು ಸೃಷ್ಟಿಕರ್ತನ ನಿಯಮಗಳಿಗೆ ಎಷ್ಟೊಂದು ಬದ್ಧವಾಗಿದೆಯೆಂದರೆ, ತೋಟಗಾರಿಕೆಯವರು ವಿವಿಧ ರೀತಿಯವುಗಳನ್ನು ಸಮರ್ಪಕವಾಗಿ ಬೆಳೆಸಬಲ್ಲವರಾದರೂ, ಅದರ ಜಾತಿಯನ್ನು ಬದಲಾಯಿಸಲಾರರು. ವಿವಿಧ ಪ್ರಾಣಿಕುಲದ ಪ್ರಾಣಿಗಳ ಹಾಗೆಯೇ ವಿವಿಧ ಸಸ್ಯಕುಲಕ್ಕೆ ಸೇರಿದ ಸಸ್ಯಗಳನ್ನು ಬೆರಕೆಯಾಗ ಸಾಧ್ಯವಿಲ್ಲ ಇದರಿಂದ ನಮಗೆ ತಿಳಿದುಬರುವುದೇನಂದರೆ ಆತನು ಸೃಷ್ಟಿಕರ್ತನು ಮಾತ್ರವಲ್ಲದೆ ಮಹೋನ್ನತ ಸಂಕಲ್ಪವುಳ್ಳ ಬುದ್ಧಿಶಾಲಿಯೂ ಆಗಿದ್ದಾನೆ ಎಂಬುದು.

ಸಸ್ಯ ಜಾತಿಯು ಪ್ರಾಣಿ ಜೀವಿಗಳಿಗಿಂತ ಮುಂಚೆಯೇ ಸೃಷ್ಟಿಗೊಂಡವೆಂದು ಭೂವಿಜ್ಞಾನವು ಒಪ್ಪಿಕೊಳ್ಳುತ್ತದೆ. ಈ ಮೊದಲಿನ ದಿನಗಳಲ್ಲಿ ಸಸ್ಯಗಾರಿಕೆಯು ಉತ್ತಮ ಸ್ಥಾನದಲ್ಲಿತ್ತೆಂದೂ ಅದು ಒಪ್ಪುತ್ತದೆ – ಪಾಚಿಗಳು, ಜೌಗುಸಸ್ಯಗಳು ಮತ್ತು ಬಳ್ಳಿಗಿಡಗಳು ಆಗ ಇಂದಿಗಿಂತ ಬಹಳ ದೊಡ್ಡದಾಗಿಯೂ ಮತ್ತು ತೀವ್ರಗತಿಯಿಂದಲೂ ಬೆಳೆಯುತ್ತಿದ್ದ ಕಾರಣವೇನೆಂದರೆ, ವಾತಾವರಣದಲ್ಲಿ ಇಂಗಾಲ ಮತ್ತು ನೈಟ್ರೋಜಿನ್ ಆಮ್ಲಗಳು ಬಹಳವಾಗಿ ತುಂಬಿರುತ್ತಿದ್ದವು – ಇವು ತುಂಬಿರುವಾಗ ಉಸಿರಾಡುವ ಪ್ರಾಣಿಗಳು ಅಭಿವೃದ್ಧಿಹೊಂದಲು ಸಾಧ್ಯವಿರಲಿಲ್ಲ. ಈಗ ಭೂಮಧ್ಯ ರೇಖೆಯ ವಲಯಗಳಲ್ಲಿಯೂ ಕೆಲವು ಅಂಗುಲ ಅಥವಾ ಅಡಿಗಳಷ್ಟೇ ಬೆಳೆಯುವ ಗಿಡಗಳು ಆಗ 40 ರಿಂದ 80 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತಿದ್ದವು ಮತ್ತು ಕೆಲವೊಮ್ಮೆ ಸುತ್ತಳತೆಯಲ್ಲಿ 2 ಅಥವ 3 ಅಡಿಗಳಷ್ಟು ಇರುತ್ತಿದ್ದವೆಂದು ಅದರ ಅವಶೇಷಗಳಿಂದ ತಿಳಿದುಬರುತ್ತದೆ. ಅವುಗಳಿಗೆ ದೊರೆತ ಪರಿಸ್ಥಿತಿಯಲ್ಲಿ ಅವುಗಳ ಬೆಳೆಯುವಿಕೆಯು ಅಪರಿಮಿತ ಮಾತ್ರವಲ್ಲ, ತೀವ್ರಗತಿಯದ್ದೂ ಆಗಿತ್ತು .

ಈ ಅವಧಿಯಲ್ಲಿ ನಮ್ಮ ಕಲ್ಲಿದ್ದಲ (coalbeds) ಹಾಸುಗಳು ಉಂಟಾಯಿತೆಂದು ಭೂವಿಜ್ಞಾನಿಗಳು ಹೇಳುತ್ತಾರೆ; ಇಂಗಾಲ ಆಮ್ಲಕ್ಕೆ ಹೆಚ್ಚು ಸಂಬಂಧವಿರುವ ಗಿಡಗಳು ಮತ್ತು ಪಾಚಿಗಳು ತಮ್ಮಲ್ಲಿ ಇಂಗಾಲವನ್ನು ಕೂಡಿಟ್ಟುಕೊಂಡು ಕಲ್ಲಿದ್ದಲಾಯಿತು ಮತ್ತು ನಮ್ಮ ಪ್ರಸ್ತುತ ಕಲ್ಲಿದ್ದಲು ಶೇಖರಣೆಯನ್ನು ಸಿದ್ಧಪಡಿಸುತ್ತಾ ನಂತರ ಯುಗಾರಂಭ ದಿನಗಳ ಪ್ರಾಣಿ ಜೀವನಕ್ಕೆ ವಾತಾವರಣವನ್ನು ಶುದ್ಧೀಕರಿಸುವುದಾಯಿತು. ಈ ವಿಶಾಲವಾದ peat-bogs ಕಲ್ಲಿದ್ದಲು ಮತ್ತು ಪಾಚಿಯ ಹಾಸುಗಳು ಕ್ರಮೇಣವಾಗಿ ಮರಳು, ಜೇಡಿಮಣ್ಣು ಮುಂತಾದುವುಗಳಿಂದ ಮುಚ್ಚಿ ಹೋಯಿತು ಮತ್ತು ಉಬ್ಬರ–ಇಳಿತದ ಅಲೆಗಳು ಮತ್ತು ಗಗನದಿಂದ ಇಳಿದು ಬರುವ ನೀರಿನ ಇತರ ಸುತ್ತುಂಗುರಗಳು ಅವನ್ನು ಇನ್ನೂ ಆಳಕ್ಕೆ ತಳ್ಳಿದವು. ಬಹುಮಟ್ಟಿಗೆ ಈ ಕಾರ್ಯವಿಧಾನವು ಆಗಾಗ ಪುನರಾವರ್ತನೆಗೊಂಡಿರಬಹುದು. ಯಾಕೆಂದರೆ ನಾವು ಈ ಇಂಗಾಲ ಹಾಸುಗಳನ್ನು ವಿವಿಧ ಜೇಡುಮಣ್ಣು, ಮರಳು, ಸುಣ್ಣಕಲ್ಲು ಮತ್ತು ಇವುಗಳ ಮಧ್ಯ ಸ್ಥಿತಿಯಲ್ಲಿ ಒಂದರ ಮೇಲೆ ಒಂದು ಶೇಖರಗೊಂಡಿರುವುದನ್ನು ಕಾಣುತ್ತೇವೆ.

ಸಾಯಂಕಾಲವೂ ಪ್ರಾತಃಕಾಲವೂ ಆಗಿ 7000 ವರ್ಷಗಳ ಯುಗಾರಂಭದ ಮೂರನೆಯ ದಿವಸವು ದೈವಸಂಕಲ್ಪದ ಮೇರೆಗೆ ತನ್ನ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿತು. ಇದರಲ್ಲಿ ಕಲ್ಲಿದ್ದಲು, ಎಣ್ಣೆ ಮುಂತಾದವುಗಳು ಶೇಖರವಾಗುವುದರಿಂದ ಭೂವಿಜ್ಞಾನದಲ್ಲಿ ಇದನ್ನು Carboniferous era ಎಂದು ಕರೆಯುತ್ತಾರೆ.

## ಯುಗಾರಂಭದಲ್ಲಿ ಸೃಷ್ಟಿಯ ನಾಲ್ಕನೆಯ ದಿನ

### The Fourth Creative Epoch-Day

**"ಬಳಿಕ ದೇವರು – ಆಕಾಶಮಂಡಲದಲ್ಲಿ ಬೆಳಕುಗಳು ಉಂಟಾಗಲಿ; ಅವು ಹಗಲಿರುಗಳನ್ನು ಬೇರೆ ಬೇರೆ ಮಾಡಲಿ; ಇದಲ್ಲದೆ ಅವು ಗುರುತುಗಳಾಗಿದ್ದು ಸಮಯಗಳನ್ನೂ, ದಿನ ಸಂವತ್ಸರಗಳನ್ನೂ ತೋರಿಸಲಿ; ಮತ್ತು ಭೂಮಿಯ ಮೇಲೆ ಬೆಳಕು ಕೊಡುವುದಕ್ಕೆ ಅವು ಆಕಾಶಮಂಡಲದಲ್ಲಿ ದೀಪಗಳಂತಿರಲಿ ಅಂದನು. ಹಾಗೆಯೇ ಆಯಿತು. ದೇವರು ಹಗಲನ್ನಾಳುವುದಕ್ಕೆ ದೊಡ್ಡ ಬೆಳಕನ್ನೂ, ಇರಳನ್ನಾಳುವುದಕ್ಕೆ ಚಿಕ್ಕ ಬೆಳಕನ್ನೂ, ಈ ಎರಡು ದೊಡ್ಡ ಬೆಳಕುಗಳನ್ನು ಉಂಟು ಮಾಡಿದನು. ಆತನು ನಕ್ಷತ್ರಗಳನ್ನು ಸಹ ಉಂಟು ಮಾಡಿದನು. ದೇವರು ಆ ಬೆಳಕುಗಳನ್ನು ಆಕಾಶದಲ್ಲಿಟ್ಟು ಭೂಮಿಯ ಮೇಲೆ ಬೆಳಕು ಕೊಡುವುದಕ್ಕೂ ಹಗಲಿರುಳುಗಳನ್ನು ಆಳುವುದಕ್ಕೂ ಬೆಳಕನ್ನು ಕತ್ತಲೆಯನ್ನು ಬೇರೆ ಬೇರೆ ಮಾಡುವುದಕ್ಕೂ ಅವುಗಳನ್ನು ನೇಮಿಸಿದನು " (ಆದಿ. 1 : 14 – 18)**

ಯುಗಾರಂಭ ಒಂದು ದಿನದ ಸಾಧನೆಗಳು ಮತ್ತೊಂದಕ್ಕೆ ಮುಂದುವರಿದುಕೊಂಡು ಹೋಗುತ್ತಿರುವಾಗ, ಮೊದಲ ದಿನದಲ್ಲಿ ತೋರಿಬಂದ ಬೆಳಕು ಮುಂದಿನ ಎರಡು ದಿನಗಳಲ್ಲಿ ಇನ್ನೂ ಸ್ಪಷ್ಟವಾಗಿ ತೋರಿಬಂತು ಎಂದು ನಾವು ಊಹಿಸುವುದು ನ್ಯಾಯಸಮ್ಮತವಾಗಿದೆ. ಯಾಕೆಂದರೆ, ಸುತ್ತುಂಗುರದ ನಂತರ ಸುತ್ತುಂಗುರುವು ಅಂತರಿಕ್ಷದ ಮೇಲಿರುವ ನೀರಿನಿಂದ ಕೆಳಗಿನ ನೀರಿನೆಡೆಗೆ ಇಳಿದು ಬಂತು – ನಾಲ್ಕನೆಯ ದಿನದವರೆಗೆ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ನೋಹನ ಕಾಲದ ಪ್ರಳಯದ ನಂತರದ ದಿನಗಳಂತೆ ಸ್ಪಷ್ಟವಾಗಿ ತೋರಿಬರಲಿಲ್ಲ – ಹಾಗಿದ್ದರೂ, "ಸುತ್ತುಂಗುರ"ಗಳಲ್ಲಿ ಕಡೆಯದನ್ನು ಈಗ ಇಬ್ಬನಿ ತುಂಬಿದ ಹಗಲು ಮತ್ತು ರಾತ್ರಿಗಳಲ್ಲಿರುವಂತೆ ನೀರಿನ ಪಾರದರ್ಶಕ ತೆರೆಯಮೂಲಕ ಸ್ಪಷ್ಟವಾಗಿ ಗ್ರಹಿಸಬಹುದಾಗಿದೆ. ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಭೂಮಿಯ ಹೊರ ತೆರೆಯಲ್ಲಿ ಪ್ರಕಾಶಿಸುತ್ತಿದ್ದವು. ಈಗ ಈ ಬೆಳಕು ಅಂತರಿಕ್ಷದಲ್ಲಿ ಕಂಡುಬರುವ ಕಾಲ ಬಂದಿದೆ. ಮೋಡ ಕವಿದ ದಿನಗಳಲ್ಲಿ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಮರೆಯಾಗಿರುವಂತೆ, ಈ ಮೊದಲು ಮಂದವಾದ, ಬೂದು ಬಣ್ಣದ ಬೆಳಕು ಈಗ ಸ್ಪಷ್ಟವಾಗಿದ್ದು ದಿನದ ವಲಯವು ಮಾನವ ಮತ್ತು ಪಶುಗಳು ಸೃಷ್ಟಿಸಲ್ಪಟ್ಟಾಗ ಅವುಗಳಿಗೆ ತನ್ನ ಚಲನೆಯ ಮೂಲಕ ಸಮಯವನ್ನು ಸೂಚಿಸುವುದಾಗಿದೆ. ಈ ಮಧ್ಯೆ, ಗಾಳಿಯನ್ನು ಆಮ್ಲಜನಕಗೊಳಿಸಲು ಪ್ರಾರಂಭಿಸಿದ್ದು ಮುಂಬರುವ ಉಸಿರಾಡುವ ಪ್ರಾಣಿಗಳಿಗಾಗಿ ಸಿದ್ಧತೆ ನಡಿಸಿದೆ. ನಂತರ ಅದೇ 7000 ವರ್ಷಗಳ ದಿನದಲ್ಲಿ, ಚಂದ್ರ ಮತ್ತು ನಕ್ಷತ್ರಗಳೂ ಸಹ ಕಾಣಿಸಿಕೊಂಡವು – ಇವು ಅಲೆಗಳ ಮೇಲೆ ಪ್ರಭಾವ ಬೀರುವುದಾಗಿದ್ದು, ರಾತ್ರಿಯ ವೇಳೆ ಸಮಯವನ್ನು ಗುರುತಿಸಲು ಮಾನವನಿಗೆ ಪ್ರಯೋಜನಕಾರಿಯಾಯಿತು.

ಸಸ್ಯಗಳ ಬೆಳವಣಿಗೆಯು ನಾಲ್ಕನೆಯ ದಿನದಲ್ಲಿ ನಿಂತು ಹೋಯಿತೆಂದು ನಾವು ಭಾವಿಸಕೂಡದು. ಬದಲಾಗಿ ಅದು ಪ್ರಗತಿಗೊಂಡಿತು – ಸೂರ್ಯ ಚಂದ್ರರ ಹೆಚ್ಚಿದ ಪ್ರಭಾವವು, ವಿವಿಧ ರೀತಿಯ ಹುಲ್ಲು, ಕುರುಚಲು ಗಿಡಗಳು ಮತ್ತು ಮರಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆಯುವಂತೆ ಮಾಡಿತು. ಭೂವಿಜ್ಞಾನವು ಇನ್ನೂ ಹೆಚ್ಚಿನ ಮುನ್ನಡೆಯನ್ನು ತೋರಿಸುತ್ತದೆ – ಈ ಅವಧಿಯಲ್ಲಿ ಕ್ರಿಮಿಕೀಟಗಳು, ಬಸವನ ಹುಳು, ಏಡಿ ಮುಂತಾದವುಗಳು ಉಂಟಾದವು. ಮೀನಿನ ಮುಳ್ಳು ಮತ್ತು ಪರೆಗಳು ಕಲ್ಲಿದ್ದಲಿನ ಸಂದುಗಳಲ್ಲಿ ಕಂಡುಬಂದಿವೆ ; ಆದರೆ ಇದು ಕ್ರಮವನ್ನು ಭಂಗಪಡಿಸುವುದಿಲ್ಲ. ಕಲ್ಲಿದ್ದಲಿನ ಹಾಸುಗಳ

ರಚನೆಯು ಮೂರನೆಯ ದಿನದ ನಂತರ ಸ್ಪಷ್ಟವಾಗಿ ಮುಂದುವರೆದು ಹರಿದಾಡುವ ಜಂತುಗಳ ಉದ್ಭವಕ್ಕೆ ಎಡೆ ಮಾಡಿಕೊಟ್ಟಿತು. ಈ ದಿನವು ಭೂವಿಜ್ಞಾನಿಗಳು ಹೇಳುವ "Trias period' ಗೆ ಅನುಗುಣವಾಗಿದೆ. ಸಾಯಂಕಾಲವೂ, ಪ್ರಾತಃಕಾಲವೂ ಆಗಿ ಏಳು ಸಾವಿರ ವರ್ಷಗಳು, ಅಥವಾ ಪ್ರಾರಂಭದ ದಿನದಿಂದ ಒಟ್ಟು 28,000 ವರ್ಷಗಳು ಮುಗಿಯಿತು – ಈ ಅವಧಿಯಲ್ಲಿ ಮಾನವನ ಸೃಷ್ಟಿಗೆ ಹೆಚ್ಚಿನ ಸಿದ್ಧತೆಗಳು ತೋರಿಬಂದವು.

## ಯುಗಾರಂಭದಲ್ಲಿ ಸೃಷ್ಟಿಯ ಐದನೆಯ ದಿನ
## The Fifth Creative Epoch-Day

**"ತರುವಾಯ ದೇವರು ಗುಂಪು ಗುಂಪಾಗಿ ಚಲಿಸುವ ಜಲಜಂತುಗಳು ನೀರಿನಲ್ಲಿ ತುಂಬಿಕೊಳ್ಳಲಿ; ಪಕ್ಷಿಗಳು ಭೂಮಿಯ ಮೇಲೆ ಅಂತರಿಕ್ಷದೊಳಗೆ ಹಾರಾಡಲಿ ಎಂದು ಹೇಳಿದನು. ಹೀಗೆ ದೇವರು ಮಹಾಜಲಚರಗಳನ್ನೂ, ನೀರಿನಲ್ಲಿ ತುಂಬಿರುವ ಸಕಲವಿಧವಾದ ಜೀವಿಗಳನ್ನೂ ರೆಕ್ಕೆಗಳುಳ್ಳ ಸಕಲ ವಿಧವಾದ ಪಕ್ಷಿಗಳನ್ನೂ ಅವುಗಳ ಜಾತಿಗನುಸಾರವಾಗಿ ಉಂಟುಮಾಡಿದನು ಆತನು ಅದನ್ನು ಒಳ್ಳೆದೆಂದು ನೋಡಿದನು" (ಆದಿ. 1: 20 – 21)**

ಲೋಳೆಮೀನಿನಿಂದ (Jelly fish) ತಿಮಿಂಗಿಲದ (Whale) ವರೆಗೆ ಮಹಾಸಾಗರದ ಬೆಚ್ಚನೆಯ ನೀರಿನಲ್ಲಿ ಹೇಗೆ ತುಂಬಿಕೊಂಡವು ಎಂಬುದನ್ನು ದಕ್ಷಿಣದಲ್ಲಿರುವ ಇಂದಿನ ಬೆಚ್ಚನೆಯ ಸಮುದ್ರದಲ್ಲಿರುವ ಜೀವಿಗಳ ಸಮೃದ್ಧಿಯಿಂದ ನಿರ್ಣಯಿಸಬಹುದು. ಭಾಗಶಃ ನೀರಿನಲ್ಲಿಯೂ, ಭಾಗಶಃ ಭೂಮಿಯ ಮೇಲೂ ಜೀವಿಸುವ ಹರಿದಾಡುವ ಪ್ರಾಣಿಗಳು (Amphibious) ಸಹಾ ಇದೇ ಅವಧಿಗೆ ಸೇರಿದ್ದು ಈ ಅವಧಿಯಲ್ಲಿ ಇಂದಿನ ಖಂಡಗಳು ಮತ್ತು ದ್ವೀಪಗಳು ಕ್ರಮೇಣವಾಗಿ ಹಿಗ್ಗಿ ಪುನಃ ಕುಗ್ಗುತ್ತಿದ್ದವು. ಒಂದು ಸಮಯದಲ್ಲಿ ಕೆಳಗೆ ಬರುವ ಸಣ್ಣ ಅಥವಾ ದೊಡ್ಡ ಸುತ್ತುಂಗುರಗಳಿಂದ ಮುಳುಗಿಸಲ್ಪಡುತ್ತಿತ್ತು. ಕೆಲವೊಂದು ಅಲೆಯಿಂದ ತೊಳೆಯಲ್ಪಡುತ್ತಿದ್ದವು. ಚಿಪ್ಪು ಮೀನಿನ ಉಳಿಕೆಗಳು ಎತ್ತರದ ಬೆಟ್ಟಗಳ ಮೇಲೆ ಕಂಡು ಬಂದಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ಅದೇ ರೀತಿ, ಪ್ರಪಂಚದ ಎಲ್ಲೆಡೆ ದೊರೆಯುವ ಸುಣ್ಣಕಲ್ಲಿನ ವಿಪುಲವಾದ ಹಾಸುಗಳನ್ನು ಕೆಲವೊಮ್ಮೆ "ಚಿಪ್ಪು ಮೀನುಗಳ ಸಮಾಧಿಗಳು" ಎಂದು ಕರೆದರೂ ಆಶ್ಚರ್ಯಪಡಬೇಕಾಗಿಲ್ಲ. ಯಾಕೆಂದರೆ, ಇವುಗಳು ಹೆಂಟೆಗಟ್ಟಿದ ಚಿಪ್ಪುಗಳನ್ನು ಒಳಗೊಂಡಿವೆ. ಈ ಹೇಳಲಾಗದ ಕೋಟಿಗಟ್ಟಲೆ ಚಿಕ್ಕಪುಟ್ಟ ಜೀವಿಗಳು ಜನಿಸಿ, ಸಾಯುವಾಗ ತಮ್ಮ ಚಿಪ್ಪನ್ನು ಒಂದೊಂದಾಗಿ ಉದುರಿಸಿದಾಗ ಯಾವ ರೀತಿಯ ಜಂಗುಳಿ ಇದ್ದಿರಬೇಕು! "ನೀವು ಅಭಿವೃದ್ಧಿಯಾಗಿ ಹೆಚ್ಚಿರಿ" ಎಂದು ದೇವರು ಅವನ್ನು ಆಶೀರ್ವದಿಸಿದನು ಎಂಬುದಾಗಿ ನಾವು ದೇವರ ವಾಕ್ಯದಲ್ಲಿ ಓದುತ್ತೇವೆ. ಹೌದು, ಅಲ್ಪಕಾಲದ ಬದುಕು ಮತ್ತು ಇರುವಿಕೆಯು ಸಹಾ ಒಂದು ರೀತಿಯ ಅನುಗ್ರಹ ಮತ್ತು ಆಶೀರ್ವಾದವೇ ಸರಿ.

ದೇವರ ವಾಕ್ಯವು ಹೇಳುವುದಕ್ಕಿಂತ ಹೆಚ್ಚಾಗಿ ನಾವು ವಾದಿಸುವುದು ಬೇಡ. ಸತ್ಯವೇದವು ದೇವರ ಅಸಂಖ್ಯಾತ ವಿಧವಾದ ಮೀನು ಮತ್ತು ಹರಿದಾಡುವ ಪ್ರಾಣಿಗಳನ್ನು ಪ್ರತ್ಯೇಕವಾಗಿ ಮತ್ತು ಒಂದೊಂದಾಗಿ ಸೃಷ್ಟಿಸಿದನೆಂದು ದೃಢಪಡಿಸುವುದಿಲ್ಲ. ಆದರೆ, ದೇವರ ಪ್ರಭಾವವು ಅಥವಾ ಆತ್ಮನ ಶಕ್ತಿ ಹಾಗೂ ದೇವರ ಉದ್ದೇಶದಂತೆ ಸಮುದ್ರವು ವಿವಿಧ ರೀತಿಯ ಜೀವಿಗಳನ್ನುಂಟುಮಾಡಿತು. ಕಾರ್ಯವಿಧಾನವು ಘೋಷಿತವಾಗಿಲ್ಲ – ಒಂದು ವರ್ಗವು ಬದಲಾದ ಪರಿಸ್ಥಿತಿಯಲ್ಲಿ ಮತ್ತೊಂದಾಗಿ ವಿಕಸಿತಗೊಂಡಿದ್ದಿರಬಹುದು; ಅಥವಾ ಅದೇ ಮೂಲ ಜೀವದ್ರವ್ಯ (protoplasm) ದಿಂದ ಬದಲಾದ ವಿವಿಧ ಪರಿಸ್ಥಿಗತಿಗಳಿಗನುಸಾರವಾಗಿ ವಿವಿಧರೀತಿಯ ಜೀವಿಗಳು ಉದ್ಭವಿಸಿದ್ದಿರಬಹುದು. ಯಾವ ಮನುಷ್ಯನಿಗೂ ಈ ಬಗ್ಗೆ ಗೊತ್ತಿಲ್ಲವಾದ್ದರಿಂದ ಇಲ್ಲಿ ಸ್ವ–ಅಭಿಮತವು ಅವಿವೇಕತನ. ಪುರಾತನ ಜೇಡಿಮಣ್ಣಿನಲ್ಲಿ ಕಂಡುಬಂದ ಈ ಜೀವದ್ರವ್ಯವು ಆ ಸಮುದ್ರಗಳಲ್ಲಿರುವ ಉತ್ಕೃಷ್ಟವಾದ ಖನಿಜಭರಿತ ನೀರಿನ ರಾಸಾಯನಿಕ ಕ್ರಿಯೆಯಿಂದ ಉಂಟಾದುದಲ್ಲ ಎಂದು ನಾವು ವಾದಿಸಬೇಕಾಗಿಲ್ಲ. ಅವುಗಳು ಎಂತೇ ಇರಲಿ ಎಲ್ಲವೂ ಕೂಡಾ ದೇವರ ಉದ್ದೇಶ ಹಾಗೂ ಸಿದ್ಧತೆಗಳ ಫಲವಾಗಿದೆಯೆಂದು ನಾವು ಹೇಳಬೇಕಾಗುತ್ತದೆ. ಇವುಗಳು ಆದಿಕಾಂಡದ ವಾಕ್ಯಗಳಿಗೆ ಕಡಿಮೆಯಿಲ್ಲದ ಪ್ರಕೃತಿಯ ನಿಜಸ್ಥಿತಿಗಳಲ್ಲಿಯೂ ಕಂಡು ಬರುತ್ತದೆ ಎಂಬುದಾಗಿಯೂ ನಾವು ಹೇಳಬೇಕು – ಏನೇ ಆದರೂ, ಸಮುದ್ರಜೀವಿಗಳು ಸೃಷ್ಟಿಗೊಂಡಾಗ, ಅವುಗಳಲ್ಲಿ ಪ್ರತಿಯೊಂದೂ ಅದೇ ಜಾತಿಯದಾಗುವ ಪರಿಸ್ಥಿತಿಗೆ ಅದನ್ನು ತರಲಾಗಿತ್ತು – ವರ್ಗದ ಪರಂಪರೆಯನ್ನು ತಳ್ಳಿಹಾಕಲಾಗದು. ಇದು ಯಾವ ರೀತಿಯಲ್ಲಿ ಜಾರಿಗೆ ಬಂದರೂ ಇದು ದೇವರ ಕೆಲಸ. ಈ ಯುಗಾರಂಭದ ದಿನವು ವಿಜ್ಞಾನಿಗಳ "ಹರಿದಾಡುವ ಪ್ರಾಣಿಗಳ ಕಾಲ"ಕ್ಕೆ ಅನುಗುಣವಾಗಿದೆ. ಸಾಯಂಕಾಲವೂ, ಪ್ರಾತಃಕಾಲವೂ ಆಗಿ ಮಾನವನ ಮನೆ ಮತ್ತು ರಾಜ್ಯವಾದ ಈ ಲೋಕದ ಕ್ರಮಪಡಿಸುವಿಕೆ ಪ್ರಾರಂಭಗೊಂಡ ಆರಂಭದಿಂದ ಈ ವರೆಗೆ 35000 ವರ್ಷಗಳು ಕಳೆದು ಹೋದವು.

## ಯುಗಾರಂಭದಲ್ಲಿ ಸೃಷ್ಟಿಯ ಆರನೆಯ ದಿನ
## The Sixth Creative Epoch-Day

**"ಮತ್ತು ದೇವರು– ಭೂಮಿಯಿಂದ ಜೀವಜಂತುಗಳು ಉಂಟಾಗಲಿ; ಪಶುಕ್ರಿಮಿಗಳೂ, ಕಾಡುಮೃಗಗಳೂ ತಮ್ಮ ತಮ್ಮ ಜಾತಿಗನುಸಾರವಾಗಿ ಹುಟ್ಟಲಿ ಅಂದನು. ಹಾಗೆಯೇ ಆಯಿತು. ದೇವರು ಕಾಡು ಮೃಗಗಳನ್ನೂ ಪಶುಗಳನ್ನೂ ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳನ್ನೂ ಅವುಗಳ ಜಾತಿಗನುಸಾರ ಉಂಟು ಮಾಡಿದನು. ಆತನು ಅದನ್ನು ಒಳ್ಳೇದೆಂದು ನೋಡಿದನು" (ಆದಿ. : 1 : 24 – 25)**

ಈ ಸಮಯಕ್ಕೆ ಭೂಮಿಯ ಮೇಲಿನ ಭೌತವಸ್ತುಗಳು ಸ್ಥಿರಗೊಳ್ಳುತ್ತಾ ಬಂದಿತ್ತು : ಭೂಮಿಯ ಮೇಲಿನ ಗಟ್ಟಿಯಾದ ಪದರು ನೂರಾರು ಅಡಿಗಳ ಮರಳು, ಜೇಡಿಮಣ್ಣು, ಚಿಪ್ಪುಗಳು, ಕಲ್ಲಿದ್ದಲು ಮತ್ತು ಒಟ್ಟಾದ ಇನ್ನೂ ಅನೇಕ ಖನಿಜಗಳಿಂದ ದಪ್ಪವಾಗಿ ಹೋಗಿತ್ತು – ಕೆಲವು ಭೂಕಂಪಗಳಿಂದ ಎಸೆಯಲ್ಪಟ್ಟು ಪುಡಿ ಪುಡಿಯಾದ ಬಂಡೆಗಳಿಂದ, ಕೆಲವೊಮ್ಮೆ ಈ ಭೂಮಿಯನ್ನು ಆವರಿಸಿಕೊಂಡಿದ್ದ ಸುತ್ತುಂಗುರಗಳಿಂದ, ಮತ್ತೆ ಕೆಲವು ಪ್ರಾಣಿ ಮತ್ತು ಸಸ್ಯಗಳ ಶೇಖರಣೆಯಿಂದ; ಇವುಗಳಲ್ಲದೆ,

ಈ ಭೂಮಿಯು ಸಹಾ ಕಳೆದ 35,000 ವರ್ಷಗಳಲ್ಲಿ ಗಣನೀಯವಾಗಿ ತಂಪುಗೊಂಡಿದ್ದಿರಬೇಕು. ಭೂಮಿಯ ಮೇಲ್ಮಟ್ಟವು ತಕ್ಕಷ್ಟು ಮಟ್ಟಿಗೆ ಸಮುದ್ರಕ್ಕಿಂತ ಎತ್ತರದಲ್ಲಿದ್ದು ಪರ್ವತ ಶ್ರೇಣಿಗಳಿಂದ, ಕಣಿವೆಗಳಿಂದ ಸುತ್ತುವರೆದಿದ್ದು ಚಿಕ್ಕ ಪ್ರಾಣಿಗಳಿಗೆ ಸಿದ್ಧವಾಗಿದೆ. ಇವುಗಳು ಇಲ್ಲಿ ಮೂರು ವಿಧವಾಗಿ ವಿಭಜನೆಗೊಂಡಿವೆ. (1) ಭೂಮಿಯ ಮೇಲೆ ಹರಿದಾಡುವ ಜಂತುಗಳು, ಹಾವುಗಳು ತಣ್ಣನೆಯ ರಕ್ತದ, ಉಸಿರಾಡುವ ಪ್ರಾಣಿಗಳಾದ ಹಲ್ಲಿ (Lizards) ಮುಂತಾದವುಗಳು (2) ನೆಲದ ಮೇಲಿನ ಪಶುಗಳು, ಕ್ರೂರ ಪ್ರಾಣಿಗಳು (ಸಾಕು ಪ್ರಾಣಿಗಳನ್ನು ಹೊರತುಪಡಿಸಿ) (3) ಮಾನವರಿಗೆ ಜೊತೆಗಾರವಾಗಿರುವ ಈ ಸಾಕು ಪ್ರಾಣಿಗಳನ್ನು ಇಲ್ಲಿ "ಜಾನುವಾರು'ಗಳೆಂದು ಕರೆಯಲಾಗಿದೆ. ಸೇವಿಸಲು ಅಯೋಗ್ಯವಾದ ಗಾಳಿಯು ಸಹಾ ಆ ಸಮಯದಲ್ಲಿ Carboniferous ಅವಧಿಗೆ ಸೇರಿದ ಮೇಲ್ತರಗತಿಯ ಸಸ್ಯಗಳಿಂದ ಹೀರಲ್ಪಟ್ಟು ಶುದ್ಧೀಕರಿಸಲ್ಪಟ್ಟಿತ್ತು. ಹೆಚ್ಚಿನ ಹೈಡ್ರೋ-ಕಾರ್ಬನ್‌ಗಳು ಸಾಗರದಲ್ಲಿ ಸೇರಿ ಅತಿ ಸೂಕ್ಷ್ಮ ಚಿಪ್ಪುಮೀನುಗಳಿಂದ ಹೀರಲ್ಪಟ್ಟು ಅಸಂಖ್ಯಾತ ಸಮುದ್ರ ಜೀವಿಗಳಿಗೆ ಉಸಿರಾಡಲು ಅನುಕೂಲವಾಗಿತ್ತು.

ಇಲ್ಲಿಯೂ ಸಹಾ ನಾವು ಅನಾವಶ್ಯಕವಾಗಿ ವಿಕಾಸವಾದಿಗಳೊಂದಿಗೆ ಕಲಹ ಮಾಡಬೇಕಾಗಿಲ್ಲ. ದೇವರು ಬಯಸಿದ್ದರೆ ಆತನು ಎಲ್ಲಾ ವಿಧವಾದ ಜೀವಿಗಳು ಒಂದರಿಂದ ಮತ್ತೊಂದು ರೂಪಾಂತರಗೊಂಡು ಬೆಳೆದು ಬರುವಂತೆ ಮಾಡಬಹುದಿತ್ತು ಅಥವಾ ಆತನು ಪ್ರತಿಯೊಂದು ಜೀವಿಗಳನ್ನೂ ಮೂಲ ಜೀವದ್ರವ್ಯವುಳ್ಳ ಜೇಡಿಮಣ್ಣಿನಿಂದಲೇ ಪ್ರತ್ಯೇಕವಾಗಿ ಸೃಷ್ಟಿಸಬಹುದಿತ್ತೆಂದು ಒಪ್ಪಿಕೊಳ್ಳೋಣ. ಆತನು ಯಾವ ಪದ್ಧತಿಯನ್ನು ಅನುಸರಿಸಿರಬಹುದೆಂಬುದು ನಮಗೆ ಅರಿಯದು. ಯಾಕೆಂದರೆ, ಇವುಗಳು ಸತ್ಯವೇದ ದಲ್ಲಿಯಾಗಲೀ, ಶಿಲೆಗಳಲ್ಲಿಯಾಗಲೀ ನಮಗೆ ದೊರೆಯುವುದಿಲ್ಲ. ಹೀಗಿರುವಾಗ ದೇವರು ಇದನ್ನು ಮಾಡಿ ಪೂರೈಸಲು ಯಾವುದೇ ಪದ್ಧತಿಯನ್ನಾಗಲಿ ಅನುಸರಿಸಿರಲಿ ಆತನು ಪ್ರತಿಯೊಂದು ಪ್ರಾಣಿ ಜೀವಿಯನ್ನು ಒಂದೊಂದು ಬಗೆಯನ್ನಾಗಿ ಸ್ಥಿರಗೊಳಿಸಿದ್ದು ಅವುಗಳು ಬದಲಾಗದ ರೀತಿಯಲ್ಲಿ ಉಂಟು ಮಾಡಿದ್ದಾನೆ; ಮಾನವನ ಚಾತುರತೆಯು ಸಹಾ ಇದನ್ನು ಬದಲಿಸುವಂತೆ ಸಹಾಯ ಮಾಡುವುದರಲ್ಲಿ ವಿಫಲವಾಗಿದೆ. ಇಲ್ಲಿ ಸೃಷ್ಟಿಕರ್ತನ ಕೈಕೆಲಸದ ಮೇಲೆ ಬುದ್ಧಿವಂತಿಕೆಯ ಮುದ್ರೆ ಬಿದ್ದಿದೆ. ಒಂದು ವೇಳೆ ಪ್ರಕೃತಿಯಾಗಲೀ ಅಥವಾ ಯಾವುದೇ ಅಂಧಶಕ್ತಿಯಾಗಲೀ ಇವನ್ನು ಸೃಷ್ಟಿಸುತ್ತಿದ್ದರೂ ಇದು ಕೆಲವೊಂದು ಸಮಯ ವಿಕಾಸಗೊಂಡು, ಮತ್ತೆ ಕೆಲವೊಮ್ಮೆ ಹಿಂಚಲನೆಯಿಂದ ಅವಿರತವಾಗಿ ಸಾಗುತ್ತಿರುವುದನ್ನು ನೋಡುತ್ತಿದ್ದೆವು. ನಾವು ಪ್ರಕೃತಿಯಲ್ಲಿ ಈ ಬಗ್ಗೆ ಗಮನಿಸಿದಲ್ಲಿ ಅಂತಹ ಸ್ಥಿರತೆ ನಮಗೆ ಕಾಣಸಿಗದು.

ದೇವರು ಮನುಷ್ಯನನ್ನು ಆರನೆಯ ಆರಂಭ ದಿನದ ಅಂತ್ಯ ಸಮಯದ ವೇಳೆ ಉಂಟು ಮಾಡಿದನೆಂದು ನಾವು ವಿವೇಚನಾಪೂರ್ವಕವಾಗಿ ಗ್ರಹಿಸಬಹುದು. ಯಾಕೆಂದರೆ, ಈ ಸೃಷ್ಟಿಯು ಅಂತಿಮವಾದುದಾಗಿದೆ. ದೇವರು ತನ್ನ ಸೃಷ್ಟಿ ಕಾರ್ಯವನ್ನು ಆರನೆಯ ದಿನವಲ್ಲ, ಏಳನೆಯ ದಿನ ಮುಗಿಸಿದನೆಂದು ಸ್ಪಷ್ಟವಾಗಿ ಹೇಳಲಾಗಿದೆ. ಮಾನವನನ್ನು ಎರಡು ಲಿಂಗಗಳನ್ನಾಗಿ ವಿಭಜಿಸಿದ್ದೇ ಆತನ ಕಡೆಯ ಕಾರ್ಯವಾಗಿದ್ದಿರಬೇಕು. "ಆ ಮೇಲೆ ದೇವರು - ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ, ಪಶುಗಳ ಮೇಲೆಯೂ, ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ದೊರೆತನ ಮಾಡಲಿ ಅಂದನು ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು; ದೇವಸ್ವರೂಪದಲ್ಲಿ ಆತನನ್ನು ಉಂಟುಮಾಡಿದನು. ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು. ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿ - ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ, ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ ಅಂದನು" (ಆದಿ. 1 : 26-28)

ಗಿಡಗಳು, ನೀರಿನಲ್ಲಿ ಮತ್ತು ಭೂಮಿಯ ಮೇಲೆ ಜೀವಿಸುವ ಪ್ರಾಣಿಗಳು ಹೆಚ್ಚು ಕಡಿಮೆ ಅದರ ವಿವಿಧ ಜಾತಿಗಳಲ್ಲಿ ವಿಕಾಸಗೊಂಡವು ಅಥವಾ ವರ್ಧಿಸಿದವು ಎಂಬುದನ್ನು ದೇವರ ವಾಕ್ಯದ ಭಾಷಾ ಶೈಲಿಯು ಅಲ್ಲಗಳೆಯುವುದಿಲ್ಲ ಎಂದು ಮೇಲೆ ಹೇಳಿದ ನಮ್ಮ ಅಭಿಪ್ರಾಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಮಾನವ ಸೃಷ್ಟಿಯ ಬಗ್ಗೆ ಇರುವ ವಿಶಾಲವಾದ ವ್ಯತ್ಯಾಸವನ್ನು ಗುರುತಿಸುವುದು ನಮಗೆ ಒಳ್ಳೆಯದು. ಎರಡನೆಯದು ದೇವರ ಸೃಷ್ಟಿ ಶಕ್ತಿಯ ನೇರವಾದ ಚಲಾವಣೆಯ ವಿಶಿಷ್ಟ ಪ್ರಕಟನೆಯಾಗಿದೆ, ಅದರೆ ಬೇರೆಯವುಗಳು ಹಾಗಲ್ಲ. ನಿಜವಾಗಿ ಹೇಳುವುದಾದರೆ, ಅವುಗಳು ಪ್ರಗತಿಯನ್ನು ಸೂಚಿಸುತ್ತವೆ "ಭೂಮಿಯಲ್ಲಿ ಹುಲ್ಲು ಬೆಳೆಯಿತು" (ವಚನ 12) "ಚಲಿಸುವ ಜಲಜಂತುಗಳು ನೀರಿನಲ್ಲಿ ತುಂಬಿಕೊಳ್ಳಲಿ" (ವಚನ 20) "ಭೂಮಿಯಿಂದ ಜೀವಜಂತುಗಳು ಉಂಟಾಗಲಿ; ಪಶು ಕ್ರಿಮಿಗಳೂ, ಕಾಡು ಮೃಗಗಳೂ ತಮ್ಮ ತಮ್ಮ ಜಾತಿಗನುಸಾರವಾಗಿ ಹುಟ್ಟಲಿ" (ವಚನ 24).

ಸೃಷ್ಟಿಕಾರ್ಯದ ಬಗ್ಗೆ ಎರಡು ವಿವರಣೆಗಳಿವೆ - ಮೊದಲನೆಯದು ನಾವು ಇದುವರೆಗೆ ವಿಚಾರಮಾಡಿದ್ದು. ಇದು ವಿಷಯವನ್ನು ಸಂಕ್ಷಿಪ್ತವಾಗಿ ಮತ್ತು ಯುಗಾರಂಭದ ಕ್ರಮದಲ್ಲಿ ತಿಳಿಸುತ್ತದೆ. ಇದನ್ನು ಮುಂದುವರಿಸಿಕೊಂಡು ಹೋಗುವ ಮತ್ತೊಂದು ವಿವರಣೆಯನ್ನು ನಾವು ಆದಿಕಾಂಡ 2: 4-25 ರಲ್ಲಿ ನೋಡಬಹುದು. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ಈ ಅಧ್ಯಾಯಗಳ ವಿಭಜನೆಯಲ್ಲಿ ತಪ್ಪಾಗಿದೆ-ಎರಡು ವಿವರಣೆಗಳೂ ಒಂದೇ ಅಧ್ಯಾಯದಲ್ಲಿ ಇರಬೇಕಾಗಿತ್ತು. ಎರಡನೆಯದು, ಮೊದಲನೆಯದರ ವಿವರವಾದ ವ್ಯಾಖ್ಯಾನದಂತಿದೆ. "ಇದು ಭೂಮ್ಯಾಕಾಶಗಳ ನಿರ್ಮಾಣ ಚರಿತ್ರೆ". ಕರ್ತನಾದ ದೇವರು ಭೂವ್ಯಾಕಾಶಗಳನ್ನು ಉಂಟುಮಾಡಿದಾಗ ಯಾವ ಗಿಡವಾದರೂ ಭೂಮಿಯಲ್ಲಿ ಇರಲಿಲ್ಲ. ಮೊದಲನೆಯ ಹಾಗೂ ಪ್ರಾಮುಖ್ಯವಾದ ವಿವರಣೆಯಲ್ಲಿ ಸೃಷ್ಟಿಕರ್ತನ ಬಗ್ಗೆ ಹೇಳುವಾಗ

**“ದೇವರು”** ಎಂದು ಹೇಳುತ್ತದೆ. ಎರಡನೆಯ ಅಥವಾ ವ್ಯಾಖ್ಯಾನದಲ್ಲಿ **“ಯೆಹೋವ ದೇವರು”** ಈ ಎಲ್ಲಾ ಕಾರ್ಯಗಳನ್ನು ನೆರವೇರಿಸಿದನೆಂದು ಹೇಳುತ್ತದೆ. – ದೇವರು ಭೂವ್ಯಾಕಾಶಗಳನ್ನು ಉಂಟುಮಾಡಿದ **“ದಿನದಲ್ಲಿ”** ಎನ್ನುವಾಗ, ಹಿಂದೆ ಆರು ದಿನಗಳೆಂದು ಹೇಳಿದ್ದನ್ನು ಇಲ್ಲಿ "ವಿಶಾಲವಾದ ಒಂದೇ ದಿನ" ಎಂದು ಗ್ರಹಿಸಬಹುದು.

"ದೇವರು' ಎಂದು ಮೊದಲನೆಯ ಅಧ್ಯಾಯದಲ್ಲಿ ಹೇಳಿದ್ದು ಇಬ್ರಿಯ ಸಾಮಾನ್ಯ ಪದವಾದ "ಎಲೋಹಿಮ್" ನಿಂದ ಬಂದದ್ದು. ಇದರ ಬಹುವಚನವನ್ನು "ದೇವರುಗಳು" ಎಂದು ಭಾಷಾಂತರಿಸಬಹುದು. ಇದು ನಾವೀಗಾಗಲೇ ಕಂಡು ಕೊಂಡಂತೆ "ಪರಾಕ್ರಮಿಗಳು" ಎಂಬುದನ್ನು ಸೂಚಿಸುತ್ತದೆ. ದೇವರಿಂದ ಹುಟ್ಟಿದ ಆ "ಏಕೈಕನು" (Only begotton) ಖಂಡಿತವಾಗಿಯೂ ಈ ಸೃಷ್ಟಿಕಾರ್ಯದಲ್ಲಿ ಆತನ ಕಾರ್ಯಕರ್ತನಾಗಿದ್ದಾನೆ. ಆತನು ಇದರ ವಿವರಣೆಗಳನ್ನು ನಿರ್ವಹಿಸಲು ಇವನೊಂದಿಗೆ ಭಾಗೀದಾರನಾಗಿದ್ದಿರಬಹುದು. ದೇವರ ವಾಕ್ಯದ ಬೇರೆಡೆಗಳಲ್ಲಿರುವಂತೆ ದೇವದೂತರ ದೊಡ್ಡ ಗುಂಪಿಗೂ "ಎಲೋಹಿಂ' ಎಂಬ ಪದ ಅನ್ವಯವಾಗುತ್ತದೆ. ಆದುದರಿಂದ, ಎರಡನೆಯ ಅಥವಾ ವ್ಯಾಖ್ಯಾನದಲ್ಲಿರುವ ವಿವರಣೆಯು ಆತನ ಗೌರವಾನ್ವಿತ ಪ್ರತಿನಿಧಿಯಾಗಿ, ಸಾಧನವಾಗಿ ಯಾರೇ ಉಪಯೊಗಿಸಲ್ಪಟ್ಟಿದ್ದರೂ ಎಲ್ಲರ ತಂದೆಯಾಗಿರುವ ಯೆಹೋವನು ಮಾತ್ರವೇ ಸೃಷ್ಟಿಕರ್ತ ಎಂಬ ಸತ್ಯವು ನಮ್ಮ ಗಮನವನ್ನು ಸೆಳೆಯಬೇಕು. ಮಾನವನ ಸೃಷ್ಟಿ ಸಮಯದಲ್ಲಿ ಸೇರಿಸಿರುವ ವಿವರಣೆಗಳನ್ನು ಬಹುಶಃ ಇಲ್ಲಿ ಗಣನೆಗೆ ತಂದುಕೊಳ್ಳಬೇಕಾಗುವುದು. ಅದು ಹೇಳುವುದೇನೆಂದರೆ, **“ಕರ್ತನಾದ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು ”** (ಆದಿ. 2 : 7)

ತನ್ನ ಹಿಂದಿನ ಎಲ್ಲಾ ಕಾರ್ಯಗಳಲ್ಲಿ, ಜೀವಿಗಳು ಎಷ್ಟೇ ಕ್ಷುಲ್ಲಕವಾದರೂ, ಅವುಗಳಲ್ಲಿ ಯಾವುದೂ ಆತನಿಗೆ ಸರಿಯಾದ ರೀತಿಯಲ್ಲಿ ಕೃತಜ್ಞತೆ ಸಲ್ಲಿಸದೇ ಹೋದರೂ, ಆತನನ್ನು ಮೆಚ್ಚದೇ ಹೋದರೂ, ಆತನನ್ನು ಅರಿಯದೇ ಹೋದರೂ ಸಹಾ ದೇವರು ಅವುಗಳಿಂದ ಮಹಿಮೆಪಟ್ಟನು. ದೇವರ ಉದ್ದೇಶಕ್ಕೆ ಇವುಗಳೆಲ್ಲವು ಮೊದಲೇ ವೇದ್ಯವಾಗಿತ್ತು. ಆದುದರಿಂದ, ಈ ಲೋಕದ ಎಲ್ಲಾ ಪ್ರಾಣಿ ಜೀವಿಗಳ ಸೃಷ್ಟಿಯಲ್ಲಿ ಅತ್ಯುತ್ತಮ ಕೃತಿಯೆಂದು ಸಂಕಲ್ಪಿಸಿದ ಮಾನವನಿಗಾಗಿ ಸಿದ್ಧತೆ ನಡೆದಿತ್ತು. **“ನೀರಿನಲ್ಲಿ ತುಂಬಿಕೊಳ್ಳಲಿ”** ಅಥವಾ **“ಭೂಮಿಯಿಂದ ಜೀವಜಂತುಗಳು ಉಂಟಾಗಲಿ”** ಎಂದಾಗಲಿ ಮಾನವನ ಸೃಷ್ಟಿಯಲ್ಲಿ ಹೇಳಲಿಲ್ಲ. ಆದರೆ, ಇದಕ್ಕೆ ಬದಲಾಗಿ, ಮಾನವನು ಆತನನ್ನು ಉಂಟು ಮಾಡಿದವನ ಒಂದು ವಿಶೇಷ ಸೃಷ್ಟಿಯೋ ಎಂಬಂತೆ **“ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು”** (ಆದಿ.1:27) ಎಂದು ದಾಖಲಿಸಲಾಗಿದೆ.ಇಲ್ಲಿ ಎಲೋಹಿಂನ ಸ್ವರೂಪವೆಂದಾಗಲೀ ಅಥವಾ ಯೆಹೋವನ ಸ್ವರೂಪವೆಂದಾಗಲಿ ಅರ್ಥ ಮಾಡಿಕೊಳ್ಳುವ ವಿಚಾರವಿಲ್ಲ. ಯೆಹೋವನ ಮಕ್ಕಳಾದ "ಎಲೋಹಿಂ'ಗಳು ತಮ್ಮಅಲೋಚನೆಯಲ್ಲಿಯೂ ಮತ್ತು ನೈತಿಕ ಬುದ್ಧಿವಂತಿಕೆಯಲ್ಲಿಯೂ ಆತನಂತೆ ಇರಲಿಲ್ಲವೋ?.

ನಾವು "ಸ್ವರೂಪ" ಎಂಬುದನ್ನು "ಶಾರೀರಕ ರೂಪ" ಎಂಬುದಾಗಿ ತಿಳಿಯಬಾರದು, ಆದರೆ ಇದು ಮಾನವನ ಲೌಕಿಕ ಪರಿಸ್ಥಿತಿ ಮತ್ತು ಸ್ವಭಾವಕ್ಕೆ ತಕ್ಕಂತೆ ರೂಪಿಸಿರುವ ಆ ಮಹೋನ್ನತ ಆತ್ಮನ ನೈತಿಕ ಮತ್ತು ಬೌದ್ಧಿಕ ಸ್ವರೂಪವಾಗಿದೆ. ಹೋಲಿಕೆ ಎನ್ನುವಾಗ ಸಂಶಯಾತೀತವಾಗಿ ಅದು ದೇವರು ಇಡೀ ವಿಶ್ವಕ್ಕೆ ಅರಸನಾಗಿರುವಂತೆ ಮನುಷ್ಯನು ಭೂಲೊಕದ ಮತ್ತು ಅದರಲ್ಲಿ ತುಂಬಿರುವ ಎಲ್ಲಾ ಜೀವಿಗಳಿಗೂ ಅರಸನಾಗಿದ್ದಾನೆ. ಇಲ್ಲಿ ದೇವರ ವಾಕ್ಯಕ್ಕೂ ಮತ್ತು ಇಡೀ ಲೋಕವೇ ವಿಶೇಷವಾಗಿ ಎಲ್ಲಾ ದೈವಜ್ಞಾನ ವೇದವಿದ್ಯಾಲಯಗಳಲ್ಲಿರುವ ಪಂಡಿತರುಗಳು, ಪ್ರಮುಖ ಪೀಠಗಳಲ್ಲಿರುವ ದೇವರ ಸೇವಕರುಗಳು ತಲೆಬಾಗಿ ವೈಜ್ಞಾನಿಕ ದೇವರಾದ "ವಿಕಾಸವಾದ"ವನ್ನು ಆರಾಧಿಸುತ್ತಿರುವ "ಆಧುನಿಕ ವಿಜ್ಞಾನ" ಎಂದು ಕರೆಯಲ್ಪಡುವ ವಿಚಾರಕ್ಕೂ ಒಂದು ರೀತಿಯ ಯುದ್ಧಭೂಮಿಯೇ ಇದ್ದಂತಿದೆ. ಈ ಎರಡೂ ಸಿದ್ಧಾಂತಗಳು ಒಂದಕ್ಕೊಂದು ವಿರುದ್ಧವಾಗಿವೆ. ಈ "ವಿಕಾಸವಾದವ" ನಿಜವಾದಲ್ಲಿ ಸತ್ಯವೇದವು ಆದಿಕಾಂಡದಿಂದ ಪ್ರಕಟನೆಯವರೆಗೆ ಎಲ್ಲವೂ ಸುಳ್ಳಾಗುತ್ತದೆ. ನಾವು ಎತ್ತಿಹಿಡಿಯುವಂತೆ, ಸತ್ಯವೇದವು ನಿಜವಾದಲ್ಲಿ ವಿಕಾಸವಾದವು ಮಾನವನ ಸಂಬಂಧಿತವಾದ ಅದರ ಎಲ್ಲಾ ಲೆಕ್ಕಾಚಾರಗಳಲ್ಲಿಯೂ ಸಂಪೂರ್ಣವಾಗಿ ಸುಳ್ಳಾಗುತ್ತದೆ.

ಈ ವಿಷಯವನ್ನು ನಿರ್ಧರಿಸಬೇಕಾದುದು ಆದಿಕಾಂಡದಲ್ಲಿ ತಿಳಿಸಿರುವಂತೆ ದೇವರ ಸ್ವರೂಪದಲ್ಲಿ ಮನುಷ್ಯರನ್ನು ಉಂಟುಮಾಡಿದ ಬಗ್ಗೆ ಇರುವ ವಿವರಣೆಗಳು ಮಾತ್ರವಲ್ಲ, ಇತರ ವಾಕ್ಯಗಳ ಹೇಳಿಕೆಗಳೂ ಅಷ್ಟೇ ಬಲಯುತವಾಗಿವೆ. ಸತ್ಯವೇದದ ಸಮಗ್ರ ಸಿದ್ಧಾಂತಗಳು ಆದಿಕಾಂಡದ ಈ ದಾಖಲೆಯನ್ನು ಸಮರ್ಥಿಸುತ್ತವೆ ಮತ್ತು ಅದರೊಂದಿಗೆ ಅವಲಂಬಿಸುತ್ತವೆ ಇಲ್ಲವಾದರೆ ಇಲ್ಲ. ಮನುಷ್ಯನು ಶುದ್ಧ ಮತ್ತು ಸಮರ್ಪಕ ಹಾಗೂ ಮಾನಸಿಕವಾಗಿ ಸಂಪನ್ನವಲ್ಲದ ಬೇರೆ ರೀತಿಯಲ್ಲಿ ಸೃಷ್ಟಿಸಲ್ಪಟ್ಟಿದ್ದರೆ ಆತನನ್ನು ಸತ್ಯಪೂರ್ವಕವಾಗಿ ದೇವಸ್ವರೂಪನು ಎಂದು ಕರೆಯಲು ಸಾಧ್ಯವಾಗುತ್ತಿದ್ದಿಲ್ಲ ಮತ್ತು ಆತನ ಸೃಷ್ಟಿಕರ್ತನು ನಿತ್ಯಜೀವಕ್ಕಾಗಿ ಆತನಲ್ಲಿ ಇರಬಹುದಾದ ಯೋಗ್ಯತೆಯನ್ನು ಪರೀಕ್ಷಿಸುವ ಸಲುವಾಗಿ ಏದೇನ್ ತೋಟದಲ್ಲಿ ಆತನನ್ನು ಇಡುತ್ತಿರಲಿಲ್ಲ ಹಾಗೂ ನಿಷಿದ್ಧ ಪಡಿಸಿದ್ದ ಹಣ್ಣನ್ನು ತಿಂದ ಅವಿಧೇಯತೆಯು "ಪಾಪ'ವೆಂದು ಪರಿಗಣಿಸಲ್ಪಟ್ಟು "ಮರಣ"ವೆಂಬ ಶಿಕ್ಷೆ ಆತನಿಗೆ ಒದಗಿ ಬರುತ್ತಿದ್ದಿಲ್ಲ. ಮಾತ್ರವಲ್ಲದೆ ಆತನನ್ನು ಈ ಶಿಕ್ಷೆಯಿಂದ ವಿಮೋಚಿಸಬೇಕಾಗುತ್ತಿದ್ದಿಲ್ಲ. ಮೇಲಾಗಿ, ಮಾನವನಾದ ಯೇಸುಕ್ರಿಸ್ತನು "anti-lutron', ಮತ್ತು ಪ್ರಥಮ ಮಾನವನ ತಪ್ಪಿಗಾಗಿ ತೆತ್ತ "ಈಡು" (ಅನುರೂಪವಾದ ಬೆಲೆ) ಎಂಬುದಾಗಿ ಘೋಷಿತಗೊಂಡಿದ್ದಾನೆ. ಆದುದರಿಂದ ಆತನನ್ನು ಪಾಪ ಮಾಡಿ ದೇವರ ಮರಣ ಶಿಕ್ಷೆಗೆ ತುತ್ತಾಗುವ ಮೊದಲು ಇದ್ದ ಪ್ರಥಮ ಮಾನವನ (ಆದಾಮನ) ನಿದರ್ಶನ ಎನ್ನಬಹುದು.

ಈ ಮೊದಲು ಇದ್ದಂತೆ ಈಗಲೂ ಅನೇಕ ಗಣ್ಯ ಹಾಗೂ ಸ್ವಾಭಾವಿಕ ಜನರಿದ್ದಾರೆಂದು ನಮಗೆ ತಿಳಿದಿದೆ. ಆದರೆ, ಇವರೆಲ್ಲರನ್ನು ದೇವರು ಪಾಪಿಗಳು ಎಂದು ಘೋಷಿಸಿದ್ದಾನೆ.

ಆದುದರಿಂದ ಇವರುಗಳು ಕ್ರಿಸ್ತನ ತ್ಯಾಗದ ಮೌಲ್ಯದಲ್ಲಿ ಪಶ್ಚಾತ್ತಾಪ ಪೂರ್ವಕವಾಗಿ ಆತನನ್ನು ಸಮೀಪಿಸದೇ, ಆತನಿಂದ ಪಾಪ ಕ್ಷಮಾಪಣೆಯನ್ನು ಹೊಂದದೇ ಇರುವಲ್ಲಿ ಅಂಥವರು ಯೆಹೋವನಿಂದ ಅಂಗಿಕರಿಸಲ್ಪಟ್ಟಿರುವುದಿಲ್ಲ. ಈ ರೀತಿಯಲ್ಲಿ ದೇವರ ಬಳಿಗೆ ಬಂದವರೆಲ್ಲರೂ ಆತನ ಕೃಪೆಯಿಂದಲೇ ಕ್ರಿಸ್ತನ ನೀತಿಯುಳ್ಳ ನಿಲುವಂಗಿಯ ಅಡಿಯಲ್ಲಿ ನಿಂತಿದ್ದಾರೆ . ಇದರ ಫಲಿತಾಂಶವೆಂದರೆ, ನಮಗೆ ತಿಳಿದಿರುವಂತೆ ಯಾವನಾದರೂ ವೈಯಕ್ತಿಕವಾಗಿ ಪುನರುತ್ಥಾನ ಅಥವಾ ಪರಿಪೂರ್ಣತೆ ಪಡೆಯುವ ಮೂಲಕ ಪರಿಪೂರ್ಣನಾದ ಹೊರತು ಬೇರೆ ಯಾವುದೂ ಸೃಷ್ಟಿಕರ್ತನನ್ನು ತೃಪ್ತಿಪಡಿಸಲಾಗದು. ಆದಾಮನು ಪಾಪಮಾಡುವುದಕ್ಕೆ ಮುಂಚೆ ಆತನೊಡನೆ ಆಪ್ತ ಸಂಭಾಷಣೆ ನಡೆಸಿ ಆತನನ್ನುತನ್ನ ಮಗನೆಂದು ಕರೆದಾತನೂ, ನಂತರದಲ್ಲಿ ಆದಾಮನನ್ನು ಹಾಗೂ ಆತನ ಮಕ್ಕಳಾದ ನಮ್ಮನ್ನು ಅವಿಧೇಯ (ರೌದ್ರಕ್ಕೆ ಗುರಿಯಾದ) ಮಕ್ಕಳಾಗಿದ್ದೇವೆಂದು ಘೋಷಿಸಿ ಪಾಪದ ದೆಸೆಯಿಂದ ಶಿಕ್ಷೆಗೆ ತಳ್ಳಿದಾತನೂ ಇದೇ ಸೃಷ್ಟಿಕರ್ತನು. "ದೇವರಮಗ"ನಾಗಿ (ಲೂಕ 3:38) ಸೃಷ್ಟಿಸಲ್ಪಟ್ಟಾಗ ಆದಾಮನಲ್ಲಿ ಪಾಪವಿರಲಿಲ್ಲ.

ಲೋಕವು ಆರಂಭವಾದಂದಿನಿಂದ ಇದ್ದ ಎಲ್ಲಾ ಪ್ರವಾದಿಗಳೂ ಬರಲಿರುವ ಯುಗವು "ಹೇಳಲ್ಪಟ್ಟಿರುವ ಸಮಸ್ತವನ್ನೂ ಸರಿಪಡಿಸುವ ಕಾಲ" ಎಂದು ಘೋಷಿಸಿರುವುದು ಸತ್ಯವಾಗಿರುವಂತೆ, ವಿಕಾಸವಾದವು ಎಲ್ಲಾ ಪ್ರವಾದಿಗಳ ಮೂಲಕ ಮಾಡಲ್ಪಟ್ಟ ದೇವರ ಹೇಳಿಕೆಗಳನ್ನು ಉಗ್ರವಾದ ರೀತಿಯಲ್ಲಿ ವಿರೋಧ ಮಾಡುತ್ತಿರುವುದೂ ಅಷ್ಟೇ ಸತ್ಯವಾಗಿದೆ. ಈ ವರೆಗೆ ಮಾನವ ಕುಲಕ್ಕೆ ಒಂದು ರೀತಿಯ ಆಶೀರ್ವಾದವೆನಿಸಿರುವ ಪುನರುಜ್ಜೀವವು ಒಂದು ವೇಳೆ ವಿಕಾಸವಾದವು ಸರಿಯಾದುದೆಂದು ಕಂಡುಬಂದಲ್ಲಿ ಅದುವೇ ಅಪರಾಧವೆನಿಸುವುದು. ಯಾವುದಾದರೂ ಅಂಥ ಶಕ್ತಿಗಳಿಂದ ಇಲ್ಲವೆ ಇತರ ವಿಕಾಸ ಸಂಬಂದಿತ ಪ್ರಕ್ರಿಯೆಗಳಿಂದ ಮಾನವನು ಜೀವದ್ರವ್ಯದಿಂದ ಕಪ್ಪೆ ಚಿಪ್ಪಿನವರೆಗೆ, ಕಪ್ಪೆ ಚಿಪ್ಪಿನಿಂದ ಮೀನಿನವರೆಗೆ, ಮೀನಿನಿಂದ ಹರಿದಾಡುವ ಜಂತುವಿನವರೆಗೆ, ಇವುಗಳಿಂದ ಮಂಗನವರೆಗೆ, ಮಂಗನಿಂದ ಕೆಳ ಮಟ್ಟದ ಮಾನವನವರೆಗೆ, ಇವುಗಳಿಂದ ನಮ್ಮವರೆಗೆ ತನ್ನ ಆಯಾಸಕರವಾದ ಸಾಹಸದಿಂದ ಮತ್ತು ಪ್ರಯಾಸಕರ ಪ್ರಯತ್ನದಿಂದ ಹತ್ತುತ್ತಿದ್ದರೆ, – ಆಗ ದೇವರು ಮಾನವಕುಲವನ್ನು ಆದಾಮನಿದ್ದ ಪೂರ್ವಸ್ಥಿತಿಗೆ ಪುನಃವಶ ಮಾಡುವ ಕಾರ್ಯಕ್ಕೆ ಧಕ್ಕೆಯಾಗುತ್ತಿತ್ತು ಮತ್ತು ಬಹುಶಃ ಈ ಪುನಃಶ್ಚೇತನ ಕಾರ್ಯವನ್ನು ಒತ್ತಾಯಪೂರ್ವಕವಾಗಿ "ಜೀವದ್ರವ್ಯ' (protoplasm) ಕ್ಕೆ ಹಿಂದೂಡ ಬೇಕಾಗುತ್ತಿತ್ತು. ಈ ಪ್ರಶ್ನೆಗೆ ಮಧ್ಯಂತರ ನೆಲೆಯಿಲ್ಲ. ದೇವ ಜನರು ಆತನ ವಾಕ್ಯಕ್ಕನುಸಾರವಾಗಿ ಎಷ್ಟು ಬೇಗ ಸಕಾರಾತ್ಮಕ ನಿರ್ಧಾರ ಕೈಗೊಳ್ಳುತ್ತಾರೋ ಅದು ಅವರಿಗೆ ಒಳಿತಾಗುತ್ತದೆ ಮತ್ತು ಅವರು ಈಗ ಜಾರಿಯುಲ್ಲಿರುವ ಮತ್ತು ಸಾಧ್ಯವಾದಲ್ಲಿ "ಆಯಲ್ಪಟ್ಟವರನ್ನೇ" ಮೋಸಗೊಳಿಸಲು ಹವಣಿಸುತ್ತಿರುವ ಕೆಲವೊಂದು ಈಡು ಇಲ್ಲದ ಮತ್ತು ವಿಕಾಸ ಸಿದ್ಧಾಂತಗಳಿಗೆ ನಿಶ್ಚಯವಾಗಿಯೂ ಬಲೆ ಬೀಳಲು ಸಾಧ್ಯವಾಗದು "ಎಲ್ಲಾ ಮನುಷ್ಯರೂ (ವಿಕಾಸವಾದಿಗಳು) ಸುಳ್ಳುಗಾರರಾದರೂ, ದೇವರು ಸತ್ಯವಂತನೇ ಸರಿ." (ರೋಮಾ. 3:4).

ನಾವಿಲ್ಲಿ ಆದಾಮನ ಸೃಷ್ಟಿಯ ವಿವರಣೆಗೆ, ಆತನ ಶರೀರ ರಚನೆ, ದೇಹ, ಆತ್ಮ ಅಥವಾ ಜೀವದ ಉಸಿರು ಮತ್ತು ಇವುಗಳು ಯಾವ ರೀತಿಯಲ್ಲಿ ಒಂದುಗೂಡಿಕೊಂಡು ಆತನನ್ನು ಜೀವಿಸುವ ಪ್ರಾಣಿಯನ್ನಾಗಿ ಅಥವಾ ಆತ್ಮವನ್ನಾಗಿ ಮಾಡಿದವು ಎಂಬಿತ್ಯಾದಿಗಳ ಬಗ್ಗೆ ಚರ್ಚಿಸುವುದಕ್ಕಾಗಲೀ ಹೋಗುವುದಿಲ್ಲ. ಇವುಗಳನ್ನು ಬೇರೊಂದು ಸಂಬಂಧದಲ್ಲಿ ಈಗಾಗಲೇ ಪ್ರಸ್ತುತಿಪಡಿಸಲಾಗಿದೆ (ಸಂಪುಟ V, ಅಧ್ಯಾಯ : xii).

ಮುಂದಿನ ಪೀಳಿಗೆಗಳಲ್ಲಿನ ಅವರ ಫಲದಾಯಕತ್ವವು ಕೆಲವರು ಗ್ರಹಿಸುವಂತೆ ಪಾಪದೊಡನೆ ಯಾವ ಸಂಬಂಧವನ್ನೂ ಹೊಂದಿರುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಆದರೆ ಅದು ದೇವರ ಆಶೀರ್ವಾದದ ಭಾಗವಾಗಿದೆ, ಪತನ ಮತ್ತು ಅದರ ಶಾಪ ಅಥವಾ ದಂಡನೆಯ ಬಗ್ಗೆ ಇರುವ ಏಕೈಕ ಸಂಬಂಧವೆಂದರೆ, ತಾಯಿಯ ಪ್ರಸವ ವೇದನೆಯ ಕುರಿತು ಮತ್ತು ಇದಕ್ಕೆ ಅನುಗುಣವಾಗಿ ಮನುಷ್ಯನು ಬೆವರಿಡುತ್ತಾ ಕಷ್ಟಪಟ್ಟು ದುಡಿಯುವಿಕೆ. ಇದು ಹೆಚ್ಚಾದ ಪ್ರಮಾಣದಲ್ಲಿದ್ದು ಮಾನವ ಜನಾಂಗವು ಅವನತಿ ಹೊಂದಿ ಶಾರೀರಿಕವಾಗಿಯೂ, ಮಾನಸಿಕವಾಗಿಯೂ ಬಲಹೀನವಾಗುತ್ತಿದೆ. ಅಂತಿಮವಾಗಿ ಈ ಭೂಮಿಯನ್ನು ತುಂಬುವಂತೆ (ಭರ್ತಿಮಾಡುವುದಲ್ಲ) ಸಾಕಷ್ಟು ಸಂತಾನವು ಬೆಳೆದುಬಂದಾಗ ಫಲದಾಯಕತ್ವದ ಉದ್ದೇಶವು ನೆರವೇರಬಹುದಿತ್ತು. ಈಗಾಗಲೇ ಬಹಳಷ್ಟು ಸಂಖ್ಯೆಯಲ್ಲಿ ಜನರು ಹುಟ್ಟಿದ್ದಾರೆಂಬುದು ಸತ್ಯ – ಬಹುಶಃ ಐವತ್ತು ದಶಲಕ್ಷ (2000 ಕೋಟಿ) ಎಲ್ಲರೂ ಈಗ ಮರಣವೆಂಬ ಕಾರಾಗೃಹದಲ್ಲಿ ದೀರ್ಘವಾದ ನಿದ್ರೆಯಲ್ಲಿದ್ದಾರೆ. ಆದರೆ ಇದೇ ಹೆಚ್ಚಲ್ಲ. ಯಾಕೆಂದರೆ ಪ್ರಸ್ತುತ ಭೂಭಾಗದಲ್ಲಿ ಇದರ ಎರಡು ಅಥವಾ ಮೂರು ಪಾಲು ಹೆಚ್ಚು ಜನರು ಹಿಡಿಯಬಹುದಾಗಿದೆ – ಈಗಿನ ಖಂಡಗಳು ಭೂಮಿಯ ಅಡಿಯಿಂದ ಎದ್ದು ಬಂದಂತೆ ಮುಂದೆಯೂ ಎದ್ದುಬರಬಹುದಾದ ಖಂಡಗಳನ್ನು ಇಲ್ಲಿ ಗಣನೆಗೆ ತಂದುಕೊಂಡಿಲ್ಲ.

ಧಾರ್ಮಿಕ ವಿರೋಧಿ ಮನೋಭಾವದ ವಿಜ್ಞಾನಿಗಳು ಆದಿಕಾಂಡದಲ್ಲಿ ಕೊಟ್ಟಿರುವ ಸಮಯಕ್ಕಿಂತ ಮೊದಲೇ ಮಾನವನು ಈ ಭೂಮಿಯ ಮೇಲೆ ಇದ್ದನೆಂಬದಾಗಿ ಬಹುಕಾಲ ಸಂಶೋಧನೆ ನಡೆಸಿ ರುಜುವಾತು ಪಡಿಸುವಂತೆ ವಿಶ್ವಪ್ರಖ್ಯಾತಿ ಗಳಿಸುವ ದೃಷ್ಟಿಯಿಂದ ಮರಳು ಅಥವಾ ಜೇಡಿಮಣ್ಣಿನಡಿ ಇದ್ದ ಪ್ರತಿಯೊಂದು ಮೂಳೆಯನ್ನೂ ಪರಿಶೋಧಿಸಲಾಗುತ್ತಿತ್ತು. ಹೀಗೆ ವಿಜ್ಞಾನಿಯು ದೇವರ ಮಾತನ್ನು ಅಬದ್ದ ಮಾಡಿದ ಮನುಷ್ಯನ ನಂಬಿಕೆಗೆ ಅನರ್ಹವಾದ ಈ ರೀತಿಯ ಸಾಕ್ಷ್ಯಗಳ ಬಗ್ಗೆ ನಾವೀಗಾಗಲೇ ಗಮನ ಸೆಳೆದಿದ್ದೇವೆ* ಕೆಲವು ಸಂದರ್ಭಗಳಲ್ಲಿ ಇವುಗಳು ಆಧುನಿಕ ಭಾರತೀಯರು ಅಗ್ನಿಶಿಲೆಗಳನ್ನು ಅವುಗಳಿಗೆ ತಕ್ಕಂತೆ ರೂಪಕೊಟ್ಟು ನಿರ್ಮಿಸಿದಂತೆ ಈ ಕಾರ್ಯವು ರುಜುವಾತಾಗಿದೆ. ✞

Victoria Philosophical Institute ನಲ್ಲಿ ಕೆಲವು ಸಮಯದ ಹಿಂದೆ ನಡೆದ ಸಭೆಯೊಂದರಲ್ಲಿ ಹೀಗೆ ಹೇಳಲಾಯಿತು.

"Pro. Stokes, F.R.S. , Sir J.R. Bennett, Vice Pres. R.S., Prof. Beale, F.R.S. ಮತ್ತು ವಿಕಾಸವಾದದ ವಿವಿಧ ಸಿದ್ಧಾಂತಗಳಿಗೆ ಸಂಬಂಧಿಸಿದ ಇನ್ನೂ ಕೆಲವು ಮಂದಿ "ವಿಕಾಸವಾದ" ಕುರಿತಾದ ಹಲವು ಸಿದ್ಧಾಂತಗಳ ಬಗ್ಗೆ ಜಾಗರೂಕತೆಯಿಂದ ವಿಶ್ಲೇಷಿಸಿದ್ದಾರೆ ಮತ್ತು ಮಾನವನು ಕೆಳವರ್ಗದ ಪ್ರಾಣಿಗಳಿಂದ ವಿಕಾಸಗೊಂಡನೆಂಬುದಕ್ಕೆ ನೈತಿಕ ಬೆಂಬಲ ನೀಡಲು ಇನ್ನೂ ಯಾವುದೇ ವೈಜ್ಞಾನಿಕ ಸಾಕ್ಷಿ ದೊರೆತಿಲ್ಲವೆಂದು ಹೇಳಿದ್ದಾರೆ. ಪ್ರೊ॥ Virchow ಎಂಬುವವರು ಮಾನವನ ಬೆಳವಣಿಗೆಯಲ್ಲಿ ಯಾವುದೇ ಕೆಳ ಹಂತದ ಪಳಿಯುಳಿಕೆಗಳ ಸಂಪೂರ್ಣ ಅಭಾವ ಸ್ಥಿತಿಯಿದೆಯೆಂದು ಹೇಳಿದ್ದಾರೆ. ಇತಿಹಾಸ ಪೂರ್ವ ಮನುಷ್ಯನ ಶರೀರ ರಚನಾ ಶಾಸ್ತ್ರದ ಕಾರ್ಯಕ್ಷೇತ್ರದಲ್ಲಿನ ಯಾವುದೇ ಸಕಾರಾತ್ಮಕ ಮುಂದುವರಿಕೆಯು ನಿಜವಾಗಿಯೂ ನಮ್ಮನ್ನು ಆ ರೀತಿಯ ಸಂಬಂಧವಿರುವ ಸಾಕ್ಷ್ಯಗಳಿಂದ ಅಂದರೆ ಉಳಿದ ಪ್ರಾಣಿ ಜಾತಿಯ ಸಂಬಂಧದಿಂದ ಹೊರತುಪಡಿಸಿದೆ. ಇದರಲ್ಲಿ ಒಬ್ಬ ಪ್ರಸಿದ್ಧ Palaeontologist ಆಗಿದ್ದ ಪ್ರೊ॥ Barraude ಎಂಬುವವರು ಅವರ ಯಾವುದೇ ಪರೀಕ್ಷೆಗಳಲ್ಲಿ ಒಂದು ಜಾತಿಯ ಅವಶೇಷವು ಮತ್ತೊಂದಾಗಿ ಬದಲಾಗಿರುವ ಉದಾಹರಣೆಗಳು ಕಂಡುಬಂದಿಲ್ಲ ಎಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಿಜವಾಗಿಯೂ, ಯಾವುದೇ ವೈಜ್ಞಾನಿಕ ವ್ಯಕ್ತಿ ಈ ವರೆಗೆ ಮಾನವ ಮತ್ತು ಮಂಗನ, ಮೀನು ಮತ್ತು ಕಪ್ಪೆಯ ಹಾಗೂ ಬೆನ್ನು ಮೂಳೆ ಹೊಂದಿದ ಮತ್ತು ಹೊಂದಿರದ ಪ್ರಾಣಿಗಳ ನಡುವೆ ಇರಬಹುದಾದ ಸಂಬಂಧಗಳನ್ನು ಕಂಡುಹಿಡಿದಿಲ್ಲವೆಂಬುದು ಇದರಿಂದ ಕಂಡುಬರುತ್ತದೆ. ಇಷ್ಟೇ ಅಲ್ಲದೆ, ಯಾವುದೇ ಜಾತಿಯ ಪ್ರಾಣಿಯಾಗಲಿ, ಅದರ ಅವಶೇಷವಾಗಲೀ ಇತರ ಜಾತಿಯ ಗುಣಲಕ್ಷಣಗಳನ್ನು ಪಡೆದುಕೊಳ್ಳುವ ಸಲುವಾಗಿ ತಮ್ಮ ವೈಶಿಷ್ಟ್ಯಪೂರ್ಣ ಗುಣಲಕ್ಷಣಗಳನ್ನು ಕಳೆದುಕೊಂಡ ನಿದರ್ಶನಗಳು ಯಾವುವೂ ಇಲ್ಲ. ಉದಾಹರಣೆಗೆ, ಒಂದೇ ರೀತಿಯದೆಂದು ಕಂಡು ಬರುವ ತೋಳಕ್ಕೂ, ನಾಯಿಗೂ ಯಾವುದೇ ಸಂಬಂಧವಿಲ್ಲ ಮತ್ತು ನಶಿಸಿಹೋದ ಪ್ರಾಣಿಗಳಲ್ಲಿಯೂ ಇದೇ ರೀತಿಯಾಗಿದೆ. ಒಂದರಿಂದ ಮತ್ತೊಂದಕ್ಕೆ ಅನುಕ್ರಮವಾದ ಮಾರ್ಗವಿಲ್ಲ. ಮಾತ್ರವಲ್ಲದೆ ಭೂಲೋಕದಲ್ಲಿ ಆದಿಕಾಲದಲ್ಲಿ ಇದ್ದ ಯಾವ ಪ್ರಾಣಿಯನ್ನೂ ಕೆಳಮಟ್ಟದ ಪ್ರಾಣಿಗಳೆಂದು ಹೀನೈಸುವಂತಿಲ್ಲ.

Sir J.W.Dawson LL.D., F.R.S. ರವರು ತಮ್ಮ " The Meeting Place of Geology and History" ಎಂಬ ಲೇಖನದಲ್ಲಿ ಬರೆದ ತಮ್ಮ ಇತ್ತೀಚಿನ ತನಿಖೆಗಳನ್ನು ನಾವಿಲ್ಲಿ ಸಂಕ್ಷಿಪ್ತವಾಗಿ ಉಲ್ಲೇಖಿಸಿದ್ದೇವೆ : ಮಾನವನು ತನ್ನ ಹಿಂದಿನ ಕೆಳಜಾತಿ ಪ್ರಾಣಿಗಳೊಂದಿಗೆ ಉತ್ಪತ್ತಿಯಲ್ಲಿ ಯಾವುದೇ ಸಂಬಂಧವಿರಿಸಿಕೊಂಡಿರುವುದು ನಮಗೆ ಕಂಡುಬರುತ್ತಿಲ್ಲ. ಆತನು ನಮ್ಮ ಮುಂದೆ ಕೆಳಜಾತಿಯ ಪ್ರಾಣಿಗಳೊಂದಿಗೆ ಯಾವುದೇ ಸ್ವತಃ ಸಂಬಂಧವಿಲ್ಲದವನಾಗಿ ತೋರಿಬರುತ್ತಾನೆ. ಅವರ ಸಂಶೋಧಕರಲ್ಲಿ, ಮಾರ್ಪಾಡು ಮಾಡುವವರಲ್ಲಿ, ನೂತನ ಮಾದರಿಯ ಜೀವಿತವನ್ನು ಪರಿಚಯಪಡಿಸುವವರಲ್ಲಿ ಆದಿಕಾಲದ ಮಾನವರು ತಮ್ಮ ಪೀಳಿಗೆಯವರಷ್ಟೆ ಸರಿಸಮಾನರು. ನಮಗೆ ಇದುವರೆಗೂ ಮಾನವನ ಹಾನಿಯಿಲ್ಲದ ಆ ಸುವರ್ಣಕಾಲ (ಪರದೈಸಿನಲ್ಲಿನ) ದ ಬಗ್ಗೆ ಪತ್ತೆಹಚ್ಚಲು ಸಾಧ್ಯವಾಗಿಲ್ಲ. ನಾವು ಆತನನ್ನು ಗುಹೆ ಹಾಗೂ ಕಂಕರಗಳಲ್ಲಿ ಕಂಡುಕೊಂಡಾಗ ಆತನಾಗಲೆ ಪತನಹೊಂದಿದ ಮನುಷ್ಯನಾಗಿದ್ದು ತನ್ನ ವಾತಾವರಣದೊಂದಿಗೆ ಸಾಮರಸ್ಯ ಕಳೆದುಕೊಂಡು ತನ್ನ ಜೊತೆಮಾನವರೊಂದಿಗೆ ವೈರತ್ವ ಬೆಳೆಸಿಕೊಂಡಿದ್ದು ಅವರ ವಿರುದ್ಧ ಮಾಂಸ ಭಕ್ಷಕ ದುಷ್ಟ ಮೃಗಗಳನ್ನು ಎದುರಿಸಲು ಪ್ರಕೃತಿಯು ನೀಡಿರುವ ಅಸ್ತ್ರಗಳಿಗಿಂತಲೂ ಭೀಕರ ಹಾಗೂ ಮರಣಕಾರಕ ಅಸ್ತ್ರಗಳ ಸಂಶೋಧನೆಯಲ್ಲಿ ತೊಡಗಿದ್ದಾನೆ. ಮಾನವನು ಬೆನ್ನೆಲಬುಳ್ಳ ಪ್ರಾಣಿ ಜಾತಿಗೂ ಹಾಗೂ ಸಸ್ತನಿ ವರ್ಗಕ್ಕೂ ಸೇರಿದ ಸದಸ್ಯನಾಗಿದ್ದಾನೆ. ಆದರೆ, ಈ ವರ್ಗದಲ್ಲಿ ಆತನು ನೇರವಾದ ಜಾತಿ ಮತ್ತು ಪ್ರಕಾರಕ್ಕೆ ಸೇರಿರುವುದು ಮಾತ್ರವಲ್ಲ ಇನ್ನೂ ನಿರ್ದಿಷ್ಟವಾದ ಸಂತತಿಗೆ ಸೇರಿದವನಾಗಿದ್ದಾನೆ. ಈ ರೀತಿಯಲ್ಲಿ ಆತನು ತನಗೆ ನಿಕಟವಾಗಿರುವ ಎಲ್ಲಾ ಪ್ರಾಣಿಗಳಿಂದಲೂ ತನ್ನನ್ನು ಪ್ರತ್ಯೇಕಿಸಿಕೊಂಡಿದ್ದಾನೆ. ನಾವು ಕೆಳ ಜಾತಿಯ ಪ್ರಾಣಿಗಳಲ್ಲಿ ಒಂದು ಮತ್ತೊಂದರಿಂದ ಸೃಷ್ಟಿಯಾಯಿತೆಂಬ

---

*ಆದಾಮಪೂರ್ವ ಮನುಷ್ಯನ ಸಿದ್ಧಾಂತದ ಬಗ್ಗೆ ಮತ್ತು ಈ ಮೂಲಕ ಮಾನವನ ವಿವಿಧ ಜನಾಂಗಗಳ ಬಗ್ಗೆ ವಿವರಣೆ ಪಡೆಯುವ ಪ್ರಯತ್ನಗಳ ಬಗ್ಗೆ ನಮಗೆ ಅರಿವಿಲ್ಲವೆಂತಲ್ಲ. ಆದರೆ, ಸತ್ಯವೇದವು ದೈವೀಕ ಪ್ರಕಟನೆ ಎಂದು ನಾವು ದೃಢವಾಗಿ ಅದನ್ನು ಹಿಡಿದಿರುವ ಕಾರಣ ಅದು ಮಾನವನ ಎಲ್ಲಾ ಊಹೆಗಳಿಗೂ ಮಿಗಿಲಾಗಿದೆ. ಅದು ಮಾನವ ಕುಟುಂಬದ ಒಗ್ಗಟ್ಟನ್ನು ನಿಶ್ಚಯಪೂರ್ವಕವಾಗಿ ಹೀಗೆ ಘೋಷಿಸುತ್ತದೆ "ಆತನು ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು ಹುಟ್ಟಿಸಿ ಅವರವರು ಇರತಕ್ಕ ಕಾಲಗಳನ್ನೂ ಅವರವರ ನಿವಾಸಗಳ ಮೇರೆಗಳನ್ನೂ ನಿಷ್ಕರ್ಷಿಸಿದನು"(ಅ.ಕೃ 17 : 26). ಮತ್ತು ಮೊದಲನೆ ಮನುಷ್ಯನಾದ ಆದಾಮನು (1 ಕೊರಿಂಥ 15:45,47)ಇದಲ್ಲದೆ, ಜಲಪ್ರಳಯದ ಕಥೆಯೂ ಹೆಚ್ಚು ಸ್ಪಷ್ಟವಾಗಿದ್ದು, ಕೇವಲ ಎಂಟು ಮಂದಿ ಮಾತ್ರ ನಾವೆಯಲ್ಲಿ ಉಳಿಸಲ್ಪಟ್ಟರು ಮತ್ತು ಇವರೆಲ್ಲರೂ ಆದಾಮನ ಸಂತತಿಯ ನೋಹನ ಕುಟುಂಬಕ್ಕೆ ಸೇರಿದವರು ಎಂದು ತಿಳಿಸುತ್ತದೆ.

ವಿವಿಧ ಮಾದರಿಯ ಮನುಷ್ಯರು ಅಥವಾ ಜನಾಂಗಗಳಿಗೆ ಅವರ ಹವಾಗುಣ, ಪದ್ಧತಿಗಳು, ಆಹಾರ ಮುಂತಾದವುಗಳೂ ಕಾರಣವೆಂದು ಹೇಳಬಹುದು. ವಿವಿಧ ಜನರು ವಿವಿಧ ಪ್ರಾಂತ್ಯಗಳಲ್ಲಿ ನೆಲೆಸಿದ್ದ ಕಾರಣ ಒಂದಕ್ಕೊಂದು ವೈಶಿಷ್ಟತೆಗಳು ಉಂಟಾದುವೆಂದು ಹೇಳಬಹುದು. ಉದಾಹರಣೆಗೆ, ಯೂರೋಪಿಯನ್ನರು ಭಾರತದಲ್ಲಿ ಮತ್ತು ಚೀನಾದೇಶದಲ್ಲಿ ಬಹಳ ಕಾಲವಿದ್ದುದರಿಂದ ಅವರ ನೆರೆಯವರ ಹೋಲಿಕೆಯನ್ನು ಪಡೆದವರಾಗಿದ್ದಾರೆ ಮತ್ತು ಈ ದೇಶದಲ್ಲಿ ಹುಟ್ಟಿದ ಅವರ ಮಕ್ಕಳು ತಮ್ಮ ಬಣ್ಣ ಮತ್ತು ರೂಪದಲ್ಲಿ ಇನ್ನೂ ಹೆಚ್ಚಿನ ಹೋಲಿಕೆ ಪಡೆದಿರುತ್ತಾರೆ –ಇದಕ್ಕೆ ನಿಸ್ಸಂದೇಹವಾಗಿ ತಾಯಿಯ ಗರ್ಭಕಾಲದ ಪರಿಸರದ ಪರಿಣಾಮವೇ ಕಾರಣ. ಚೀನಾದ ಒಂದು ಜಿಲ್ಲೆಯ ಜನರು ತಮ್ಮನ್ನು ಸುಮಾರು ಕ್ರಿ.ಶ. 70ರಲ್ಲಿ ಯೆಹೂದ್ಯಕಾಲವು ಸಮಾಪ್ತವಾದಾಗ ಚದುರಿಹೋದ ಇಸ್ರಾಯೇಲ್ಯರೊಂದಿಗೆ ಗುರುತಿಸುವುದರಲ್ಲಿ ಇಂತಹ ಸಜಾತೀಕರಣದ ಉದಾಹರಣೆಯನ್ನು ನಾವು ನೋಡಬಹುದು. ಗಟ್ಟಿ ಜನಾಂಗದವರಾಗಿದ್ದ ಈ ಯೆಹೂದಿಗಳನ್ನು ಈಗ ಚೀನೀಯರಿಂದ ಬೇರ್ಪಟ್ಟು ಗುರುತಿಸುವುದು ಕಷ್ಟಸಾಧ್ಯ. ✞ (ಸಂಪುಟ II, ಪುಟ 34, 35 )

ಇನ್ನೂ ದೃಡಪಡದ ಸಿದ್ಧಾಂತವನ್ನು ಒಂದು ವೇಳೆ ಒಪ್ಪಿಕೊಂಡರೂ ನಾವು ಮಾನವರನ್ನು ಕೀಳುವರ್ಗದ ಪ್ರಾಣಿಗಳೊಂದಿಗೆ ಜೋಡಿಸಬಲ್ಲ "ತಪ್ಪಿಹೋಗಿರುವ ಸರಪಣಿಯ ಕೊಂಡಿಯನ್ನು' ಒದಗಿಸಲು ಅಶಕ್ತರಾಗಿದ್ದೇವೆ. ಈ ಸರಪಣಿಯ ಕೊಂಡಿಯು ಮಾನವರನ್ನು ಯಾವುದೇ ಕೆಳವರ್ಗದ ಪ್ರಾಣಿಗಳೊಂದಿಗೆ ಜೋಡಿಸಲು ಅವಶ್ಯವಾಗಿರುವದಾದರೂ ಯಾವ ವೈಜ್ಞಾನಿಕ ವಸ್ತುಸ್ಥಿತಿಗಳಾಗಲೀ ಅಥವಾ ಇತ್ತೀಚಿನ ಭೂರಚನಾ ಶಾಸ್ತ್ರವಾಗಲೀ ಇದನ್ನು ರುಜುವಾತುಪಡಿಸಿಲ್ಲ. ಮಾನವನು ತನ್ನ ದೇಹಕ್ಕೆ ಸಂಬಂದಿಸಿದಂತೆ ಖಂಡಿತವಾಗಿ ಭೌತಿಕ ಪ್ರಾಣಿಯಾಗಿ ಭೂಮಿಗೆ ಸಂಬಂಧಪಟ್ಟವನು. ಭೂವಿಜ್ಞಾನ ಕಾಲದ ಮಾನವನ ಹೊಸತನಕ್ಕಿಂತ ಹೆಚ್ಚಾಗಿ ವಿಜ್ಞಾನದ ಯಾವುದೇ ಸಂಗತಿಗಳು ಇನ್ನೂ ಸ್ಥಾಪಿತಗೊಂಡಿಲ್ಲ. ಆತನ ಅವಶೇಷಗಳನ್ನು ನಾವು ಹಳೆಯ ಭೂವಿಜ್ಞಾನ ರಚನೆಯಲ್ಲಿ ಕಾಣದಿರುವುದು ಮಾತ್ರವಲ್ಲ, ನಾವು ಆತನ ಸಮೀಪವಾದ ಪ್ರಾಣಿಗಳ ಅವಶೇಷಗಳನ್ನು ಕಾಣುವುದಿಲ್ಲ. ಆ ಕಾಲದ ಪ್ರಪಂಚದ ಸ್ಥಿತಿಗತಿಗಳು ಮಾನವನ ವಾಸಕ್ಕೆ ಅಯೋಗ್ಯವಾಗಿದ್ದವೆಂದು ತೋರುತ್ತದೆ. ವಾಡಿಕೆಯ ಭೂವಿಜ್ಞಾನ ಪದ್ಧತಿಯನ್ನು ಅನುಸರಿಸುವರಾಗಿ ನಾವು ಭೂಲೋಕದ ಸಮಗ್ರ ಚರಿತ್ರೆಯನ್ನು ನಮಗೆ ತಿಳಿದಿರುವ ಅತ್ಯಂತ ಪುರಾತನ ಶಿಲೆಯಾದ Eozoic ಅಥವಾ Archaean ನಿಂದ ಆಧುನಿಕ ಕಾಲದವರೆಗೆ ನಾಲ್ಕು ವಿಭಾಗಗಳನ್ನಾಗಿ ಮಾಡಿಕೊಂಡರೆ ನಾವು ಮಾನವನ ಅಥವಾ ಆತನ ಕಾರ್ಯಗಳ ಅವಶೇಷಗಳನ್ನು ಈ ವಿಭಾಗಗಳ ಕಡೆಯದರ ಅಂತಿಮದಲ್ಲಿ ಮಾತ್ರ ನೋಡಬಹುದಾಗಿದೆ. ನಾವು ಅಧುನಿಕ ಕಾಲದ ಆರಂಭವನ್ನು ತಲಪುವವರೆಗೆ ಮಾನವನ ಇರುವಿಕೆಯ ಯಾವುದೇ ವಿವಾದಾತೀತ ಸಾಕ್ಷ್ಯದೊರೆಯದ ಕಾರಣ ... ಮಾನವನ ವಿವಿಧ ಕುಲಗಳು ಮತ್ತು ರೀತಿಗಳು ಇರುವುದಾದರೂ ಆತನ ಒಂದೇ ಒಂದು ಜಾತಿ ಮಾತ್ರವಿದೆ: ಮತ್ತು ಈ ಕುಲಗಳು ಮತ್ತು ವಿಧಗಳು ಬಹಳ ಮೊದಲೇ ವಿಕಸಿತಗೊಂಡಿವೆ ಮತ್ತು ಅವುಗಳ ನಂತರದ ಅನ್ವೇಷಣೆಯಲ್ಲಿ ಗಮನಾರ್ಹ ಸ್ಥಿರತೆಯನ್ನು ಕಂಡುಕೊಂಡಿವೆ ... ಆದಿಕಾಂಡದ ಚರಿತ್ರೆಯು ಆಧುನಿಕ ಚರಿತ್ರೆಯನ್ನು ನಿರೀಕ್ಷಿಸಿದೆ. ಈ ಪುರಾತನವಾದ ಗ್ರಂಥವು ಎಲ್ಲಾರೀತಿಯಲ್ಲಿಯೂ ವಿಶ್ವಾಸಾರ್ಹ ಮತ್ತು ಕ್ರೈಸ್ತೇತರವಾದ ಎಲ್ಲಾ ಪುರಾಣ ಮತ್ತು ದಂತಕಥೆಗಳಿಗಿಂತ ಬಹಳಷ್ಟು ದೂರದಲ್ಲಿದೆ".

ಡಾರ್ವಿನ್ ವಾದವನ್ನು ನೇರನುಡಿಗಳಿಂದ ವಿರೋಧಿಸುವವನಾದ ಪ್ರೊ॥ Pasteur ಎಂಬ ಅಣುಜೀವ ವಿಜ್ಞಾನಿಯು ಹೇಳಿದ್ದಾನೆ :–

"ಮುಂಬರುವ ಪೀಳಿಗೆಯು ಒಂದು ದಿನ ಆಧುನಿಕ ಭೌತಿಕವಾದದ ತತ್ವಜ್ಞಾನದ ಬಗ್ಗೆ ಹಾಸ್ಯಮಾಡೀತು. ನಾನು ಪ್ರಕೃತಿಯ ಬಗ್ಗೆ ಎಷ್ಟು ಹೆಚ್ಚಾಗಿ ಅಧ್ಯಯನ ಮಾಡುತ್ತೇನೋ ಅಷ್ಟೇ ಹೆಚ್ಚಾಗಿ ಸೃಷ್ಟಿಕರ್ತನ ಕಾರ್ಯಗಳಿಗಾಗಿ ವಿಸ್ಮಯಪಡುತ್ತೇನೆ. ನಾನು ಪ್ರಯೋಗಶಾಲೆಯಲ್ಲಿ ನನ್ನ ಕೆಲಸದಲ್ಲಿ ನಿರತನಾಗಿರುವಾಗಲೂ ಪ್ರಾರ್ಥಿಸುತ್ತೇನೆ".

Virchow ಎಂಬ ರಷ್ಯಾ ವಿದ್ವಾಂಸನು ಬಹಿರಂಗವಾಗಿ ಪ್ರಕಟಿಸಿಕೊಳ್ಳದ ಕ್ರೈಸ್ತನಾಗಿದ್ದರೂ ಇದೇ ರೀತಿಯಲ್ಲಿ ಡಾರ್ವಿನ್ನನ ಸಿದ್ಧಾಂತದಲ್ಲಿನ ಜೈವಿಕ(Organic)ವಸ್ತುಗಳು ಅಜೈವಿಕ (inorganic) ವಸ್ತುಗಳಿಂದ ಸೃಷ್ಟಿಗೊಂಡವು ಎಂಬುದನ್ನು ವಿರೋಧಿಸುತ್ತಾ ಹೀಗೆ ಹೇಳಿದ್ದಾನೆ :–

"ಪ್ರಾಣಿಗಳಿಂದ ಮಾನವನ ಅವಸ್ಥಾಪರಿವರ್ತನೆ ಆಯಿತೆಂಬುದನ್ನು ಕಂಡುಹಿಡಿಯುವ ಯಾವುದೇ ಪ್ರಯತ್ನವು ಸಂಪೂರ್ಣವಾಗಿ ವಿಫಲವಾಗಿದೆ. ಮಧ್ಯದ ಕೊಂಡಿಯು ಸಿಕ್ಕಿಲ್ಲ ಮತ್ತು ಸಿಗುವುದೂ ಇಲ್ಲ. ಮಾನವನು ಮಂಗನ ಸಂತಾನವಲ್ಲ. ಕಳೆದ ಐದು ಸಹಸ್ರ ವರ್ಷಗಳಲ್ಲಿ ಮಾನವ ಜಾತಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲವೆಂದು ಸಂಶಯಾತೀತವಾಗಿ ರುಜುವಾತಾಗಿದೆ."

ಇನ್ನೂ ಇತರ ಅನೇಕ ಪ್ರಕೃತಿವಾದಿಗಳು ಸಹಾ ಡಾರ್ವಿನ್ನನ ದೃಷ್ಟಿಕೋನದ ಬಗ್ಗೆ ತಮ್ಮ ವಿರೋಧದ ಧ್ವನಿಗಳನ್ನು ಎತ್ತಿದ್ದಾರೆ.

ಕಲಿಯುವವರಂತೆ ನಟನೆಮಾಡುವ ಕೆಲವೊಂದು "ಡಾಕ್ಟರ್'ಗಳು, "ಪ್ರೊಫೆಸರ್'ಗಳು "ತಪ್ಪಿಹೋದ ಕೊಂಡಿ"(missing link)ಯ ಬಗ್ಗೆ ತಮ್ಮ ಪ್ರಬಂಧಗಳಲ್ಲಿ "ಮಾನವನ ಕಾಲಿನ ಕಿರುಬೆರಳುಗಳು ನಿರುಪಯೋಗಿ ಅಗುತ್ತಲಿದ್ದು ಸಧ್ಯದಲ್ಲೇ ಮಂಗನ ಬಾಲ ಉದುರಿ ಹೋದಂತೆ ಸ್ವಾಭಾವಿಕವಾಗಿ ಉದುರಿಹೋಗಲಿದೆ" ಎಂದು ಬರೆಯುವುದು ಮೂರ್ಖತನವೆನಿಸುತ್ತದೆ. ಒಳ್ಳೇ ರೀತಿಯಲ್ಲಿ ಕಾಪಾಡಲ್ಪಟ್ಟ "ಮಮ್ಮಿ'ಗಳು ನಮ್ಮ ಬಳಿ ನಾಲ್ಕು ಸಾವಿರ ವರ್ಷಗಳಿಂದಲೂ ಇಲ್ಲವೆ ? ಅಷ್ಟೇ ಹಳೆಯದಾದ ಪೂರ್ಣಗಾತ್ರದ ನಗ್ನಶಿಲ್ಪಗಳು ನಮ್ಮಲ್ಲಿಲ್ಲವೆ? ಇವುಗಳಲ್ಲಿ ಯಾವಕ್ಕಾದರೂ ಬಾಲವನ್ನು ತೋರಿಸಲಾಗಿದೆಯೇ? ಅವುಗಳ ಕಿರು ಕಾಲ್ಬೆರಳುಗಳು ನಮಗಿಂತ ಬೇರೆಯಾಗಿವೆಯೇ? ಪ್ರಕೃತಿಯ ಸಂಪೂರ್ಣ ಧೋರಣೆಯು ಇಳಿಮುಖವಾಗುತ್ತಿಲ್ಲವೆ?. ಗಿಡಗಳು ಮತ್ತು ಕೆಳವರ್ಗದ ಪ್ರಾಣಿಗಳೊಂದಿಗೆ ಉತ್ತಮ ರೀತಿಯವುಗಳನ್ನೂ ಸಂರಕ್ಷಿಸಲು ಮಾನವನ ಬುದ್ಧಿವಂತಿಕೆ ಮತ್ತು ಸಹಾಯಗಳ ಅವಶ್ಯಕತೆ ಇಲ್ಲವೆ? ಮತ್ತು ಅವರ ಏಳಿಗೆಗೆ ಕಪ್ಪು ಆಫ್ರಿಕಾದಲ್ಲಿ ಕಂಡು ಬಂದಂತಹ ನಿಕೃಷ್ಟ ಸ್ಥಿತಿಯನ್ನು ತಡೆಹಿಡಿಯಲು ಮನುಷ್ಯರೊಂದಿಗೆ ದೇವರ ಕೃಪೆಯು ಸಹಾ ಅವಶ್ಯವಲ್ಲವೇ? ಇವುಗಳು ದೇವರ ವಾಕ್ಯಗಳಿಗನು ಸಾರವಾಗಿಯೇ ಇವೆ ಅಲ್ಲವೆ ? (ರೋಮಾ. 1:21, 24 ಮತ್ತು 28).

ತಿಮೋಥೆಯನಿಗೆ ಪೌಲನು ಬರೆದ ಎಚ್ಚರಿಕೆಯ ಮಾತುಗಳನ್ನು ಎಲ್ಲಾ ದೇವಜನರು ತಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳುವುದು ಉಚಿತ. ಅದೇನೆಂದರೆ: "ಎಲೈ ತಿಮೋಥೆಯನೇ, ಜ್ಞಾನೋಪದೇಶವೆಂದು ಸುಳ್ಳಾಗಿ ಹೇಳಿಕೊಳ್ಳುವ ಬೋಧನೆಗೆ ಸಂಬಂಧ ಪಟ್ಟ ಪ್ರಾಪಂಚಿಕವಾದ ಆ ಹರಟೆ ಮಾತುಗಳಿಗೂ ವಿವಾದಗಳಿಗೂ ನೀನು ದೂರವಾಗಿದ್ದು ನಿನ್ನ ವಶಕ್ಕೆ ಕೊಟ್ಟಿರುವುದನ್ನೇ ಕಾಪಾಡು" (1 ತಿಮೋ. 6:20). ಯಾವುದೇ ವಿಷಯವನ್ನು ಸ್ಪಷ್ಟವಾಗಿ ನೋಡುವ ಸಲುವಾಗಿ ನಾವು ಅವುಗಳನ್ನು ದೇವರ ಪ್ರಕಟನೆಯ

ದೃಷ್ಟಿಕೋನದ ಮೂಲಕ ನೋಡಬೇಕು. ನಾವು "ಬೆಳಕನ್ನು ಆತನ ಬೆಳಕಿನ ಮೂಲಕವೇ ನೋಡಬೇಕು" ಪ್ರಕೃತಿಯ ಮೂಲಕ ಮತ್ತು ಪ್ರಕೃತಿ ದೇವರ ಮಾರ್ಗದರ್ಶನದಲ್ಲಿ ಹೊರಗೆ ನೋಡುವುದರ ಪರಿಣಾಮವಾಗಿ ಹೃದಯ ಮತ್ತು ಬುದ್ಧಿವಂತಿಕೆ ಇವೆರಡೂ ವಿಸ್ತರಿಸಿ ನಮ್ಮಲ್ಲಿ ಮೆಚ್ಚಿಗೆ ಮತ್ತು ಆರಾಧನೆಯು ತುಂಬಿಹೋಗುತ್ತದೆ, ನಾವು ನಮ್ಮ ಸೃಷ್ಟಿಕರ್ತನ ಮಹಿಮೆ, ಭವ್ಯತೆ ಮತ್ತು ಶಕ್ತಿಯ ವಿಸ್ತೃತ ದರ್ಶನ ಪಡೆಯುತ್ತೇವೆ.

ಸಾಯಂಕಾಲವೂ, ಪ್ರಾತಃಕಾಲವೂ ಆದಾಗ ಆರನೆಯ ಯುಗಾರಂಭ ದಿನವು ತನ್ನ ಆರಂಭದಿಂದ ಈವರೆಗಿನ 42,000 ವರ್ಷಗಳಲ್ಲಿ ಭೂಮಿಯು ಮನುಷ್ಯನ ವಶಪಡಿಸುವಿಕೆಗೆ ಸಿದ್ಧವಾಗಿರುವುದನ್ನು ಕಂಡುಕೊಂಡಿತು. – ಹೀಗಿದ್ದರೂ ಸಂಪೂರ್ಣವಾಗಿ ಅದು ಆತನಿಗೆ ಯೋಗ್ಯವಾಗಿರಲಿಲ್ಲ. ತಾನು ಸೃಷ್ಟಿಸಲಿರುವ ಮನುಷ್ಯ ಜೀವಿಯ ಅವಿಧೇಯತೆ, (ಮತ್ತು ಆತನಿಗೆ ಒದಗಲಿರುವ ಮರಣ ಶಾಪ, ಅದರಿಂದ ಆತನ ವಿಮೋಚನೆ ಇತ್ಯಾದಿಗಳ ಬಗ್ಗೆ ತನ್ನ ಯೋಜನೆ) ಇವುಗಳನ್ನು ಮುಂಚಿತವಾಗಿಯೇ ತಿಳಿದಿದ್ದ ದೇವರು ಭೂಮಿಯು ಆತನಿಗೆ ಸಂಪೂರ್ಣವಾಗಿ ಸಿದ್ಧವಾಗುವವರೆಗೂ ಕಾಯಲಿಲ್ಲ, ಆದರೆ ಏದೇನ್ ತೋಟದಲ್ಲಿ ಒಂದು ಪರದೈಸನ್ನು ಆ ಸಮರ್ಪಕ ದಂಪತಿಗಳ ಸಂಕ್ಷಿಪ್ತ ಶೋಧನೆಗೆ ಪರಿಪೂರ್ಣವಾಗಿರುವಂತೆ ಸೃಷ್ಟಿಸಿ ಆದನ್ನು ಮಾನವ ಜಾತಿಗೆ ಬಿಟ್ಟುಕೊಟ್ಟನು. ಅದೇ ಸಮಯದಲ್ಲಿ ಶಿಕ್ಷಿತ ಅಪರಾಧಿಗಳಾಗಿ ಈ ಭೂಮಿಯನ್ನು ಮಾನವನು ವಶಪಡಿಸಿಕೊಂಡು ಅಲ್ಲಿ ಅಮೂಲ್ಯ ಪಾಠಗಳನ್ನು, ಅನುಭವಗಳನ್ನು ಪಡೆದುಕೊಳ್ಳುವ ಸಿದ್ಧತೆಯೂ ನಡೆದಿತ್ತು.

## ಯುಗಾರಂಭಲ್ಲಿ ಸೃಷ್ಟಿಯ ಏಳನೆಯ ದಿನ

## The Seventh Epoch-Day of the Creative Week

**"ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು" (ಆದಿ. 2 : 2)**

ಆರು ದಿನಗಳ ಮೇಲ್ಮುಖ ಮುನ್ನಡೆಯ ಕ್ರಮಾನುಗತಿಯನ್ನು ಲಕ್ಷದಲ್ಲಿಟ್ಟುಕೊಂಡು, ಏಳು ಎಂಬ ಸಂಖ್ಯೆಯೇ ಮುಕ್ತಾಯ ಮತ್ತು ಸಮರ್ಪಕತೆಯನ್ನು ತಿಳಿಸುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಂಡು, ನಾವು ಸ್ವಾಭಾವಿಕವಾಗಿ ಏಳನೆಯ ಯುಗಾರಂಭ ದಿನವು ಅದರ ಹಿಂದಿನವುಗಳಿಗಿಂತ ಹೆಚ್ಚು ಅದ್ಭುತವಾಗಿದ್ದಿರಬಹುದೆಂದು ನಾವು ನಿರೀಕ್ಷಿಸುತ್ತೇವೆ. ಅದೇ ರೀತಿಯಾಗಿ ನಮಗೆ ಕಂಡುಬರುತ್ತದೆ. ಅದರ ಮುಖ್ಯ ಭಾಗವಾದ ಕಾಲದ ಬಗ್ಗೆ – "ಕಾಲವು ಪರಿಪೂರ್ಣವಾದಾಗ" ಎಂಬುದು ದೇವರು ತನ್ನ ಎಲ್ಲಾ ಕೆಲಸಗಳಿಂದ ಏಳನೆಯ ದಿನ ವಿಶ್ರಾಂತಿ ಪಡೆದನು ಎಂಬ ಸರ್ವೇ ಸಾಮಾನ್ಯ ಸಂಗತಿಯೊಂದಿಗೆ ತಿಳುವಳಿಕೆಯೆಂಬ ನಮ್ಮ ಮಾನಸಿಕ ಕಣ್ಣುಗಳಿಗೆ ತಟ್ಟುತ್ತದೆ. ಒಬ್ಬ ಕೆಲಸಗಾರನು ಒಂದು ಕಟ್ಟಡಕ್ಕಾಗಿ ಎಲ್ಲಾ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡ ಮೇಲೆ ತನ್ನ ಮೂಲ ಉದ್ದೇಶವನ್ನು ಪೂರ್ತಿಗೊಳಿಸದೆ ಆ ಕೆಲಸದಿಂದ ಹಿಂತೆಗೆದನೋ ಎಂಬಂತೆ ದೇವರು ತನ್ನ ಸೃಷ್ಟಿಕಾರ್ಯವು ಇನ್ನೇನು ಮುಗಿಯುವುದರಲ್ಲಿರುವಾಗ ವಿಶ್ರಾಂತಿ ಪಡೆದನೆಂದರೆ ಎಷ್ಟೋ ವಿಸ್ಮಯವಾಗುತ್ತದೆ !.

ಆದರೆ, ಯಾವಾಗ ನಾವು ಯೆಹೋವ ದೇವರು ತನ್ನ ವಿನ್ಯಾಸಗಳನ್ನು ಬೇರೊಂದು ರೀತಿಯಲ್ಲಿ ಇನ್ನೂ ಉತ್ತಮವಾಗಿ ಮುಂದುವರಿಸಿಕೊಂಡು ಹೋಗಬಹುದೆಂಬುದನ್ನು ತನ್ನ ಜ್ಞಾನದಲ್ಲಿ ಮನಗಂಡನೋ ಆ ಕೂಡಲೇ ಆತನು ತನ್ನ ಸೃಷ್ಟಿಕಾರ್ಯವನ್ನು ಮುಂದುವರಿಸದೆ ಅದನ್ನು ಅಲ್ಲಿಗೇ ನಿಲ್ಲಿಸಿದನೆಂದು ಗ್ರಹಿಸುವಾಗ ಸಮಸ್ತ ಸಂಗತಿಗಳು ನಮ್ಮ ಮುಂದೆ ಭವ್ಯವಾಗಿ ತೆರೆದುಕೊಳ್ಳುತ್ತವೆ. ದೇವರು ತನ್ನ ಸೃಷ್ಟಿಯಾದ ಆದಾಮನಿಗೆ ಸಂಪೂರ್ಣವಾದ ಇಚ್ಛಾ ಸ್ವಾತಂತ್ರ್ಯವನ್ನು ನೀಡುವುದು ಒಳ್ಳೇದೆಂದು ನೆನಸಿದನು. ಆದರೆ ಆತನು ಅದನ್ನು ದುರುಪಯೋಗಪಡಿಸಿಕೊಂಡು ಪಾಪವೆಂಬ ಶೋಧನೆಗೊಳಗಾಗಿ ಅದರ ನ್ಯಾಯಸಮ್ಮತವಾದ ಮರಣಕ್ಕೆ ಪಾತ್ರನಾದನು – ಇದು 6000 ವರ್ಷಗಳ ಅವಧಿಯ ದುಷ್ಟ ವಾತಾವರಣದಲ್ಲಿ ಅಪರಾಧಿಯಂತೆ ಕಾದಾಡುವುದು, ಮರಣ ಹೊಂದುವುದೂ ಆಗಿತ್ತು. ದೇವರು ಮನುಷ್ಯನನ್ನು ಈ ರೀತಿಯಾಗಿ ಒಬ್ಬ ಅಪರಾಧಿಯಂತೆ ಬಿಟ್ಟುಬಿಟ್ಟು ಆತನು ಲೋಕದ ಒಂದು ಭಾಗವನ್ನು ವಶಪಡಿಸಿಕೊಳ್ಳುವಂತೆ ಮಾಡಿ ಅದನ್ನು ಪೂರ್ಣವಾಗಿ ಮೊದಲೇ ತಿಳಿಸಿದ ಪರದೈಸಿನ ಸ್ಥಿತಿಗೆ ತರುವಂತೆ ಮಾಡುವುದು ಮನುಷ್ಯನಿಗೆ ಆ ಸ್ಥಿತಿಯಲ್ಲಿ ಲಾಭದಾಯಕವೆಂದು ನೆನೆಸಿದನು. ಮಾನವನು ದೇವರ ನೈತಿಕತೆಯ ಹಿಂದೆ ಅಡಗಿರುವ ಸೂತ್ರಗಳನ್ನು ಮತ್ತು ಪಾಪದ ಮಿತಿಮೀರಿಕೆಯನ್ನು ಅರಿತುಕೊಳ್ಳಲು ಮತ್ತು ಆ ಮೂಲಕ ಸೂಕ್ತ ಸಮಯದಲ್ಲಿ ದೇವರ ಕೃಪೆಯು ಈ ಲೋಕಕ್ಕೆ ಒದಗಿಬರುವ ಸಿದ್ಧತೆಗಳನ್ನು ನಡೆಸುವಂತೆ ಮಾನವನು ಗ್ರಹಿಸಿಕೊಳ್ಳಲು ಇದು ಯಥೋಚಿತವಾದೀತೆಂದು ನೆನಸಿದನು.

ಹೀಗಿದ್ದಾಗ್ಯೂ, ಯೆಹೋವ ದೇವರು ತನ್ನ ಸೃಷ್ಟಿಕಾರ್ಯವನ್ನು ಸ್ಥಗಿತಗೊಳಿಸಿದ ಮುಖ್ಯ ಕಾರಣವೇನೆಂದರೆ, ನಿಸ್ಸಂದೇಹವಾಗಿ ಬೇರೆ ಯಾವ ಕ್ರಮವೂ ಮಾಡಲಾಗದ ರೀತಿಯಲ್ಲಿ ದೈವಿಕ ಲಕ್ಷಣಗಳು ಪ್ರದರ್ಶನಗೊಳ್ಳುವಂತೆ ಅದು ತಾನೇ ಪಡೆದುಕೊಂಡಿರುವ ಏಕಪುತ್ರನು, ಮಗನಿಗೆ ಮಾತ್ರವಲ್ಲ ತಂದೆಗೂ ಮಹಿಮೆಯುಂಟುಮಾಡುವ ರೀತಿಯಲ್ಲಿ ನೆರವೇರಲಿ ಎಂಬುದೇ. ಇದು ತನ್ನ ಮಗನನ್ನು ಮಾನವನ ವಿಮೋಚನೆಗಾಗಿ ಸಮರ್ಪಿಸಿದ್ದು ದೇವರ ನ್ಯಾಯದ ಪ್ರದರ್ಶನ ಮಾತ್ರವಾಗಿರದೆ ಇದು ಯಾವರೀತಿಯಲ್ಲಿಯೂ "ಪಾಪದ ಸಂಬಳ ಮರಣ' ಎಂಬ ಶಾಸನವನ್ನು ಉಲ್ಲಂಘಿಸದೆ, ಅದೇ ಸಮಯದಲ್ಲಿ ಬಿದ್ದು ಹೋದವರ ಉದ್ಧಾರಕ್ಕಾಗಿ ತನ್ನ ಸ್ವಂತ ಮಗನನ್ನು ಮರಣಕ್ಕೆ ಒಪ್ಪಿಸಿಕೊಡುವ ಮಟ್ಟಿನ ದೇವರ ಪ್ರೀತಿ–ಕರುಣೆಗಳನ್ನು ಸಹ ಪ್ರಕಟಿಸುವುದಾಗಿದೆ. ಪೂರ್ಣಗೊಂಡಾಗ ದೇವರ ಜ್ಞಾನ ಮತ್ತು ಶಕ್ತಿಗಳು ಸಹಾ ಸಿದ್ಧತೆಯ ಪ್ರತಿಯೊಂದು ಲಕ್ಷಣಗಳಲ್ಲಿಯೂ ಎದ್ದು ಕಾಣುತ್ತವೆ.

ತಂದೆಯು ತನ್ನ ಸೃಷ್ಟಿಕಾರ್ಯವನ್ನು ಪೂರ್ಣಗೊಳಿಸದೆ ನಿಲ್ಲಿಸಿದ್ದು, ಮಗನು ಈ ಯುಗದಲ್ಲಿ ತನ್ನ ಪ್ರತಿದಾನದ ಮೂಲಕ ಅದನ್ನು ಸಾವಿರ ವರ್ಷದ ಆಳ್ವಿಕೆಯಲ್ಲಿ ಸಮಸ್ತವನ್ನೂ ಸರಿಪಡಿಸುವ ಪ್ರಕ್ರಿಯೆಯ ಮೂಲಕ ಮುಂದುವರೆಸಿಕೊಂಡು ಹೋಗಲೆಂಬುದಾಗಿ ಸಲಹೆ ಮಾಡಿದಲ್ಲಿ ಅದು ಈ ಹಿಂದಿನ ಸೃಷ್ಟಿಯ ಕ್ರಿಯೆಗಿಂತ ಬೇರೆಯಾದುದಲ್ಲ. ಇವೆಲ್ಲವೂ ತಂದೆಯ

ಮತ್ತು ಮಗನ ಮೂಲಕವೇ ಮಾಡಲ್ಪಟ್ಟದ್ದು – ಉಂಟು ಮಾಡಿರುವುದರಲ್ಲಿ ಒಂದಾದರೂ ಆತನಿಲ್ಲದೆ ಉಂಟಾಗಲಿಲ್ಲ. ಆದರೆ ನಾವು ಇದಕ್ಕೆ "ಇಲ್ಲ'ವೆಂಬ ಉತ್ತರ ನೀಡುತ್ತೇವೆ. ಈ ಏಳನೆಯ ಯುಗಾರಂಭ ದಿನವು ಮಗನ ಪ್ರತಿದಾನದಲ್ಲಿ ಮುಗಿದು ಲೌಕಿಕ ಸಮರ್ಪಕತೆಯನ್ನು ಉಂಟು ಮಾಡುವಲ್ಲಿ ಈ ಕಾರ್ಯದ ಸಂಬಂಧವು ಆತನ ಯಾವುದೇ ಹಿಂದಿನ ಕಾರ್ಯಗಳಿಗಿಂತ ಸಂಪೂರ್ಣವಾಗಿ ಬೇರೆಯಾಗಿದೆ. ಈ ಹಿಂದಿನ ಎಲ್ಲಾ ಕಾರ್ಯಗಳಲ್ಲಿ ಮಗನು ಶಕ್ತಿ ಮತ್ತು ಚೈತನ್ಯಗಳು ತನ್ನದಲ್ಲವೆಂಬಂತೆ ಯೆಹೋವನ ಪರವಾಗಿ ಕಾರ್ಯವೆಸಗಿದನು. ಆದರೆ, ಈ ವೈಭವಯುತ ಕಾರ್ಯವು ಬರುವಾಗ ಆತನು ತನ್ನದೇ ಆದ ಶಕ್ತಿ ಮತ್ತು ಅಧಿಕಾರಗಳನ್ನು ಉಪಯೋಗಿಸುತ್ತಾನೆ ಇದು ಆತನಿಗೆ 34 ವರ್ಷಕಾಲದ ಅಪಮಾನ, ಹಿಂಸೆ ಮತ್ತು ಶಿಲುಬೆಗೇರುವಲ್ಲಿ ಮುಕ್ತಾಯಗೊಂಡ ಈಡುಬಲಿ ಇತ್ಯಾದಿಗಳನ್ನು ಅನುಭವಿಸುವಂತೆ ಮಾಡಿತು. ತಂದೆಯ ವಿವೇಕ ಮತ್ತು ಪ್ರೀತಿಯು ಆತನಿಗಾಗಿ ಯೋಜಿಸಿದ್ದ ಆ ವ್ಯವಹಾರದಿಂದ ಆತನು ಈ ಲೋಕವನ್ನೇ ಕೊಂಡುಕೊಂಡನು–ತಂದೆಯಾದ ಆದಾಮನನ್ನು ಮತ್ತು ಆತನ ಎಲ್ಲಾ ಸಂತತಿಯನ್ನೂ, ಆತನ ಎಲ್ಲಾ ಆಸ್ತಿಯನ್ನೂ, – ಈ ಲೋಕದಲ್ಲಿ – ದೇವರ ಸ್ವರೂಪದಲ್ಲಿ ಉಂಟುಮಾಡಲಟ್ಟಿದ್ದ ಅದರ ದೊರೆತನ, ಎಲ್ಲಾ ಬಿರುದುಗಳೂ, ಇವೆಲ್ಲವನ್ನೂ ಕೊಂಡುಕೊಂಡನು. ತಂದೆಯು ತನ್ನ ಒಬ್ಬನೇ ಮಗನನ್ನು ಗೌರವಿಸಲು ಹರ್ಷಪಟ್ಟು ಅದಕ್ಕಾಗಿ ಯೋಜನೆ ಹಾಕಿಕೊಂಡು, ಮಗನು ಮಹಿಮೆ ಹೊಂದಿಕೊಳ್ಳುವಂತೆ ಮತ್ತು ತನ್ನಿಂದ ಮನ್ನಣೆ ಹೊಂದಿಕೊಳ್ಳುವಂತೆ ತನ್ನ ಎಲ್ಲಾ ಕ್ರಿಯಾತ್ಮಕ ಕಾರ್ಯವನ್ನು ಸ್ಥಗಿತಗೊಳಿಸಿದನು ಅಥವಾ ಅದರಿಂದ ವಿಶ್ರಾಂತಿ ಪಡಕೊಂಡನು.

ದೇವರು ವಿಶ್ರಾಂತಿ ಪಡೆದದ್ದು, ಆತನು ಬಳಲಿ ಹೋಗಿ ಅದರಿಂದ ಚೇತರಿಸಿಕೊಳ್ಳುವ ಸಲುವಾಗಿ ಎಂಬ ಅರ್ಥವಲ್ಲ, ಆದರೆ ಆತನು ತನ್ನ ಸೃಷ್ಟಿಕಾರ್ಯವನ್ನು ಸ್ಥಗಿತಗೊಳಿಸಿದನು ಎಂಬ ಅರ್ಥದಲ್ಲಿ. ಆತನು ಈ ಲೋಕದ ತನ್ನ ಅತ್ಯಮೂಲ್ಯ ಸೃಷ್ಟಿಯ ನಾಶನ ಮತ್ತು ಪತನವನ್ನು ಮುಂದಾಗಿ ನೋಡಿದ್ದನು, ಆದರೂ ಮರಣ ಶಿಕ್ಷೆಯನ್ನು ತಡೆಹಿಡಿಯುವತ್ತ ತನ್ನ ಶಕ್ತಿಯನ್ನು ಪ್ರಯೋಗಿಸಲಿಲ್ಲ ಮತ್ತು ಯಾವುದೇ ಸರಿಪಡಿಸುವಿಕೆಯ ಪ್ರಕ್ರಿಯೆಗಳನ್ನು ಪ್ರಾರಂಭಿಸಲಿಲ್ಲ. ನಿಜವಾಗಿ, ಆತನು ಜಾರಿಗೆ ತಂದ ಕಾನೂನಿನ ಪ್ರಕಾರ, ಆದಾಮ ಮತ್ತು ಆತನ ಸಂತತಿಯವರಿಗೆ ಈಡು ಕೊಡುವ ಹೊರತಾಗಿ, ಹಾಗೆಯೇ ಕರುಣೆ ತೋರಿಸುವುದರ ಮೂಲಕ, ಕ್ಷಮಾದಾನ ನೀಡುವುದಕ್ಕೆ ಪ್ರತಿಬಂಧವಿತ್ತು. ಶಿಕ್ಷೆಯು ಮಿತಿಯಿಲ್ಲದ ನಿತ್ಯ ಮರಣವಾಗಿತ್ತು – ನಿತ್ಯವಾದ ನಾಶನ – ದೇವರು ಸುಳ್ಳು ಹೇಳುವ ಸಾಧ್ಯತೆ ಇರಲಿಲ್ಲ ಮತ್ತು ಸರ್ವಶ್ರೇಷ್ಠ ನ್ಯಾಯಾಧಿಪತಿಯು ತಾನೇ ವಿಧಿಸಿದ ತೀರ್ಪನ್ನು ಬದಲಾಯಿಸಲು ಸಾಧ್ಯವಿದ್ದಿಲ್ಲ. ಅದೇ ರೀತಿಯಲ್ಲಿ ಸೃಷ್ಟಿಕರ್ತನು ನೇರವಾಗಿ ಜನಾಂಗಗಳ ಪುನಃ ಸ್ಥಾಪಕನಾಗಲು, ಅಥವಾ ಯಾವುದೇ ಅರ್ಥದಲ್ಲಿ ಅಥವಾ ಅಂಶದಲ್ಲಿ, ಯಾವುದೇ ರೀತಿಯಲ್ಲಿ ತನ್ನ ಕ್ರಿಯಾತ್ಮಕ ಕಾರ್ಯಗಳನ್ನು ಶಾಪಗ್ರಸ್ತ ಮಾನವನ ಆಸ್ತಿಯಾದ ಈ ಲೋಕದಲ್ಲಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಿಲ್ಲ.

ಈ ಪ್ರಕಾರ ಯೆಹೋವ ದೇವರು ಕಾಲಮಾನದ ಸ್ವಂತ ಮಹಾಯೋಜನೆಯಲ್ಲಿ ತನ್ನ ಭರವಸವನ್ನು ವ್ಯಕ್ತಪಡಿಸಿದನು ಇದನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸುವಂತೆ ತನ್ನ ಒಬ್ಬನೇ ಮಗನಿಗೆ ವಹಿಸಿಕೊಟ್ಟನು. ಮಗನಲ್ಲಿ ತಂದೆಗಿರುವ ಈ ರೀತಿಯಾದ ಭರವಸೆಯನ್ನು ಅಪೋಸ್ತಲರು ಉಪಯೋಗಿಸಿಕೊಂಡು ನಮ್ಮ ವಿಶ್ವಾಸವು ಯಾವರೀತಿಯಲ್ಲಿ ಅಭಿಷಕ್ತನನ್ನು ಗ್ರಹಿಸಿಕೊಂಡು ನಾವುಗಳು ಸಹ ನಮಗಾಗಿ, ನಮ್ಮ ಪ್ರೀತಿಯ ಸ್ನೇಹಿತರುಗಳಿಗಾಗಿ, ಸಾಮಾನ್ಯವಾಗಿ ಮಾನವ ಜೀವಿಯ ಈ ಲೋಕಕ್ಕಾಗಿ ಆತನ ಎಲ್ಲಾ ಆಸಕ್ತಿಗಳಲ್ಲಿ, ಕಾಳಜಿಗಳಲ್ಲಿ ಭರವಸವಿಡಬಹುದೆಂಬುದಕ್ಕೆ ಉದಾಹರಣೆ ಯನ್ನಾಗಿ ಮಾಡಿಕೊಂಡರು. ಅಪೋಸ್ತಲರ ಹೇಳಿಕೆಯೇನೆಂದರೆ "ನಂಬಿರುವ ನಾವಾದರೋ ಆ ವಿಶ್ರಾಂತಿಯಲ್ಲಿ ಸೇರುತ್ತಲೇ ಇದ್ದೇವೆ. ದೇವರು ತನ್ನ ಕೆಲಸ ಗಳನ್ನು ಮುಗಿಸಿ ಹೇಗೆ ವಿಶ್ರಮಿಸಿಕೊಂಡನೋ ಹಾಗೆಯೇ ಆತನ ವಿಶ್ರಾಂತಿಯಲ್ಲಿ ಸೇರಿರುವವನು ಸಹಾ ತನ್ನ ಕೆಲಸಗಳನ್ನು ಮುಗಿಸಿ ವಿಶ್ರಮಿಸಿಕೊಂಡಿದ್ದಾನೆ" (ಇಬ್ರಿ. 4:3,10). ದೇವರಿಗಿರುವಂತೆ ಕ್ರಿಸ್ತನು ನಮ್ಮ ಸಂತತಿಯ ಬಗ್ಗೆ ಯೆಹೋವನ ಎಲ್ಲಾ ಮಹಾ ಯೋಜನೆಗಳನ್ನೂ ಕಾರ್ಯಗತಗೊಳಿಸಲು ಸಮರ್ಥ ನಾಗಿದ್ದಾನೆಂಬ ದೃಢವಿಶ್ವಾಸ ಎಲ್ಲಾ ನಂಬಿಗಸ್ತರಿಗೂ ಇರುತ್ತದೆ. ಆದುದರಿಂದ ವಿಶ್ರಾಂತಿಯು ದೈಹಿಕ ಬಳಲಿಕೆಯು ಕಾರಣದಿಂದಲ್ಲ, ಆದರೆ ಸಂಗತಿಗಳನ್ನು ಕ್ರಿಸ್ತನವಶದಿಂದ ತಪ್ಪಿಸಬಹುದೆಂಬ ಮತ್ತು ಫಲಿತಾಂಶಗಳನ್ನು ಬೇರೆ ರೀತಿಯಾಗಿ ಪಡಕೊಳ್ಳಲು ಪ್ರಯತ್ನಿಸಬಹುದೆಂಬ ಕಾಳಜಿ ಮತ್ತು ಯೋಚನೆ ಕಾರಣ.

ನಮ್ಮ ಸೃಷ್ಟಿಕರ್ತನು ವಿಶ್ರಾಂತಿ ಪಡೆಯುತ್ತಿದ್ದರೆ ಅಥವಾ ತಾನು ಸೃಷ್ಟಿಸಿದ ಜೀವಿಗಳ ಪತನದಲ್ಲಿ ಅವರ ಉಪಶಮನಕ್ಕೆ ಬರಲು ನಿಲ್ಲಿಸಿರುವಲ್ಲಿ ಅಥವಾ ಯಾವುದೇ ಮಟ್ಟದ ಉದಾಸೀನತೆ ಅಥವಾ ನಿರ್ಲಕ್ಷತೆಗಳು ಕಂಡು ಬಂದಲ್ಲಿ ಅದು ನಿಜವಾಗಿಯೂ ಹಾಗಲ್ಲ. ಅದು ಕೇವಲ ಒಬ್ಬ ಮಧ್ಯಸ್ಥನ ಮುಖಾಂತರ ಮಾನವರ ಸಹಾಯಕ್ಕಾಗಿ ಮಾಡಿದ ಅತ್ಯಂತ ವಿವೇಕಯುತ ಮತ್ತು ಉತ್ತಮವಾದ ಕೆಲಸ. ಸಮಸ್ತವನ್ನೂ ಸರಿಪಡಿಸುವ ಕಾರ್ಯವು ಬೇಗನೇ ಪ್ರಾರಂಭವಾಗಬೇಕೆಂದು ಸಲಹೆ ಮಾಡಿದಲ್ಲಿ ನಾವು ಪಾಪ ಮತ್ತು ಮರಣದ ಅವಧಿಯು 6000 ವರ್ಷಗಳೆಂದು ಹೇಳುತ್ತೇವೆ. ಇದು ಜನಾಂಗಗಳು ಉಂಟಾಗಿ ಪ್ರಪಂಚವನ್ನು ತುಂಬಿಕೊಳ್ಳಲು ಸಾಕಾಗದು, ಪಾಪದ ಅತಿರೇಕದ ಬಗ್ಗೆ ಮತ್ತು ಅದರ ಸಂಬಳವಾದ ಮರಣದ ಬಗ್ಗೆ ಎಲ್ಲರಿಗೂ ತಿಳಿಹೇಳಲೂ ಸಾಲದು. ಮಾತ್ರವಲ್ಲದೆ, ಮಾನವರು ತಮ್ಮ ಉನ್ನತಿಗಾಗಿ ತಮ್ಮದೇ ಸ್ವಂತ ಪ್ರಯತ್ನಗಳನ್ನು ಮಾಡಿ ಅದರ ನಿಷ್ಪ್ರಯೋಜಕತೆಯನ್ನು ಕಂಡಕೊಳ್ಳಲೂ ಇದು ಸಾಲದು. ಪಾಪವೆಂಬ ರೋಗವು ಪ್ರವೇಶಿಸಿ 4000 ವರ್ಷಗಳೇ ಗತಿಸಿದ್ದರೂ ನಮ್ಮ ಕರ್ತನು ತನ್ನ ಪ್ರಥಮ ಆಗಮನದಲ್ಲಿ ಪ್ರಪಂಚವನ್ನು ಬಿಡುಗಡೆಗೊಳಿಸಿ (ಕೊಂಡುಕೊಂಡು) ಆ ಮೂಲಕ ನ್ಯಾಯವಾದ, ಪಕ್ಷಪಾತವಿಲ್ಲದ ಹಕ್ಕನ್ನು ಹೊಂದಿದವನಾಗಿ ಮತ್ತೊಮ್ಮೆ ಬಂದು ಆತನ ಕೃಪೆಯನ್ನು ಅಂಗೀಕರಿಸಿಕೊಂಡವರೆಲ್ಲರನ್ನೂ ಆಶೀರ್ವದಿಸಿ, ಅವರನ್ನು ಉದ್ಧರಿಸಿ ಪುನರ್ಜೀವಗೊಳಿಸುವಂತೆ, "ಕಾಲವು

ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು" ಎಂದು ದೇವರವಾಕ್ಯದಲ್ಲಿ ತಿಳಿಸಲಾಗಿದೆ. ನಿಜವಾಗಿಯೂ, ನಾವು ನೋಡುವಂತೆ, ಆಯ್ಕೆಗೊಂಡ ಸಭೆಯು ಸೇರಿಕೊಂಡು ವಿಮೋಚಕನೊಂದಿಗೆ ಲೋಕವನ್ನು ಆಶೀರ್ವದಿಸುವ ಮಹಾಯುಗದ ಕಾರ್ಯದಲ್ಲಿ ಪಾಲುಗೊಳ್ಳುವ ದೇವರ ಉದ್ದೇಶದ ನೆರವೇರಿಕೆಗೆ ಕಾಲವು ಇನ್ನೂ ಪಕ್ವವಾಗಿರಲಿಲ್ಲ ಇದಕ್ಕಾಗಿ ಈ ಸಮಗ್ರ ಸುವಾರ್ತಾಯುಗದ ಅಗತ್ಯವಿದೆಯೆಂದು ದೇವರು ಮೊದಲೇ ತಿಳಿದಿದ್ದನು ಮತ್ತು ಇದರ ನೆರವೇರಿಕೆಗಾಗಿ ತನ್ನ ಮಗನನ್ನು ಸಾಕಷ್ಟು ಮುಂಚಿತವಾಗಿ ವಿಮೋಚನಾ ಕಾರ್ಯಕ್ಕಾಗಿ ಕಳುಹಿಸಿಕೊಟ್ಟಿರುತ್ತಾನೆ.

## ಭೂಮಿಗೆ ಸಂಬಂಧಿಸಿದಂತೆ ಸೃಷ್ಟಿ ಮತ್ತು ಚೈತನ್ಯದಾಯಕ ಚಟುವಟಿಕೆಗಳಿಂದ ದೈವಿಕ ಸ್ಥಗಿತ ಅಥವ ವಿಶ್ರಾಂತಿಯ ಕಾಲ :

## THE PERIOD OF DIVINE CESSATION OR REST, FROM CREATIVE AND ENERGIZING ACTIVITY IN CONNECTION WITH THE EARTH

ಯೆಹೋವ ದೇವರು ತನ್ನ ಸೃಷ್ಟಿಯ ಕಾರ್ಯಗಳನ್ನು ಸ್ಥಗಿತಗೊಳಿಸಿ ಅವುಗಳಿಂದ ವಿಶ್ರಾಂತಿ ಪಡೆಯುತ್ತಿರುವುದು ಎಷ್ಟು ಕಾಲದಿಂದ? ನಾವಿದಕ್ಕೆ ಆರು ಸಾವಿರ ವರ್ಷಕ್ಕೂ ಸ್ವಲ್ಪ ಮೊದಲಿನಿಂದ ಎಂದು ಹೇಳುತ್ತೇವೆ. ಇನ್ನೂ ಎಷ್ಟು ಕಾಲ ಆತನ ಈ ಸ್ಥಗಿತ ಅಥವಾ ವಿಶ್ರಾಂತಿ ಮುಂದುವರೆಯುತ್ತದೆ? ನಾವು ಅದು ಈ ಯುಗವೆಲ್ಲ ಮುಂದುವರೆಯುವುದು – ಮಹಾ ಮಧ್ಯಸ್ಥನ 1000 ವರ್ಷಗಳ ಆಡಳಿತ ಕಾಲ ಮುಗಿಯುವವರೆಗೆ. ದೇವರು ಈ ಲೋಕಾದಿಯಿಂದ ತನ್ನ ಎಲ್ಲಾ ಪವಿತ್ರ ಪ್ರವಾದಿಗಳ ಬಾಯಿಂದ ನುಡಿಸಿದ ಸಮಸ್ತವನ್ನೂ ಸರಿಪಡಿಸುವ ಕಾಲದವರೆಗೆ (ಅ.ಕೃ.3:21). ಈ ಯೋಜನೆಯ ಹೊರಕಾರ್ಯಗಳನ್ನು ನೆರವೇರಿಸುವುದರಲ್ಲಿ, ಮತ್ತು ಅವುಗಳನ್ನು ಕ್ರಿಸ್ತನ ಕೈಗೆ ಒಪ್ಪಿಸಿಕೊಟ್ಟು ವಿಶ್ರಾಂತಿ ಪಡೆಯುವುದಕ್ಕೆ ನಡಿಸಿದ ಭರವಸೆಯು ನ್ಯಾಯ ಸಮ್ಮತವಾಗಿದೆಯೆಂದು ರುಜುವಾತಾಯಿತೋ? ಇದರ ಸಮಾಪ್ತಿಯು ತೃಪ್ತಿಕರವಾಗಿದ್ದೀತೋ? ಆದಿಯಿಂದ ಅಂತ್ಯದವರೆಗೆ ಎಲ್ಲವನ್ನೂ ಬಲ್ಲಾತನಾದ ಯೆಹೋವ ದೇವರು ಇದಾಗುವುದೆಂದು ನಮಗೆ ನಿಶ್ಚಯಪಡಿಸುತ್ತಾನೆ. ಯಾರ ಮೌಲ್ಯದ ಮೇಲೆ ಆತುಕೊಂಡು ಈ ಯೋಜನೆಯು ಕಾರ್ಯಗತವಾಗುತ್ತಿದೆಯೋ ಆ ಮಗನು "ತನ್ನ ಆತ್ಮವು ಅನುಭವಿಸಿದ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು" (ಯೆಶಾ.53:11). ಹೌದು, ತಮ್ಮ ವಿಶ್ವಾಸವನ್ನು ವಿಮೋಚಕನ ಹಿಂದಿನ ಮತ್ತು ಮುಂದಿನ ಕಾರ್ಯಗಳ ಮೇಲೆ ಹಾಕಿರುವ ಎಲ್ಲಾ ವಿಶ್ವಾಸಿಗಳೂ ಸಂಪೂರ್ಣವಾದ ನಂಬಿಕೆಯ ಭರವಸೆಯನ್ನು ಪಡಕೊಳ್ಳುವರು –"ದೇವರು ತನ್ನನ್ನು ಪ್ರೀತಿಸುವವರಿಗಾಗಿ ವಿಶೇಷವಾಗಿ ತನ್ನ ಸಭೆಗಾಗಿ ಕೂಡಿಟ್ಟ ಸಂಗತಿಗಳನ್ನು ಕಣ್ಣು ಕಾಣಲಿಲ್ಲ, ಕಿವಿಯು ಕೇಳಲಿಲ್ಲ, ಅಥವಾ ಅದು ಮನುಷ್ಯನ ಹೃದಯವನ್ನು ಹೊಕ್ಕಲಿಲ್ಲ"; ಮಾತ್ರವಲ್ಲದೆ,ಅಳತೆಯಿಲ್ಲದ ಆತನ ಪ್ರೀತಿ, ಕರುಣೆ, ಮತ್ತು ಆಯ್ಕೆಮಾಡದ ಲೋಕದವರಿಗಾಗಿ ಯುಗದ ಕೃಪಾ ದಿನದಲ್ಲಿ ದೇವರ ಪೂರ್ವ ಸಿದ್ಧತೆಗಳನ್ನು ಆತನ ಶರತ್ತುಗಳ ಮೇರೆಗೆ ನೀಡುವ ಪ್ರತಿದಾನದ ಆಶೀರ್ವಾದಗಳನ್ನು ಅಂಗೀಕರಿಸುವರು.

ಆರು ಸಾವಿರ ವರ್ಷಗಳ ಹಿಂದೆ, ಮತ್ತು ಒಂದು ಸಾವಿರ ವರ್ಷಗಳು ಮುಂದೆ ಹೀಗೆ ಯೆಹೋವನ ಏಳು ಸಾವಿರ ವರ್ಷಗಳ "ವಿಶ್ರಾಂತಿಯು" ನಮ್ಮನ್ನು ಮಗನ ಸಹಸ್ರ ವರ್ಷದ ಆಳ್ವಿಕೆಯ ಯುಗದ ಮುಕ್ತಾಯಕ್ಕೆ ಕೊಂಡೊಯ್ಯುತ್ತದೆ. ಯಾಕೆಂದರೆ ಆತನು ಆ ವೇಳೆಗೆ ಅದರ ಸಂಕಲ್ಪವನ್ನು ಒಪ್ಪಿಕೊಂಡವರ ಮತ್ತು ವಿಧೇಯರನ್ನು ದೇವರ ಸ್ವರೂಪಕ್ಕೆ ಪುನಃಸ್ಥಾಪಿಸಿ ಆತನ ಆಸ್ತಿಯಾಗಿ,ರಾಜ್ಯವಾಗಿ ಮಾನವನಡಿಯಲ್ಲಿ ಭೂಲೋಕದ ನಿಗ್ರಹ ಕಾರ್ಯಗಳನ್ನು ಮಾಡಿ ಮುಗಿಸಿರುತ್ತಾನೆ. ನಂತರ ತನ್ನ ಉದ್ದೇಶಗಳನ್ನು ನೆರವೇರಿಸಿದ ಮಧ್ಯಸ್ಥಿಕೆಯ ಸಿಂಹಾಸನ ಮತ್ತು ಆಡಳಿತವು ಮುಕ್ತಾಯಗೊಂಡು, ಭೂಲೋಕದ ಭ್ರಷ್ಟರನ್ನೆಲ್ಲಾ ನಾಶಗೊಳಿಸಿ ಮಗನು ತನ್ನ ತಂದೆಯೂ ದೇವರೂ ಆದಾತನಿಗೆ ಎಲ್ಲವನ್ನೂ ಒಪ್ಪಿಸಿಕೊಡುವನು "ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ".(ಮತ್ತಾ. 25:34, 1ಕೊರಿ.15:25–28) ಎಂದು ಬರೆದಿರುವಂತೆ ಅದು ಇಹಲೋಕದ ಸೃಷ್ಟಿ. * (ಗ್ರಂಥಶ್ರೇಣಿ –1: ಪುಟ–305; 5:ಪುಟ–469; 4:ಪುಟ–617, 644 ರಿಂದ 645.)

ಚರಿತ್ರೆಯಲ್ಲಿ ಮತ್ತು ಪ್ರವಾದನೆಗಳಲ್ಲಿ ಸ್ಪಷ್ಟವಾಗಿ ಗುರುತಿಸಲ್ಪಟ್ಟಿರುವ ಈ ಏಳನೆಯ ಯುಗಾರಂಭ ದಿನದ ಉದ್ದವು ನಮಗೆ ಯುಗಾರಂಭ ವಾರದ ಎಲ್ಲಾ ದಿನಗಳ ಉದ್ದದ ಬಗ್ಗೆ ಸುಳಿವು ನೀಡುತ್ತದೆ. 7 ಸಾರಿ 7000 ವರ್ಷಗಳು ಅಥವಾ ಅದು ಮುಗಿಯುವಾಗ 49 ಸಾವಿರ ವರ್ಷಗಳು ನಮಗೆ ಮಹಾ ಐವತ್ತನೆಯದಕ್ಕೆ ನಡೆಸುತ್ತದೆ ಮತ್ತು ಅದನ್ನು ಪರಿಚಯಿಸುತ್ತದೆ. ನಾವೀಗಾಗಲೇ ಅದು ಪ್ರಾಮುಖ್ಯವಾದುದೆಂದು ಸತ್ಯವೇದದಲ್ಲಿ ಗಮನಿಸಿದ್ದೇವೆ (ಸಂಪುಟ 2: ಅಧ್ಯಾಯ 6 ನ್ನು ನೋಡಿರಿ). ಯಾಕೆಂದರೆ ಇದರಲ್ಲಿ ದೈವಿಕ ಯೋಜನೆಯು ತನ್ನ ಪರಾಕಾಷ್ಟೆಗೆ ತಲಪುತ್ತದೆ. ಇಸ್ರಾಯೇಲ್ಯರ ಸಬ್ಬತ್ ದಿನವು 7x7= 49 ರಲ್ಲಿ ಉನ್ನತ ಸ್ಥಿತಿಗೇರಿ ಐವತ್ತಕ್ಕೆ ನಡಿಸಿ ಪಂಚಾಶತ್ತಮವನ್ನು ಪರಿಚಯಿಸುತ್ತದೆ. ಅವರ ಸಬ್ಬತ್ತಿನ ವರ್ಷಗಳು 7x7=49 ಮುಂದಿನ ಜೂಬಿಲಿ ವರ್ಷವನ್ನು ಅಂದರೆ ಇನ್ನೂ ವಿಶಾಲ ಕಾಲಚಕ್ರವಾದ 50 x 50 ನ್ನು ಪರಿಚಯಿಸುತ್ತದೆ. ಇದು ಈ ಯುಗದಲ್ಲಿ ಭೂಲೋಕದ ಮಹಾ ಜೂಬಿಲಿಯ ಗುರುತಾಗಿದೆ. ಈಗ, ಕಡೆಯದಾಗಿ ಭೂಮಿಯನ್ನು ಅದರ ಆರಂಭದಿಂದ ಸಮರ್ಪಕಗೊಳ್ಳುವವರೆಗಿನ ಏಳು ಬಾರಿ 7000 ಅಂದರೆ ಒಟ್ಟು 49 ಸಾವಿರ ವರ್ಷಗಳಂತೆ ಅಳೆದು ನಾವು ಸಬ್ಬತ್ ಅಥವಾ ಏಳು ದಿನಗಳ ಪದ್ಧತಿಯನ್ನು ಇನ್ನೂ ವಿಶಾಲವಾದ ಪ್ರಮಾಣದಲ್ಲಿ ಕಾಣುತ್ತೇವೆ. ಇದು ನಿಟ್ಟುಸಿರಾಗಲೀ, ಕಣ್ಣೀರಾಗಲೀ ಹೆಚ್ಚಿನ ನೋವಾಗಲೀ ಸಾವಾಗಲೀ ಇಲ್ಲದ ಒಂದು ಭವ್ಯವಾದ ಯುಗಾರಂಭವನ್ನು ನಮಗೆ ಪರಿಚಯಿಸುತ್ತದೆ. ಯಾಕೆಂದರೆ ಭೂಲೋಕ ಸಂಬಂಧಿತವಾದ ದೇವರ ಸೃಷ್ಟಿಕಾರ್ಯವು ಆ

ವೇಳೆಗೆ ಸಮಾಪ್ತಿಗೊಂಡಿರುತ್ತದೆ. ಆ ದಿನವನ್ನು ಜೂಬಿಲಿ ದಿನವೆಂದು ಗುರುತಿಸಿದರೆ ಆಶ್ಚರ್ಯಪಡಬೇಕಾಗಿಲ್ಲ!

ಭೂಲೋಕ ಸೃಷ್ಟಿಯ ಉದಯದಲ್ಲಿ ದೇವಕುಮಾರರೆಲ್ಲರೂ "ಆನಂದಘೋಷ" ಮಾಡಿದರು (ಯೋಬ. 38:7) ನಂತರ ಹಂತ ಹಂತವಾಗಿ ಅದರ ಅಭಿವೃದ್ಧಿಯನ್ನು ಕಂಡ ಮೇಲೆ ಕೊನೆಯಲ್ಲಿ ಅದರ ರಾಜನಾದ ಮನುಷ್ಯನು ದೇವರ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟನು. ನಂತರ, ಅವಿಧೇಯತೆಯಿಂದ ಪಾಪ ಮತ್ತು ಅವಸಾನ, ತಮ್ಮ ಮೂಲ ಸ್ವಾಸ್ತ್ಯವನ್ನು ಕಾಪಾಡಿಕೊಳ್ಳದೆ ಬಿದ್ದುಹೋದ ದೇವ ದೂತರುಗಳ ಭಯಾನಕ ಅನುಭವಗಳು, ಪಾಪ ಮತ್ತು ಮರಣದ ಆಳ್ವಿಕೆಯಲ್ಲಿ ಮಾನವರ ಸ್ವಾರ್ಥ ಮತ್ತು ರಕ್ತಮಯ ಚರಿತ್ರೆ ಇವುಗಳು ಬರುತ್ತವೆ. ನಂತರ ಜಯಪ್ರದವಾಗಿ ವಿಮೋಚನಾ ಕಾರ್ಯವು, ಯಜ್ಞದ ಮೂಲಕ ಅಭಿಷಕ್ತನ ಆಯ್ಕೆ (ಶಿರಸ್ಸು ಮತ್ತು ದೇಹ) ಮತ್ತು ಮೆಸ್ಸೀಯನ ಆಳ್ವಿಕೆ ಮತ್ತು ಆತನ ಮೂಲಕ ಲೋಕಾರಂಭದಿಂದ ತನ್ನ ವಾಕ್ಯಗಳಲ್ಲಿ ಹಾಗೂ ಪ್ರವಾದಿಗಳ ಮೂಲಕ ಮುಂತಿಳಿಸಿದಂತೆ ಎಲ್ಲಾ ಸಂಗತಿಗಳನ್ನು ಅದ್ಭುತ ರೀತಿಯಲ್ಲಿ ಪುನರ್‌ವಶಪಡಿಸಲಾಗುವುದು. ಯೆಹೋವನ ಎಲ್ಲಾ ಬುದ್ಧಿಜೀವಿಗಳೂ ದೇವರ ಪ್ರೀತಿಯನ್ನು ಮಾತ್ರವಲ್ಲದೆ ಆತನ ನ್ಯಾಯ, ಜ್ಞಾನ ಮತ್ತು ಶಕ್ತಿಯ ಉದ್ದ, ಅಗಲ ಮತ್ತು ಎತ್ತರಗಳನ್ನು ಕಂಡುಕೊಳ್ಳವಾಗ ಭೂಪರಲೋಕಗಳಲ್ಲಿ ಸಂಭ್ರಮ, ಸಡಗರಗಳುಂಟಾಗುವುದರಲ್ಲಿ ಆಶ್ಚರ್ಯವಿಲ್ಲ. ಖಂಡಿತವಾಗಿ ಭೂಲೋಕ ಪರಲೋಕಗಳಲ್ಲಿರುವ ದೇವರ ಎಲ್ಲಾ ಸೃಷ್ಟಿಗಳು ಆಗ ನೂತನ ಸಂಗೀತವೊಂದನ್ನು ಹೀಗೆ ಹಾಡುವರು :–

"ದೇವರಾದ ಕರ್ತನೇ, ಸರ್ವಶಕ್ತನೇ, ನಿನ್ನ ಕೃತ್ಯಗಳು ಮಹತ್ತಾದವುಗಳೂ ಆಶ್ಚರ್ಯಕರವಾದವುಗಳೂ ಆಗಿವೆ; ಕರ್ತನೇ, ನಿನ್ನ ನಾಮಕ್ಕೆ ಭಯಪಡದವರೂ ಅದನ್ನು ಘನವಾದುದೆಂದು ಒಪ್ಪಿಕೊಳ್ಳದವರೂ ಯಾರಾದರೂ ಇದ್ದಾರೋ?

ನೀನೊಬ್ಬನೇ ಪರಿಶುದ್ಧನು; ನಿನ್ನ ನೀತಿಯುಳ್ಳ ಕೃತ್ಯಗಳು ಪ್ರಕಾಶಕ್ಕೆ ಬಂದದರಿಂದ ಎಲ್ಲಾ ಜನಾಂಗಗಳೂ ಬಂದು ನಿನ್ನ ಸನ್ನಿಧಾನದಲ್ಲಿ ನಮಸ್ಕಾರ ಮಾಡುವರು" ( ಪ್ರಕಟನೆ 15:3–4)

"ಆಕಾಶ ಮಂಡಲವನ್ನು ಸೃಷ್ಟಿಸಿದ ಯೆಹೋವನ ಮಾತನ್ನು ಕೇಳಿರಿ; ಆತನೇ ದೇವರು, ಭೂಲೋಕವನ್ನು ನಿರ್ಮಿಸಿ ರೂಪಿಸಿ ಸ್ಥಾಪಿಸಿದನು; ಅದನ್ನು ಶೂನ್ಯ ಸ್ಥಾನವಾಗಿರಲೆಂದು ಸೃಷ್ಟಿಸದೆ ಜನ ನಿವಾಸಕ್ಕಾಗಿಯೇ ರೂಪಿಸಿದನು" (ಯೆಶಾ. 45:18)

ಇದಲ್ಲದೆ ಆಕಾಶದಲ್ಲಿಯೂ ಭೂಮಿಯ ಮೇಲೆಯೂ, ಭೂಮಿಯ ಕೆಳಗೂ ಸಮುದ್ರದ ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು ಅಂದರೆ ಭೂಮ್ಯಾಕಾಶ ಸಮುದ್ರಗಳೊಳಗೆ ಇರುವದೆಲ್ಲವೂ –
"ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ, ಮಾನ, ಪ್ರಭಾವಗಳು ಯುಗ ಯುಗಾಂತರಗಳಲ್ಲಿಯೂ ಇರಲಿ" ಎಂದು ಹೇಳುವುದನ್ನು ಕೇಳಿದೆನು. (ಪ್ರಕಟನೆ 5 : 13)

ಈ ಮೇಲಿನವುಗಳನ್ನು ಬರೆದಾಗಿನಿಂದ ಪ್ರೊ. G. Fredrick Wright D.D. LL.D ಯವರ ಲೇಖಣಿಯಿಂದ ಆದಿಕಾಂಡದ ಸೃಷ್ಟಿ ವಿವರಣೆಗಳ ಬಗ್ಗೆ ದಿನಾಂಕ 19ನೇ ನವೆಂಬರ್ 1902 ರಂದು ಬರೆದ ಈ ಮುಂದಿನ ಪ್ರಸ್ತಾವನೆಗಳನ್ನು ಸಹ ನಾವು ನೋಡಬಹುದಾಗಿದೆ :–

## ಆದಿಕಾಂಡದ ದಾಖಲೆ The Genesis Record

ಈ ಲೋಕ ಸೃಷ್ಟಿಯ ಬಗ್ಗೆ ಬರೆದ ಆದಿಕಾಂಡದ ಮೊದಲನೆಯ ಅಧ್ಯಾಯವು ಒಂದು ಅಸಮಾನ್ಯ ದಾಖಲೆಯಾಗಿದೆ. ಅದು ಎಷ್ಟರಮಟ್ಟಿಗೆ ಅಸಾಮಾನ್ಯ ವಾಗಿದೆಯೆಂದರೆ, ಮುಂದೆ ವೈಜ್ಞಾನಿಕ ಸಂಶೋಧನೆಯ ಸಂದರ್ಭ ಸಾಹಿತ್ಯ ದೃಷ್ಟಿಕೋನದ ನಿಮಿತ್ತ ಯಾವುದೇ ತಿಕ್ಕಾಟವಾಗದ ರೀತಿಯಲ್ಲಿ ಅದರಲ್ಲಿನ ಕೌಶಲ್ಯವು ಕಂಡುಬರುತ್ತದೆ. ಅದು ಹೊಂದಿರುವ ಪ್ರಭಾವವನ್ನು ಅಳೆದಲ್ಲಿ, ಇದಕ್ಕೆ ಹೋಲಿಸಬಹುದಾದ ಯಾವುದೇ ಸಾಹಿತ್ಯ ತುಣುಕು ಬೇರೆ ಎಲ್ಲಿಯೂ ಕಂಡುಬರದು. ಬಹು ದೇವತಾರಾಧನೆಯು ಸರ್ವೇಸಾಮಾನ್ಯವಾಗಿ ಮತ್ತು ವಿವರವಾಗಿ ಅಲ್ಲಗಳೆಯುವುದರ ಮೂಲಕ ಮತ್ತು ಭೂಮ್ಯಾಕಾಶಗಳನ್ನೂ, ಮತ್ತು ಅದರಲ್ಲಿರುವ ಹಾಗೂ ವಿಗ್ರಹಾರಾಧಕರು ಪೂಜಿಸುವ ಎಲ್ಲಾ ವಸ್ತುಗಳನ್ನೂ ಉಂಟು ಮಾಡಿದವನು ಇಸ್ರಾಯೇಲ್ಯರ ಅಮರನಾದ ದೇವರು ಮಾತ್ರನೇ ಎಂದು ದೃಢ ಪಡಿಸುವುದರ ಮೂಲಕ ದೈವತ್ವದ ಅನ್ಯೋನ್ಯತೆಯನ್ನು ಇದು ಒತ್ತಿ ಹೇಳುತ್ತದೆ.

ಬಹು ದೇವತಾ ಆರಾಧನೆ ಮತ್ತು ವಿಗ್ರಹಾರಾಧನೆಗಳ ಮೇಲೆ ಎಲ್ಲೆಡೆಗಳಲ್ಲಿ ಇದು ಸಾಧಿಸಿರುವ ಮೇಲುಗೈಯಲ್ಲಿ ಈ ಅಧ್ಯಾಯದ ಘನತೆಯು ಕಂಡುಬರುತ್ತದೆ. ಯಾರು ಈ ಅಧ್ಯಾಯವನ್ನು ಸತ್ಯ ಮತ್ತು ದೈವೀಕ ಪ್ರಕಟನೆಯೆಂದು ಅಂಗೀಕರಿಸಿದ್ದಾರೋ ಅಂತಹ ಜನಾಂಗಗಳು ಮಾತ್ರವೇ ದೇವರ ಅನ್ಯೋನ್ಯತೆ ಮತ್ತು ಎಲ್ಲವುಗಳ ಸೃಷ್ಟಿಕರ್ತನಾಗಿ ಆತನ ಆರಾಧನೆ ಇವುಗಳನ್ನು ಕಾಪಾಡಿಕೊಂಡು ಬಂದಿದ್ದಾರೆ.

## ವಿಜ್ಞಾನದೊಂದಿಗೆ ಅನುರೂಪವಾಗಿದೆ
## Compatible with Science

"ಅದೇ ಸಮಯದಲ್ಲಿ ವಿಜ್ಞಾನದ ಮುನ್ನಡೆಯು ದೇವರ ಪ್ರಕಟನೆಯಾದ ಭವ್ಯಗ್ರಂಥದ ಈ ಪ್ರಾಮುಖ್ಯ ಭಾಗದ ಬಗೆಗಿನ ನಮ್ಮ ಮೆಚ್ಚುಗೆಯನ್ನು ಕುಂಠಿತಗೊಳಿಸದೆ ಅದನ್ನು ಹೆಚ್ಚಿಸುವುದಾಗಿದೆ. ಅದರ ಯಥೇಚ್ಚವಾದ ಪದರಿನೊಳಗೆ ವಿಜ್ಞಾನದ ನಿಜವಾದ ಸಂಶೋಧನೆಗೆ ಆಶ್ರಯ ಕಂಡುಕೊಳ್ಳಲು ಅವಕಾಶವಿದೆ. ಇಂತಹ ಅಪೂರ್ವ ವಿವೇಕದೊಂದಿಗೆ, ಮುಂದೆ ವಿಜ್ಞಾನದೊಂದಿಗೆ ತಿಕ್ಕಾಟವುಂಟಾಗದ ರೀತಿಯಲ್ಲಿ ಇದರ ಭಾಷಾಶೈಲಿಯನ್ನು ಆರಿಸಿಕೊಳ್ಳಲಾಗಿದೆ. ಓರ್ವ ದೊಡ್ಡ ಭೂವಿಜ್ಞಾನಿಯಾದ ಯೇಲ್ ಕಾಲೇಜಿನ ಪ್ರೊ॥ ಜೆ. ಡಿ. ದಾನಾರವರು ಇದನ್ನು ಒಂದು ದೈವಪ್ರೇರಿತವೆಂಬ ಸಿದ್ಧಾಂತವಲ್ಲದೆ ಬೇರೇ ರೀತಿಯಲ್ಲಿ ವಿವರಿಸಲಾಗದು ಎಂದಿದ್ದಾರೆ.

ಪ್ರಾರಂಭದ ವಚನದಲ್ಲಿ, "ಭೂಮ್ಯಾಕಾಶಗಳು ಆರಂಭ ದಲ್ಲಿಯೇ ಸೃಷ್ಟಿಸಲ್ಪಟ್ಟವು' ಎಂದು ಮಾತ್ರ ಹೇಳಿದ್ದು ಈ ಅರಂಭವು ಯಾವಾಗ ಆಯಿತೆಂಬುದನ್ನು ಅದು ದೃಡಪಡಿಸದೆ ಮತ್ತು ಭೂಲೋಕದ ಪ್ರಾಯದ ಬಗ್ಗೆಯೂ ಏನನ್ನೂ ಹೇಳದೆ,

ಸೌರ ಪದ್ಧತಿಗಳ ಬಗ್ಗೆ ಉಂಟಾಗಿರುವ ಎಲ್ಲಾ ವಾಗ್ವಾದಗಳನ್ನೂ ಮುಚ್ಚಿಹಾಕುತ್ತದೆ. ಆದರೆ ಈ ಸೌರ ಪದ್ಧತಿಗೆ ಒಂದುಆರಂಭವಿದೆ ಎಂಬುದನ್ನು ವಿಜ್ಞಾನವು ಸ್ಪಷ್ಟವಾಗಿ ರುಜುವಾತುಪಡಿಸಿದೆ. ಇದಕ್ಕೆ ಯಾವ ದಿಟ್ಟ ವಿಕಾಸವಾದಿಯೂ ಪ್ರತಿಹೇಳಲಾರ. ಚೈತನ್ಯದ ಸಂರಕ್ಷಣೆ ಎಂಬ ಆಧುನಿಕ ಸಿದ್ಧಾಂತವು ಪ್ರಸ್ತುತ ಸಂಗತಿಗಳು ನಿರಂತರವಾಗಿ ಇದ್ದಿಲ್ಲವೆಂದು ದೃಢಪಡಿಸುತ್ತದೆ. ಸೂರ್ಯನು ತಂಪಾಗುತ್ತಿದ್ದಾನೆ. ಅದರ ಶಾಖವು ಕ್ಷಿಪ್ರವಾಗಿ ಪ್ರಸರಿಸುತ್ತಿದ್ದು, ಖಾಲಿ ಸ್ಥಳಗಳಲ್ಲಿ ಪ್ರಯೋಜನವಿಲ್ಲವಾಗಿದೆ. ಸಂಕ್ಷಿಪ್ತವಾಗಿ, ಸೌರಪದ್ಧತಿಯು ಕ್ಷೀಣಿಸುತ್ತಿದೆ. ಪ್ರಕ್ರಿಯೆಯು ಸದಾ ಮುಂದುವರೆದುಕೊಂಡು ಹೋಗಲು ಸಾಧ್ಯವಿಲ್ಲ ವೆಂಬುದು ಮಧ್ಯಾಹ್ನದ ಬೆಳಕಿನಷ್ಟೇ ಸತ್ಯ. ನಿಹಾರಿಕೆಯ ಪೂರ್ವ ಸಿದ್ಧಾಂತವು ಸಹಾ ಒಂದು ಪ್ರಾರಂಭವನ್ನು ಸೂಚಿಸುತ್ತದೆ. ಮನುಷ್ಯನ ಯಾವುದೇ ಬುದ್ಧಿ ಚಾತುರ್ಯವು ಸತ್ಯವೇದದ ಮೊದಲನೆಯ ವಚನದಲ್ಲಿ ನೀಡಿರುವ ಹೇಳಿಕೆಗಿಂತ ಉತ್ತಮವಾದುದನ್ನು ಯೋಚಿಸಲಾರದು."

## ಸೃಷ್ಟಿ ಕ್ರಿಯೆಯು ಕ್ರಮೇಣವಾದುದು
## Creation Was Gradual

ಆದಿಕಾಂಡದ ಮೊದಲನೆಯ ಅಧ್ಯಾಯವು ಪೂರ್ಣವಾಗಿ ಸೃಷ್ಟಿಪದ್ಧತಿಯ ಪ್ರಗತಿ ಸಿದ್ಧಾಂತದ ಮೇಲೆ ಆತು ಕೊಂಡಿದೆ. ಈ ವಿಶ್ವವು ತತ್‌ಕ್ಷಣದಲ್ಲಿ ಅಸ್ಥಿತ್ವಕ್ಕೆ ಬರಲಿಲ್ಲ. ಮೊದಲಿಗೆ ಇದು ಸಂಪೂರ್ಣಗೊಂಡಿರಲಿಲ್ಲ. ಪ್ರಾರಂಭದಲ್ಲಿ ನಮ್ಮ ಬಳಿ ಕೇವಲ ಭೌತಿಕ ಶಕ್ತಿಗಳು ಮಾತ್ರವೇ ಇದ್ದು, ಇವುಗಳನ್ನು ಕ್ರಮೇಣವಾಗಿ ವಿಸ್ತರಿಸುವ ಮೂಲಕ ಈ ಭವ್ಯ ವಾದ ರಚನೆಯನ್ನು ಮಾಡಬೇಕಾಯಿತು. ಇದನ್ನು ಒಬ್ಬರು ವಿಕಾಸದ ಪ್ರಕ್ರಿಯೆ* ಎಂದು ಕರೆಯಬಹುದು. ಒಬ್ಬರು "ದಿನ' (ಇಬ್ರಿಯದ "ಯೋಂ') ಎಂಬ ಪದವನ್ನು ಯಾವುದೇ ದೃಷ್ಟಿಕೋನದಿಂದ ನೋಡಲಿ ಅದು ಸಹಾ ಸಮಾನ ವಾದ ಸತ್ಯ. ಒಬ್ಬ ಸರ್ವಶಕ್ತನಾದ ದೇವರಿಗೆ ಈ ಲೋಕವನ್ನು, ಮತ್ತು ಅದರಲ್ಲಿರುವುದನ್ನು ಸೃಷ್ಟಿಸಲು, ಅದು 24 ಘಂಟೆಗಳ ದಿನವಾಗಿದ್ದರೂ ಆರು ದಿನಗಳು ಯಾಕೆ ಬೇಕು? ಇದಕ್ಕೆ ಉತ್ತರವೇನೆಂದರೆ, ಸೃಷ್ಟಿಕರ್ತನು ಸರ್ವಶಕ್ತಿ ಮಾತ್ರ ಹೊಂದಿರದೆ ಅಪರಿಮಿತವಾದ ಜ್ಞಾನವನ್ನು ಹೊಂದಿದ್ದು, "first the blade, then the ear, then the full corn in the ear" (ಮೊದಲು ಗರಿ, ನಂತರ ತೆನೆ, ಅನಂತರ ತೆನೆಯೊಳಗೆ ಪೂರ್ಣಧಾನ್ಯ) ಎಂಬ ರೀತಿಯಲ್ಲಿ ಆತನ ಸೃಷ್ಟಿಯ ಯಾವುದೇ ಪದ್ಧತಿಯನ್ನಾದರೂ ಆರಿಸಿಕೊಳ್ಳಲು ಸಮರ್ಥನಾಗಿದ್ದಾನೆ.

"ವಿಕಾಸತ್ವದಲ್ಲಿ ದೇವರ ಯೋಜನೆಯಿದೆ"* ಎಂಬುದು ಈ ಅಧ್ಯಾಯದ ಮೇಲ್ಮೈಯಲ್ಲೇ ಕಂಡುಬರುತ್ತದೆ. ವಸ್ತುಗಳ ಸಾಧಾರಣ ರೂಪವನ್ನು ಅಸ್ಥಿತ್ವಕ್ಕೆ ತರುವುದರ ಮೂಲಕ ಸೃಷ್ಟಿಯ ಪ್ರಾರಂಭವಾಗುತ್ತದೆ ಮತ್ತು ಅವುಗಳ ಮೇಲೆ ಬೆಳಕನ್ನುಂಟುಮಾಡುವ ರಭಸ ಮತ್ತು ಚೈತನ್ಯವನ್ನು ಹೇರುವುದರೊಂದಿಗೆ ಇದು ಮುಂದುವರೆಯುತ್ತದೆ. ವಸ್ತುಗಳ ಬೇರ್ಪಡಿಸುವಿಕೆಯು ಇದನ್ನು ಹಿಂಬಾಲಿಸುತ್ತದೆ ಮತ್ತು ಭೂಮಿ, ನೀರಿನಿಂದ ಪ್ರತ್ಯೇಕಗೊಂಡ ಭೂಭಾಗ, ವಾಯುವಿನಲ್ಲಿ ಅನಿಶ್ಚಿತ ಸ್ಥಿತಿಯಲ್ಲಿರುವ ನೀರು ಇವುಗಳನ್ನುಂಟುಮಾಡುತ್ತದೆ. ಯಾರಾದರೂ 'ಅಂತರಿಕ್ಷ' ಎಂಬ ಪದದ ಬಗ್ಗೆ ಆಕ್ಷೇಪಣೆ ಮಾಡಿ ಅದರ ಅನಲಂಕೃತವಾದ ಸಾಹಿತ್ಯಕ ಅರ್ಥವನ್ನು ಆಗ್ರಹಪಡಿಸಿದಲ್ಲಿ, ಅದು ಮುಂದಿನ ಹೇಳಿಕೆಯ ಪ್ರಕಾರ ನಿಷಿದ್ಧವೆನಿಸುತ್ತದೆ – " ದೇವರು – ಗುಂಪುಗುಂಪಾಗಿ ಚಲಿಸುವ ಜೀವಜಂತುಗಳು ನೀರಿನಲ್ಲಿ ತುಂಬಿಕೊಳ್ಳಲಿ; ಪಕ್ಷಿಗಳು ಭೂಮಿಯ ಮೇಲೆ ಅಂತರಿಕ್ಷದೊಳಗೆ ಹಾರಾಡಲಿ ಅಂದನು " (ಆದಿಕಾಂಡ 1: 20) .

## ಸಸ್ಯಗಳ ಸೃಷ್ಟಿ Creation of Vegetation

ಮೂರನೆಯ ಹಂತದಲ್ಲಿ ಭೂಮಿಯು ಸಸ್ಯಗಳಿಂದ ತುಂಬಿಕೊಳ್ಳುತ್ತದೆ. ಇದು ಜೀವಿಗಳ ಬಹು ಸಾಧಾರಣವಾದ ನಮೂನೆ. ಆದರೆ ಇದು ಒಮ್ಮೆ ಪ್ರವೇಶಿಸಿದ ಮೇಲೆ ತನ್ನೊಂದಿಗೆ ಸಮಗ್ರ ಸಸ್ಯ ಉತ್ಪನ್ನಗಳ ಸರಣಿಯನ್ನೇ ತರುವುದಾಗಿದೆ. ಗಿಡ ಮರಗಳ ಸೃಷ್ಟಿಯ ಬಗ್ಗೆ ಬಹಳ ವ್ಯಾಪಕವಾದ ಭಾಷೆಯಲ್ಲಿ ಸಾರಲಾಗಿದೆ. ಇದು ಸ್ವಯಂಪ್ರೇರಿತ ಸಂತಾನದವರ ವಿಪುಲವಾದ ವಿಚಾರಸರಣಿಗಳಿಗೆ ಆಸ್ಪದ ಮಾಡಿದೆ. ಇದು ಇಂದಿಗೂ ಜೀವಶಾಸ್ತ್ರದಲ್ಲಿ ಚರ್ಚಾ ವಿಷಯವಾಗಿದೆ. ಇದರ ಬೆಳಕಿನಲ್ಲಿ ಈ ಮಾತುಗಳು ಬಹಳಷ್ಟು ಪ್ರಾಮುಖ್ಯವಾಗಿವೆ – "ತರುವಾಯ ದೇವರು – ಭೂಮಿಯು ಹುಲ್ಲನ್ನೂ, ಬೀಜಬಿಡುವ ಕಾಯಿಪಲ್ಯದ ಗಿಡಗಳನ್ನೂ ಬೆಳೆಸಲಿ; ಮತ್ತು ಬೀಜವುಳ್ಳ ಹಣ್ಣಿನ ಮರಗಳನ್ನೂ ಇವುಗಳ ಜಾತಿಗನುಸಾರವಾಗಿ ಹುಟ್ಟಿಸಲಿ ಎಂದು ಹೇಳಿದನು; ಹಾಗೆಯೇ ಆಯಿತು. ಭೂಮಿಯಲ್ಲಿ ಹುಲ್ಲು ಬೆಳೆಯಿತು" (ಆದಿಕಾಂಡ 1 : 11–12)

ಅಭಿವೃದ್ಧಿಯ ಐದನೆಯ ದಿನವನ್ನು ಪರಿಚಯಿಸುವಾಗ ಇದೇ ರೀತಿಯ ಮುಖ್ಯವಾದ ಹೇಳಿಕೆಯನ್ನು ನಾವು ಕಾಣುತ್ತೇವೆ :–"ತರುವಾಯ ದೇವರು – ಗುಂಪುಗುಂಪಾಗಿ ಚಲಿಸುವ ಜೀವಜಂತುಗಳು ನೀರಿನಲ್ಲಿ ತುಂಬಿಕೊಳ್ಳಲಿ' (ಆದಿಕಾಂಡ 2 :20) ಮತ್ತು ಆರನೆಯ ದಿನದ ಸೃಷ್ಟಿಯನ್ನು ಪರಿಚಯಿಸುವಾಗಲೂ ಅದೇ ರೀತಿಯಲ್ಲಿ – ಭೂಮಿಯಿಂದ ಜೀವ ಜಂತುಗಳು ಉಂಟಾಗಲಿ.... ತಮ್ಮ ತಮ್ಮ ಜಾತಿಗನುಸಾರವಾಗಿ ಹುಟ್ಟಲಿ. (ಆದಿಕಾಂಡ 1 : 24)

ಒಬ್ಬನು ಈ ಮಾತುಗಳನ್ನು ಪದಗಳ ಆಧಾರದ ಮೇರೆಗೆ ಅರ್ಥೈಸುವುದಾದರೆ ವಿಜ್ಞಾನವಾಗಲೀ, ವೇದಾಂತವಾಗಲೀ ಅಂಗೀಕರಿಸದೇ ಇರುವುದನ್ನು ಪಡೆಯುತ್ತಾನೆ.

*ಈಗಾಗಲೇ ಸೂಚಿಸಿರುವಂತೆ, ಮನುಷ್ಯನ ಸೃಷ್ಟಿಯ ವಿಷಯದಲ್ಲಿ ಮಾತ್ರವೇ ವಿಕಾಸವಾದದೊಂದಿಗೆ ಸತ್ಯವೇದದ ತಿಕ್ಕಾಟವಿದೆ – ಈ ಒಂದು ಅಂಶವನ್ನು ಆಕ್ರಮಿಸಲು ಆ ವಿಚಾರ ಸರಣಿಯಿದೆ ಅಥವಾ ಪ್ರತಿಪಾದಕರನ್ನು ಕಂಡುಕೊಳ್ಳುತ್ತದೆ.

### ವಿಶೇಷವಾದ ಸೃಷ್ಟಿಕರ್ತ A Special Creator

ಮನುಷ್ಯನ ಸೃಷ್ಟಿಯ ವಿಷಯಕ್ಕೆ ಬರುವಾಗ, ಯಥಾರ್ಥವಾಗಿರುವ ಭಿನ್ನವಾದ ವಾಕ್ಸರಣಿಯನ್ನು ಉಪಯೋಗಿಸಲಾಗಿದೆ. "ದೇವರು ತನ್ನ ಸ್ವರೂಪದಲ್ಲಿ ಮನುಷ್ಯನನ್ನು ರೂಪಿಸಿ ಆತನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು" (ಆದಿಕಾಂಡ 2:7) ಎಂದು ಬರೆದದೆ. ಇದು ಎಷ್ಟರಮಟ್ಟಿಗೆ ಮಾನವ ಸೃಷ್ಟಿಯ ರೀತಿಯನ್ನು ಸೂಚಿಸಬಹುದು ಎಂಬುದನ್ನು ಈ ಸಮಯದಲ್ಲಿ ಪರಿಶೀಲಿಸುವ ಅಗತ್ಯವಿಲ್ಲ. ಆದರೆ, ಈ ಹೇಳಿಕೆಗಳು ಬೇರೆ ಪ್ರಾಣಿಗಳ ಸೃಷ್ಟಿಯೊಂದಿಗೆ ಹೋಲಿಸುವಾಗ ಮಾನವನಿಗಿತ್ತ ಉನ್ನತ ಘನತೆಗೆ ಅನುಗುಣವಾಗಿವೆ.

ಮಾನವನ ಗಮನಾರ್ಹ ಲಕ್ಷಣಗಳು ಇಲ್ಲಿ ಮತ್ತು ಮುಂದೆ ಬರುವ ಆತನ ಜೀವನ ಯಾತ್ರೆಯ ವರದಿಗಳಲ್ಲಿ ಬೆಳಕಿಗೆ ಬಂದಿವೆ. ಮಾನವನು ದೇವರ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟದ್ದು ಮಾತ್ರವಲ್ಲ, ಆತನನ್ನು ಪಶು ಪ್ರಾಣಿಗಳನ್ನು ಆಳಲು ಯೋಗ್ಯನನ್ನಾಗಿ ಮಾಡಿದ್ದಲ್ಲದೆ, ಅವುಗಳನ್ನು ಹೆಸರಿನಿಂದ ಕರೆಯುವಂತೆ ಆತನಿಗೆ ಮಾತನಾಡುವ ವರವನ್ನೂ ನೀಡಲಾಯಿತು. ಇದಲ್ಲದೆ ಆತನಿಗೆ ಸ್ವಾತಂತ್ರ್ಯವನ್ನು ನೀಡಿ, ಒಳ್ಳೆಯದರ ಕೆಟ್ಟದರ ಬೇಧವನ್ನು ಅರಿತುಕೊಳ್ಳುವಂತೆ – ಸಂಕ್ಷಿಪ್ತವಾಗಿ, ಆತನಿಗೆ ನೈತಿಕ ಸ್ವಭಾವವನ್ನು ನೀಡಲಾಗಿದ್ದು ಅದು ಆತನನ್ನು ಉನ್ನತ ಮಟ್ಟದಲ್ಲಿಟ್ಟಿತ್ತು. ಸೃಷ್ಟಿಯ ಬಗ್ಗೆ, ಹಾಸ್ಯಾಸ್ಪದ ಮತ್ತು ವಿಲಕ್ಷಣವಲ್ಲದ ಇನ್ನೂ ಅನೇಕ ಸಂಗತಿಗಳನ್ನು ನಮಗೆ ತಿಳಿಸಬಹುದಿತ್ತು. ಮತ್ತು ಈ ಅಲ್ಪವಾದುದರಿಂದ ನಮಗೆ ಆಧುನಿಕ ವಿಜ್ಞಾನದೊಂದಿಗೆ ಸಾಮರಸ್ಯ ಹೊಂದಲು ಯಾವುದೇ ಕಷ್ಟವಾದರೂ ಇವುಗಳು ದೈವಪ್ರೇರಣೆಯಿಂದಲೇ ನೀಡಲ್ಪಟ್ಟಿವೆ ಎಂಬುದಕ್ಕೆ ನಿದರ್ಶನವಾಗಿದೆ. ಮಿಲ್ಟನ್‌ಗೆ ಸಹಾ ಆತನ ಎಲ್ಲಾ ವಿದ್ಯೆ ಮತ್ತು ಈ ವಿವರಗಳ ಅನುಕೂಲತೆ ಗಳಿದ್ದರೂ, ಪ್ರಾಣಿ ಪ್ರಪಂಚದ ಬಗ್ಗೆ ತನ್ನ ಹಾಸ್ಯದ ಕಲ್ಪನೆಯನ್ನು ನಿಗ್ರಹಿಸಲಾಗಲಿಲ್ಲ. ದೇವರ ಪ್ರೇರಣೆಯೆಂಬ ಹಸ್ತವೇ ಆದಿಕಾಂಡದ ಮೊದಲನೆಯ ಅಧ್ಯಾಯದ ಲೇಖಕನನ್ನು ಸಹಾ ನಿಗ್ರಹಿಸಿರಬಹುದೋ?

### ಮಾನವನು ಸೃಷ್ಟಿಸಲ್ಪಟ್ಟನು, ವಿಕಾಸ ಹೊಂದಲಿಲ್ಲ Man Created, Not Evoluted

ಮಾನವನ ಮಿದುಳಿನ ಗಾತ್ರ ಹಾಗೂ ಬೆಳವಣಿಗೆಗೂ ಇನ್ನಿತರ ವಾನರ ಸಂಬಂಧಿ ಸಸ್ತನಿವರ್ಗಕ್ಕೆ ಸೇರಿದ ಪ್ರಾಣಿಗಳ ಗಾತ್ರ ಹಾಗೂ ಬೆಳವಣಿಗೆಗೂ ಬಹಳಷ್ಟು ವ್ಯತ್ಯಾಸವುಂಟು.

ಪ್ರಾಣಿದೇಹ ವಿಜ್ಞಾನದ ಪ್ರಕಾರವಾಗಿಯೂ, ಮನೋವಿಜ್ಞಾನದ ಪ್ರಕಾರವಾಗಿಯೂ ಮಾನವನು ತನ್ನ ವರ್ಗದ ಇತರ ಕೆಳಮಟ್ಟದ ಪ್ರಾಣಿಗಳಿಗಿಂತ ಇನ್ನೂ ಹೆಚ್ಚಾದ ರೀತಿಯಲ್ಲಿ ವ್ಯತ್ಯಾಸವುಳ್ಳವನಾಗಿದ್ದಾನೆ. ಆತನಿಗೆ ವ್ಯಾಕರಣಬದ್ಧವಾಗಿ ಮಾತನಾಡುವ ಶಕ್ತಿಯಿದೆ. ಆತನು ತನ್ನ ಭಾವನೆಗಳನ್ನು ವಾಕ್ಯಗಳಲ್ಲಿ ಅಣಿಮಾಡಬಹುದು, ಮತ್ತು ಇವುಗಳನ್ನು ತನ್ನ ಇಚ್ಛಾನುಸಾರವಾಗಿ ಹಾಳೆ ಅಥವಾ ಇನ್ನಿತರ ವಸ್ತುಗಳ ಮೇಲೆ ಬಿಂಬಿಸಬಹುದು. ಮಾನವನಿಗೆ ಸಂಗೀತದ ಸ್ವರಮೈತ್ರಿಯನ್ನು ಆಲಿಸುವ ಕಿವಿಗಳುಂಟು, ಬೇರೆ ಪ್ರಾಣಿಗಳಿಗೆ ಇದು ಇಲ್ಲ. ಇದು ಆತನ ಅದ್ಭುತವಾದ ಲಕ್ಷಣಗಳುಳ್ಳ ಆಲಿಸುವ ಅಂಗಗಳಲ್ಲಿರುವ ರಚನೆಯ ಸೂಕ್ಷ್ಮತೆಯನ್ನು ಒಳಗೊಂಡಿದೆ. ಆತನ ಬೌದ್ಧಿಕ ಗುಣಲಕ್ಷಣಗಳಲ್ಲಿ ವೈಜ್ಞಾನಿಕ ಅಥವಾ ಸಾಮಾನ್ಯ ಸೂತ್ರ ವಿಧಾನಗಳ ಮೇಲೆ ಆಧಾರಿತವಾದ ವಿವೇಚನಾ ಶಕ್ತಿಯು, ಇತರ ಪ್ರಾಣಿಗಳ ಬೌದ್ಧಿಕ ಸಾಮರ್ಥ್ಯಕ್ಕಿಂತ ಭಿನ್ನವಾಗಿದೆ.

Romanes ಎಂಬಾತನು ತನ್ನ ಶ್ರೇಷ್ಠ ಕೃತಿಯಾದ 'Mental Evolution' ನಲ್ಲಿ ತಾನು ಮಾನವನ ಬೌದ್ಧಿಕ ಸಾಮರ್ಥ್ಯದ ಎಲ್ಲಾ ಮೂಲತತ್ವಗಳನ್ನು ಕೆಳವರ್ಗದ ಪ್ರಾಣಿಗಳಲ್ಲಿ ಕಂಡುಕೊಂಡಿದ್ದೇನೆಂದು ತಿಳಿಸಿದ್ದಾನೆ. ಆದರೆ ಅವುಗಳು ಎಷ್ಟರಮಟ್ಟಿಗೆ ಸ್ಪಷ್ಟವಾದ ಮೂಲತತ್ವಗಳಾಗಿವೆ ಯೆಂದರೆ ಅವು ಮಾನವರ ಮತ್ತು ಪ್ರಾಣಿಗಳ ನಡುವಿನ ಬಿರುಕನ್ನು ಇದ್ದಂತೆಯೇ ನಿರಂತರವಾಗಿ ಬಿಟ್ಟುಬಿಡುವುದಾಗಿದೆ. ಪ್ರಾಣಿಗಳಲ್ಲಿ ಪ್ರದರ್ಶಿತಗೊಳ್ಳುವ ಎಲ್ಲಾ ಬುದ್ಧಿವಂತಿಕೆಗಳನ್ನು ಕೂಡಿಸಿಕೊಂಡು ಆತನು ಅವುಗಳೆಲ್ಲವನ್ನು ಒಂದುಗೂಡಿಸಿದಲ್ಲಿ ಹದಿನೈದು ತಿಂಗಳ ಮಗುವಿನಲ್ಲಿ ಇರುವಷ್ಟು ಬುದ್ಧಿವಂತಿಕೆ ಆಗಬಹುದೆಂದು ಹೇಳುತ್ತಾನೆ. ಆದರೆ, ಈ ಬುದ್ಧಿವಂತಿಕೆಯು ಯಾವುದೇ ಏಕೈಕ ಪ್ರಾಣಿಯಲ್ಲಿಲ್ಲ, ಒಂದು ಜಾತಿಯು ಒಂದರಲ್ಲಿ ಮುಂದಿರಬಹುದು, ಮತ್ತೊಂದು ಮತ್ತೊಂದರಲ್ಲಿ ಹಿಂದಿರಬಹುದು.

### ವಿವೇಚನಾ ಶಕ್ತಿಯು ಮತ್ತು ಸಹಜ ಪ್ರವೃತ್ತಿಯು Reason Versus Instinct

ನಾಯಿಗೆ ವಾಸನೆ ಕಂಡುಹಿಡಿಯುವಷ್ಟು ಚುರುಕುತನವಿದ್ದರೂ, ಅದಕ್ಕೆ ಭೂವಿಜ್ಞಾನವನ್ನು ಕಲಿಸುವುದರಿಂದ ಯಾವ ಪ್ರಯೋಜನವೂ ಆಗದು. ಅಂತೆಯೇ ಹದ್ದಿನ ಕಣ್ಣುಗಳಲ್ಲಿ ತೀಕ್ಷ್ಣವಾದ ದೃಷ್ಟಿಶಕ್ತಿಯಿದ್ದರೂ ಖಗೋಳ ಶಾಸ್ತ್ರ ಕಲಿಯುವಲ್ಲಿ ಅದಕ್ಕೆ ಅದು ಯಾವ ಉಪಯೋಗವೂ ಇಲ್ಲ. ಒಬ್ಬನು ನಾಯಿಗೆ ಹಿಮನದಿಗೆ ಸಂಬಂದಿಸಿದ ಮಂಜು ಟೊಪ್ಪಿಗೆಯ ಬಗ್ಗೆ ಕಲಿಸಲು ನಡಿಸಲಾರ. ಯಾಕೆಂದರೆ, ಅದಕ್ಕೆ ಸಂಯುಕ್ತ ಸಂಸ್ಥಾನದಲ್ಲಿನ ದೊಡ್ಡ ಬಂಡೆಗಳನ್ನು ಕೆನಡಾ ದಲ್ಲಿರುವ ಅದರ ಮೂಲ ಶಿಲಾಫಲಕದೊಂದಿಗೆ ಅಥವಾ ರಷ್ಯಾದ ಬಯಲಿನಲ್ಲಿರುವ ಕಡೆದ ಕಲ್ಲುಗಳನ್ನು, ಅವುಗಳು ಚಲಿಸುವ ಹಿಮದೊಂದಿಗೆ ಸುಲಿದುಕೊಂಡು ಬಂದ ಸ್ಕಾಂಡಿನೇವಿಯಾದ ಶಿಲಾಫಲಕದೊಂದಿಗೆ ಸೇರಿಸುವ ಅಲೋಚನಾ ಶಕ್ತಿ ಇಲ್ಲ. ಇಂತಹ ಊಹೆಗಳು ನಾಯಿ ಸ್ವಭಾವಕ್ಕೆ ಮೀರಿದ್ದು...

### ಧರ್ಮಕ್ಕೆ ಸಾಮರ್ಥ್ಯ Capacity for Religion

ಮಾನವನ ಮನಸ್ಸಿನ ಶ್ರೇಷ್ಠತೆಗೆ ಧಾರ್ಮಿಕ ಕಲ್ಪನೆಗಳನ್ನು ಸಾಹಿತ್ಯದ ಮೂಲಕ ಪಡಕೊಳ್ಳುವ ತನ್ನ ಸಾಮರ್ಥ್ಯಕ್ಕಿಂತ ಹೆಚ್ಚಾದುದೇನೂ ಹೊಳೆಯಲಿಲ್ಲ. ನಿಜವಾಗಿಯೂ, ಕೆಲವೊಂದು ಕಲಿತ ಹಂದಿಗಳು ಯಾವುದೋ ಪದ್ಧತಿಯ ಮೂಲಕ ಗುಂಪಾಗಿರುವ ಕಾಗದಗಳಿಂದ ಕೆಲವು ಅಕ್ಷರಗಳನ್ನು ಆಯ್ಕೆ

ಮಾಡಿ ಸಾಧಾರಣ ಪದಗಳ ಕಾಗುಣಿತವನ್ನು ಕಂಡುಹಿಡಿಯುವ ಅದ್ಭುತ ಪ್ರದರ್ಶನಗಳು ನಡೆಯುತ್ತವೆ. ಆದರೆ, ಯಾವುದೇ ಪ್ರಾಣಿಗಳಿಗೂ ಬುದ್ಧಿವಂತಿಕೆಯಿಂದ ಮಾತನಾಡಲು ಕಲಿಸಲು ಸಾಧ್ಯವಿಲ್ಲ. ಈ ಹೇಳಿಕೆಗೆ ಗಿಣಿಗಳೂ ಹೊರತಲ್ಲ, ಯಾಕೆಂದರೆ ಅದರ ಮಾತುಗಳು ಅದಕ್ಕೇ ಅರ್ಥವಾಗದ ರೀತಿಯಲ್ಲಿ ಕೇವಲ ಶಬ್ಧಗಳ ಪುನರುಚ್ಚಾರ ಮಾಡುತ್ತದೆ. ಒಂದು ಪ್ರಾಣಿಯನ್ನು ಓದಲು ಅಥವಾ ಬುದ್ಧಿಪೂರ್ವಕವಾಗಿ ಯಾವುದಾದರೂ ಉಪನ್ಯಾಸವನ್ನಾಗಲೀ ಪ್ರಸಂಗವನ್ನಾಗಲೀ ಕೇಳುವಂತೆ ಮಾಡುವುದು ಮತ್ತೂ ಸಾಧ್ಯವಿಲ್ಲ.

ಮತ್ತೊಂದೆಡೆ, ಬೇರೆ ರೀತಿಯ ಸಾಹಿತ್ಯವುಳ್ಳ ಗ್ರಂಥವಾದ ಸತ್ಯವೇದವು ಅತ್ಯುನ್ನತ ಮಟ್ಟದ ಸಂಗೀತದ ಸಾಲುಗಳನ್ನೂ, ಹಿಂದೆಂದೂ ಬರೆಯದ ವಾಕ್ಚಾತುರ್ಯವನ್ನು ಹೊಂದಿದ್ದು, ದೇವರ ಮತ್ತು ಭವಿಷ್ಯದ ಸಂಗತಿಗಳ ಬಗ್ಗೆ ಸದಾ ಮನಸ್ಸಿಗೆ ತೆಗೆದುಕೊಳ್ಳುವ ರೀತಿಯ ಅತ್ಯಂತ ಗಂಭೀರವಾದ ಹೇಳಿಕೆಗಳನ್ನು ನೀಡುವುದಾಗಿದ್ದು ಪ್ರಪಂಚದ ಹೆಚ್ಚು ಕಡಿಮೆ ಎಲ್ಲಾ ಭಾಷೆಗಳಿಗೂ ತರ್ಜುಮೆಗೊಂಡಿದ್ದು ಆ ಎಲ್ಲಾ ಭಾಷೆಗಳಲ್ಲಿಯೂ ಸೂಕ್ತವಾದ ಮಾತಿನ ಶೈಲಿಯನ್ನು ಪಡೆದು ಅದರ ಭಾವನೆಗಳನ್ನು ಪರಿಣಾಮಕರವಾದ ರೀತಿಯಲ್ಲಿ ತಿಳಿಸಬಲ್ಲದಾಗಿದೆ...

ಈ ರೀತಿಯಲ್ಲಿ, ಅತ್ಯುನ್ನತ ಮಟ್ಟದ ಬೌದ್ಧಿಕ ದೃಷ್ಟಿಕೋನದಿಂದ ನೋಡಿದಲ್ಲಿ ಪ್ರಾಣಿ ಸೃಷ್ಟಿಯಲ್ಲಿ ಮಾನವನ ಅಪೂರ್ವತೆಯು ಎದ್ದು ಕಾಣುತ್ತದೆ. ಬೌದ್ಧಿಕವಾಗಿ ಆತನು ತನ್ನ ಕಾಲಮೇಲೆ ತಾನೇ ನಿಲ್ಲುತ್ತಾನೆ. ಮಾನವನು ಸೇರಿರುವ ವೈಜ್ಞಾನಿಕ ಪ್ರಕಾರದ ಹೆಸರು "Homo" ಅಂದರೆ ಜಾತಿ "Homo Sapiens" . ಅದೊಂದು ಮಾನವ ವಿವೇಕದಿಂದ ಬಂಧಿಸಲ್ಪಟ್ಟ ಮಾನವ ಚೌಕಟ್ಟು...

ಸ್ವಾತಂತ್ರ್ಯವಾಗಿ ಸ್ವಾಭಾವಿಕ ಅಯ್ಕೆಯ ಬಗ್ಗೆ ಶೋಧನೆಗಳನ್ನು ನಡೆಸಿದ Alfred Russel Wallace ಎಂಬುವವರು ಅದನ್ನು ಡಾರ್ವಿನ್ನನ ಕಾಲದಲ್ಲಿಯೇ ಪ್ರಕಟಿಸಿದರು. ಅದರಲ್ಲಿ ಅವರು ಮಾನವನ ವಿವಿಧ ರೀತಿಯ ದೈಹಿಕ ವೈಚಿತ್ರತೆಗಳ ದೃಷ್ಟಾಂತಗಳನ್ನು ನೀಡಿದ್ದಾರೆ. ಇವುಗಳು ಸ್ವಾಭಾವಿಕ ಆಯ್ಕೆಗಳಿಂದ ಮಾತ್ರ ಬಂದಿರಲಿಕ್ಕಿಲ್ಲ, ಆದರೆ ಅದು ಒಂದು ಶ್ರೇಷ್ಟ ನಿರ್ದೇಶನಾ ಶಕ್ತಿಯ ಪಾರುಪತ್ಯದ ಕಡೆಗೆ ಪ್ರತಿಭಟಿಸಲಾಗದ ರೀತಿಯಲ್ಲಿ ಸೂಚಿಸುತ್ತದೆ.

## ವಸ್ತ್ರಗಳು ಮತ್ತು ಆಯುಧಗಳು
## Clothes and Tools

ಇವುಗಳಲ್ಲಿ ಆತನು ಮಾನವನಿಗೆ ಯಾವುದೇ ಪ್ರಕೃತಿದತ್ತವಾದ ಹೊದಿಕೆ ಇಲ್ಲದಿರುವುದನ್ನು ಎತ್ತಿ ಹೇಳುತ್ತಾನೆ. ಎಲ್ಲಾ ಪ್ರಾಣಿಗಳಲ್ಲಿ ಮನುಷ್ಯನು ಮಾತ್ರವೇ ಬಟ್ಟೆಗಳನ್ನು ಧರಿಸುತ್ತಾನೆ. ಆತನು ಗಿಡದಿಂದ ನೂಲನ್ನು ತೆಗೆದು ಹಾಸು ಕಂಬಳಿಯನ್ನಾಗಿ, ಅಥವಾ ಪ್ರಾಣಿಗಳ ಚರ್ಮವನ್ನು ಸುಲಿದು ತನ್ನ ನಗ್ನ ದೇಹವನ್ನು ತಂಪಾದ ವಾತಾವರಣದಿಂದ ರಕ್ಷಿಸಿಕೊಳ್ಳಲು ಉಪಯೋಗಿಸುತ್ತಾನೆ. ಹಕ್ಕಿಗಳಿಗೆ ಪುಕ್ಕಗಳಿವೆ, ಕುರಿಗಳಿಗೆ ಉಣ್ಣೆಯಿದೆ, ಇತರ ಪ್ರಾಣಿಗಳಿಗೆ ತಮ್ಮ ದೇಹವನ್ನು ರಕ್ಷಿಸಿಕೊಳ್ಳುವ ಮಟ್ಟಿನ ತುಪ್ಪುಳವಿದೆ. ಮಾನವನಿಗೆ ಮಾತ್ರ ಇದ್ಯಾವುದೂ ಇಲ್ಲ. ಆದರೆ ಅವುಗಳನ್ನು ಆತನು ತನ್ನ ಬುದ್ಧಿವಂತಿಕೆಯಿಂದ ತಯಾರಿಸಿಕೊಳ್ಳುತ್ತಾನೆ. ನಾವು ಸ್ವಲ್ಪ ಹೊತ್ತು ನಿಧಾನವಾಗಿ ಕುಳಿತು ಯೋಚಿಸದ ಹೊರತು ನಮಗೆ ಮನುಷ್ಯರು ತಮ್ಮ ಬಟ್ಟೆಗಳನ್ನು ಪಡಕೊಳ್ಳುವ ಪ್ರಯತ್ನದಲ್ಲಿ ಎಷ್ಟರಮಟ್ಟಿನ ಬುದ್ಧಿವಂತಿಕೆ ಅಡಕವಾಗಿದೆ ಎಂಬುದು ನಮಗೆ ತಿಳಿದು ಬರಲಿಕ್ಕಿಲ್ಲ. ಇತರ ಪ್ರಾಣಿಗಳ ಚರ್ಮವನ್ನು ನಿಲುವಂಗಿಯಾಗಿ ಪಡಕೊಳ್ಳುವ ಸಾಧಾರಣ ವಿಷಯದಲ್ಲಿಯೂ ಆತನು ಪೂರ್ವಭಾವಿಯಾಗಿ ಓರ್ವ ಆಯುಧ ಸಂಶೋಧಕನಾಗುವುದು ಅನಿವಾರ್ಯವಾಯಿತು. ಯಾವುದೇ ಪ್ರಾಣಿಯ ಚರ್ಮವನ್ನೂ ಕೆಲವು ರೀತಿಯ ಚಾಕುವಿಲ್ಲದೆ ಸುಲಿಯಲಾಗದು.

ಇದು "ಆಯುಧ ಉಪಯೋಗಿಸುವ ಪ್ರಾಣಿ' ಎಂಬ ಮಾನವನ ಮತ್ತೊಂದು ಉತ್ತಮವಾದ ಅರ್ಥವಿವರಣೆಗೆ ನಮ್ಮನ್ನು ನಡೆಸುತ್ತದೆ. ಆಯುಧವನ್ನು ಉಪಯೋಗಿಸುವ ಹತ್ತಿರದ ಸಮೀಪಿಸುವಿಕೆಯನ್ನು ನಾವು ಆನೆ ಮತ್ತು ಮಂಗಗಳಲ್ಲಿ ಕಾಣಬಹುದು. ಆನೆಯು ತನ್ನ ಸೊಂಡಿಲಿನಿಂದ ಪೊದೆಯೊಳಗೆ ತೂರಿಸಿ ತಾನು ಒಳಹೊಕ್ಕಲು ಸ್ಥಳಮಾಡಿಕೊಳ್ಳುತ್ತದೆ. ಮಂಗವು ಬಾಗಿಲಿನಿಂದ ಇಣುಕಲು ಒಂದು ಕೋಲನ್ನು ಉಪಯೋಗಿಸುವುದು ತಿಳಿದಿದೆ. ಆದರೆ ಯಾವುದೇ ಪ್ರಾಣಿಗೆ ಆಯುಧವನ್ನು ರೂಪಿಸಲು ತಿಳಿಯದು, ಆದರೆ ಯಾವುದೇ ಪಂಗಡಕ್ಕೆ ಸೇರಿದ ಮನುಷ್ಯನಾದರೂ ಬಹಳ ಕುತೂಹಲ ಕಾರಿಯಾದ ಮತ್ತು ತೊಡಕಾದ ಆಯುಧವನ್ನು ರೂಪಿಸುವ ಬುದ್ಧಿವಂತಿಕೆಯಲ್ಲಿ ಕಡಿಮೆ ಇಲ್ಲ.

ಅತ್ಯಂತ ಕೆಳಮಟ್ಟದ ಜನಾಂಗದವರ ಸಣ್ಣ ದೋಣಿಗಳು ಸಹಾ ಬಹು ಪ್ರಾವೀಣ್ಯತೆಯಿಂದ ಮಾಡಲಾಗಿದ್ದು ಅವರ ಅಗತ್ಯತೆಗಳಿಗೆ ತಕ್ಕಂತೆ ಸಮರ್ಪಕವಾಗಿ ಹೊಂದಿಸಿ ಕೊಳ್ಳಲಾಗುತ್ತದೆ. ಕೆತ್ತಿದ ಚಕಮಕಿ ಕಲ್ಲಿನ ಉಪಕರಣವೂ ದೂರ ದೃಷ್ಟಿಯುಳ್ಳ ಒಲವಿನ ಪಾಲನೆಯನ್ನು ಮತ್ತು ಅದನ್ನು ಕೆತ್ತಲು ಹೆಚ್ಚಿನ ಕೌಶಲ್ಯದ ಅವಶ್ಯಕತೆಯನ್ನು ತೊಡಗಿಸಿಕೊಂಡಿರುತ್ತದೆ. ಅನಾಗರೀಕ ಜನಾಂಗಗಳು ತಮ್ಮ ಇಚ್ಛೆಯಂತೆ ಬೆಂಕಿಯನ್ನು ಕಲ್ಲುಗಳ ತಿಕ್ಕಾಟದ ಮೂಲಕ ಪಡಕೊಳ್ಳಲು ಪ್ರಯೋಗಿಸಿದ ಚತುರತೆಯ ಪದ್ಧತಿಯು ನಾಗರೀಕರಿಗೆ ಖ್ಯಾತಿಯನ್ನು ತಂದು ಕೊಟ್ಟಿದೆ. ಅದೇ ಸಮಯದಲ್ಲಿ ಧನಸ್ಸು, ಕವಣೆ ಮತ್ತು ತಿರುಗುಬಾಣ ಮುಂತಾದುವುಗಳ ಪ್ರಯೋಗವು ಮಾನವನ ಮೇಲ್ಮಟ್ಟದ ಸೃಷ್ಟಿಸುವ ಶಕ್ತಿಯನ್ನು ತೋರಿಸಿಕೊಡುತ್ತದೆ. ಇದರೊಂದಿಗೆ ಬೇರೆ ಯಾವ ಪ್ರಾಣಿ ಜೀವಿಗಳನ್ನು ಹೋಲಿಸುವಂತಿಲ್ಲ.

## ಸಂಗೀತದ ಸಾಮರ್ಥ್ಯ Capacity for Music

ಇದಲ್ಲದೆ, Wallace ಎಂಬಾತನು ಸ್ವಾಭಾವಿಕ ಆಯ್ಕೆಯಿಂದ ಉಂಟುಮಾಡಬಹುದಾದ ಯಾವುದಕ್ಕೂ ಹೆಚ್ಚಾಗಿ ಮಾನವ ಸ್ವರವನ್ನು ಎತ್ತಿಹಿಡಿಯುತ್ತಾನೆ. ಮಂಗಗಳ ಆತ್ಮದಲ್ಲಿ ಸಂಗೀತವಿಲ್ಲ ಮತ್ತು ಅವುಗಳ ಸ್ವರದಲ್ಲಿ ಸಂಗೀತದ ಶಕ್ತಿಯಿಲ್ಲ. ಆದರೆ, ಕೆಳದರ್ಜೆಯ ಮಾನವ ಜನಾಂಗಗಳಲ್ಲಿಯೂ

ಇವೆರಡೂ ಇರುತ್ತವೆ. "ಜಾನಪದ ಸಂಗೀತಗಳು" ಬಹುದೊಡ್ಡ ಮೂಲ ಸ್ಥಾನದಂತಿದ್ದು ನಮ್ಮ ಶ್ರೇಷ್ಠ ಸಂಗೀತ ರಚನಕಾರರು ತಮ್ಮ ಸ್ಫೂರ್ತಿಗಾಗಿ ಅವನ್ನು ಅರಸಿಕೊಂಡು ಹೋಗುತ್ತಾರೆ. ದಿವಂಗತ Theodore F. Seward ಎಂಬುವರು ತಾವು ನಕಲು ಮಾಡಿದ ನಿಗ್ರೋ ತೋಟ ಬೆಳೆಗಾರರ ಹಾಡುಗಳ ಬಗ್ಗೆ ವ್ಯಾಖ್ಯಾನಿಸುತ್ತಾ ಅವುಗಳು ತಮ್ಮ ತಮ್ಮ ಸ್ವರಮೈತ್ರಿ ಮತ್ತು ಸ್ವರದಿಂದ ಸ್ವರಕ್ಕೆ ಹಂತ ಹಂತವಾಗಿ ಪ್ರಗತಿಯಲ್ಲಿ ಅವುಗಳೆಲ್ಲವು ರಾಗ ಸಂಯೋಜನೆಯ ವೈಜ್ಞಾನಿಕ ನಿಯಮಗಳಿಗೆ ಅನುಗುಣವಾಗಿವೆ ಎಂದು ಹೇಳಿದ್ದಾರೆ. ಪೂರ್ಣ ವೃದ್ಧಿಹೊಂದಿದ ಮಾನವನಿಗೆ ಈ ಸಂಗೀತ ಸಾಮರ್ಥ್ಯದ ಅನುಕೂಲತೆಗಳು ಎಷ್ಟೇ ಇರಲಿ ಅವುಗಳು ವಾನರಗಳುಳ್ಳ ಕೆಳದರ್ಜೆಯ ಪ್ರಾಣಿಗಳಿಗೆ ಯಾವುದೇ ರೀತಿಯಲ್ಲಿ ಅನುಕೂಲಕರವಾಗಿದೆಯೆಂದು ಊಹಿಸುವಂತಿಲ್ಲ. ಈ ವಾನರರನ್ನು ಆಕರ್ಷಿಸುವ ಸಂಗೀತ ಸ್ವರವು ಪುರುಷ ಅಥವಾ ಸ್ತ್ರೀಯನ್ನು ಆಕರ್ಷಿಸುವುದರ ಕೇವಲ ಒಂದು ರೀತಿಯ ಬಲಹೀನ ಹೋಲಿಕೆಯಾಗಿದೆ.

ಪುನಃ, ಮಾನವ ಮಿದುಳಿನ ಗಾತ್ರವು ಮಾನವನ ಕೆಳಗಿನ ಎಲ್ಲಾ ಉನ್ನತ ಪ್ರಾಣಿ ಸೃಷ್ಟಿಗಳಿಗೆ ಯಾವುದೇ ರೀತಿಯಲ್ಲಿ ಸಮತಟ್ಟಾಗಿರುವುದಿಲ್ಲ ಮತ್ತು ಮಾನವನ ಬುದ್ದಿವಂತಿಕೆ ಇಲ್ಲವಾದಲ್ಲಿ ಇದೊಂದು ರೀತಿಯಲ್ಲಿ ತೊಡಕೇ ಹೊರತು ಸಹಾಯಕವಲ್ಲ. ಆದುದರಿಂದ ಇವೆರಡೂ ಒಂದೇ ಸಮಯದಲ್ಲಿ ಉತ್ಪನ್ನವಾಗಿದ್ದು ಸ್ವಾಭಾವಿಕ ಆಯ್ಕೆಯು ಅವನ್ನು ಸ್ವಾಧೀನ ಪಡಿಸಿಕೊಂಡು ಕಾಪಾಡಿ ಅಭಿವೃದ್ಧಿ ಪಡಿಸಿಕೊಂಡಿದೆ...

ಹಿಂಗಾಲಿನ ಹೆಬ್ಬೆಟ್ಟು ಒಂದು ದೊಡ್ಡ ಹೆಬ್ಬೆರಳಾಗಿ ಮಾರ್ಪಾಟಾಗಿದ್ದು ಅವುಗಳಿಂದ ವಸ್ತುಗಳನ್ನು ಬಿಗಿಯಾಗಿ ಹಿಡುಕೊಳ್ಳಲು ಸಾಧ್ಯವಾಗದೆ, ಕೇವಲ ತಲೆಕೆಳಗಾಗಿ ನಡೆಯುವಾಗ ಮಾತ್ರ ಅವುಸಹಾಯಕವಾಗಿರುವುದು ವಾನರರಿಗೆ ಯಾವ ರೀತಿಯಲ್ಲಿ ಪ್ರಯೋಜನಕರವೆಂದು ಕಂಡುಕೊಳ್ಳುವುದು ಕಷ್ಟ. ವಾನರರ ಮುಂಗಾಲುಗಳನ್ನು ಚಿಕ್ಕದು ಮಾಡಿರುವುದು ಯಾವ ರೀತಿಯಲ್ಲಿ ಅವಕ್ಕೆ ಅನುಕೂಲವಾಗಿದೆ ಎಂದು ಕಂಡುಕೊಳ್ಳುವುದೂ ಕಷ್ಟ. ವಾನರರು ಎರಡು ಕಾಲುಗಳಿಂದ ಚಲಿಸಲು ತಮ್ಮನ್ನು ಮಿತಿಗೊಳಿಸುವ ಸೊಂಟದ ಮೂಳೆ ಮತ್ತು ಕತ್ತನ್ನು ಸರಿಪಡಿಸಿಕೊಳ್ಳಲು ಯಾವ ರೀತಿಯಲ್ಲಿ ಈ ಬದಲಾವಣೆಗಳು ಸಹಾಯಕವಾದೀತೆಂದು ಕಂಡುಕೊಳ್ಳುವುದೂ ಕಷ್ಟ.

ಈ ಎಲ್ಲಾ ಕಷ್ಟಗಳ ನಿಮಿತ್ತ ಮಾನವನು ಸ್ವಾಭಾವಿಕ ಅಯ್ಕೆಯ ಮೂಲಕ ಹುಟ್ಟಿಬಂದನೆಂದೂ, ಇದೊಂದು ರೀತಿಯ ಕ್ರಮೇಣ ಪ್ರಕ್ರಿಯೆ ಹಾಗೂ ಈ ಬದಲಾವಣೆಗಳು ಇಂದ್ರಿಯ ಗ್ರಹಿಕೆಯಾಗದ ಮಟ್ಟದಲ್ಲಿ ಸುವ್ಯವಸ್ಥಿತ ಮಾನವನ ಸಮಗ್ರತೆಗೆ ನಡೆಸುತ್ತದೆ ಎಂದು ಒತ್ತಾಯ ಪೂರ್ವಕವಾಗಿ ಊಹಿಸುವ ಕಷ್ಟವೂ ನಮ್ಮಲ್ಲಿ ಹೆಚ್ಚುತ್ತದೆ. ಯಾಕೆಂದರೆ ಇವುಗಳು ಪ್ರಥಮಾವಸ್ಥೆಯಲ್ಲಿ ಯಾವ ರೀತಿಯಲ್ಲಿಯೂ ಉಪಯೋಗಕಾರಿ ಬದಲಾವಣೆಗಳೆಂದು ಕಂಡುಬರುವುದಿಲ್ಲ. ಉಪಯೋಗಕರವಾಗಿದ್ದರೆ ಅವುಗಳನ್ನು ಗಮನಿಸಬಹುದಿತ್ತು ಮತ್ತು ಮಾನಸಿಕ ಹಾಗೂ ದೈಹಿಕ ಬದಲಾವಣೆಗಳನ್ನು ಯಾವುದಾದರೂ ಪೂರ್ವ ಸ್ಥಾಪಿತ ಹೊಂದಿಕೆಯೊಂದಿಗೆ ಸಂಬಂಧಿಸಬಹುದಿತ್ತು.

ಮಾನವನ ಉತ್ಪತ್ತಿಯ ಬಗ್ಗೆ ಇರುವ ರಹಸ್ಯವು ಡಾರ್ವಿನ್ನನ ಸಿದ್ಧಾಂತಗಳಿಂದ, ಯಾವುದೇ ಮಟ್ಟದಲ್ಲಿ ಕಡಿಮೆ ಯಾಗಲಿಲ್ಲ ಮತ್ತು ವಿಕಾಸವಾದವು ಈ ಬಗ್ಗೆ ಯಾವ ಬೆಳಕನ್ನೂ ಚೆಲ್ಲಲಿಲ್ಲ. ಮಾನವನು ಈ ಭೂಮಿಯ ಮೇಲಿನ ಪ್ರಾಣಿಸಂಖ್ಯೆಗೆ ಸೇರಿಸಲ್ಪಟ್ಟ ಇತ್ತೀಚಿನ ಜಾತಿಯೆಂಬುದು ಭೂವೈಜ್ಞಾನಿಕವಾಗಿ ಅಂಗೀಕರಿಸಲ್ಪಟ್ಟಿದೆ. ಬೌದ್ಧಿಕವಾಗಿ ಆತನು ಎಲ್ಲಾ ಕೆಳವರ್ಗದ ಪ್ರಾಣಿಗಳಿಗಿಂತ ಎತ್ತರದಲ್ಲಿದ್ದಾನೆ. ಬೇರೆ ಯಾವ ಕಾರಣದ ಮೂಲಕವಲ್ಲವಾದರೂ ಈ ಕಾರಣದಿಂದ ಆತನು ತನ್ನದೇ ಆದ ರೀತಿಯಲ್ಲಿ ವರ್ಗೀಕರಿಸಲ್ಪಟ್ಟಿದ್ದಾನೆ, ಆತನು ಯಾವ ರೀತಿಯಲ್ಲಿ ಇಂತಹ ಉತ್ತಮ ಮಟ್ಟದ ಬುದ್ಧಿಶಕ್ತಿಗಳನ್ನು ಪಡೆದುಕೊಂಡನು ಮತ್ತು ಆತನ ದೇಹರಚನೆಯು ಇವುಗಳನ್ನು ಸಂಪೂರ್ಣವಾದ ರೀತಿಯಲ್ಲಿ ತನ್ನದಾಗಿಸಿಕೊಳ್ಳುವಲ್ಲಿ ಸಹಕಾರಿಯಾಗಿದೆ ಎಂಬುದೇ ಬಹುದೊಡ್ಡ ರಹಸ್ಯದ ಸಂಗತಿಯಾಗಿದೆ. ಇವುಗಳು ಕೆಳವರ್ಗದ ಬುದ್ಧಿಜೀವಿಗಳ ಮೂಲಕ ಯಾವುದೋ ಒಂದು ರೀತಿಯಲ್ಲಿ ಮೇಲೆತ್ತಲ್ಪಟ್ಟಿತೆಂದು ಹೇಳುವವರು, ಮಾನವನು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದು ಆತನ ಆತ್ಮವು ದೈವೀಕತ್ವದ ಒಳ ಉಸಿರಾಗಿದೆ ಎನ್ನುವ ಸತ್ಯವೇದದ ಸರಳ ಹೇಳಿಕೆಯನ್ನು ನಂಬುವವರಿಗಿಂತ ಹೆಚ್ಚಾದ ಆಧ್ಯಾತ್ಮಿಕ ಸಂಕಟಗಳನ್ನು ಎದುರಿಸಬೇಕಾಗುತ್ತದೆ. ■

* * * * * *

*ಅಗಾಧವಾದ ಗಣಿಯ ಆಳದಲಿ*
*ಲೋಪವಿಲ್ಲದ ನೈಪುಣ್ಯತೆಯ*
*ತನ್ನ ಉಜ್ವಲ ಸಂಕಲ್ಪದ ನಿಧಿಯನ್ನು*
*ಆತನು ಅಡಗಿಸಿರುತ್ತಾನೆ ಮತ್ತು*
*ತನ್ನ ಪರಮಾಧಿಕಾರದ ಚಿತ್ತಕ್ಕನುಸಾರವಾಗಿ*
*ಕಾರ್ಯಗತಗೊಳಿಸುತ್ತಾನೆ.*

*ಆತನ ಉದ್ದೇಶವು*
*ಶೀಘ್ರದಲ್ಲಿಯೇ ಪರಿಣಮಿಸುತ್ತದೆ*
*ಪ್ರತಿ ಘಳಿಗೆಯಲ್ಲಿ*
*ಪ್ರಕಟವಾಗುತ್ತದೆ*
*ಮೊಗ್ಗು ಕಹಿಯಾಗಿದ್ದರೇನು*
*ಹೂವು ಸಿಹಿಯಾಗಿರುತ್ತದೆ*

*ಕುರುಡು ನಂಬಿಕೆಯು*
*ಖಂಡಿತಾ ವಿಹಿತ*
*ಆತನ ಕೆಲಸವನ್ನು*
*ಪರಿಶೀಲಿಸುವುದು ವ್ಯರ್ಥ*
*ದೇವರು ತನಗೆ ತಾನೇ ನಿರೂಪಣಕಾರ*
*ಆತನೇ ಅದನು ಸರಳಗೊಳಿಸುವನು*